ಸಾಂಬಿಹಿಯು

ಸು. ರಂ. ಎಕ್ಕುಂಡಿ ಸ್ಮರಣೆ



ಸಂಚಯ

ಸಾಂಸ್ಕೃತಿಕ ಸಂಕಲನ
ದ್ವೈಮಾಸಿಕ ಅಕ್ಟೋಬರ್–ನವೆಂಬರ್ 1995

ಸಂಪುಟ : 7
ಸಂಚಿಕೆ : 6


ಪ್ರಕಟಣೆ : ಸಂಚಯ ಬಳಗ

ಸಂಪಾದಕರು :

ಡಿ. ವಿ. ಪ್ರಹ್ಲಾದ್
ರವಿಕುಮಾರ ಕಾಶಿ
ಎನ್. ಎಸ್. ಶ್ರೀಧರಮೂರ್ತಿ

ಮುಖಚಿತ್ರ : ಮಧ್ಯಪ್ರದೇಶದ ಜಾನಪದ 'ಪ್ರಾಣಿ' ಚಿತ್ರ
ಎಕ್ಕುಂಡಿಯವರ ರೇಖಾಚಿತ್ರ : ಎಂ. ಎಸ್. ಮೂರ್ತಿ
ಕೃಪೆ : ಲಂಕೇಶ್ ಪತ್ರಿಕೆ

ಸಂಪರ್ಕ ವಿಳಾಸ :
ನಂ. 24/ಡಿ 17ನೇ ಮುಖ್ಯ ರಸ್ತೆ, ಮುನೇಶ್ವರ ಬ್ಲಾಕ್
ಜಿ.ಇ.ಎಫ್. ಅಂಚೆ, ಬೆಂಗಳೂರು–560 026
ಫೋನ್ : 600386



ನನ್ನ ಕಾವ್ಯವು ಉಳುವ ಕೈಗಳನ್ನೂ
ಪ್ರಾರ್ಥಿಸುವ ಕೈಗಳನ್ನು ಕುರಿತು ಹಾಡುತ್ತದೆ ಅದು
ಕೊರಗುವ ಹೃದಯಗಳನ್ನು ಕಂಬನಿ ತುಂಬಿದ
ಕಣ್ಣುಗಳನ್ನು ಕುರಿತು ಹೇಳುತ್ತದೆ.

—ಸು. ರಂ. ಎಕ್ಕುಂಡಿ

ನಿಮ್ಮೊಡನೆ

ಪ್ರಿಯ ಓದುಗರೆ,

ಒಮ್ಮೊಮ್ಮೆ ಪತ್ರಿಕೆಗಳಿಗೂ ಉತ್ಸಾಹ ಕುಗ್ಗುತ್ತದೆ. ಪತ್ರಿಕೆಯ ನಡಿಗೆ ಜೀವಂತ ಪ್ರಕ್ರಿಯೆಯಾದದ್ದರಿಂದ ಉತ್ಸಾಹ ಒಮ್ಮೊಮ್ಮೆ ಬೂದಿ ಮುಚ್ಚಿದ ಕೆಂಡದ ಹಾಗೆ. ಮತ್ತೆ ಮತ್ತೆ ಸಂಚಯವನ್ನು ತಡವಾಗಿ ನಿಮ್ಮ ಕೈಗಿಡುವಾಗ ಎಂಥದ್ದೋ ಒಂದು ಅಳುಕು ಕಾಡುತ್ತದೆ. ಸಂಚಿಕೆಯೊಂದರ ಎಲ್ಲಾ ಪುಟಗಳೂ ನಮಗೆ ಸವಾಲು: ಅವುಗಳಷ್ಟನ್ನೂ ಯಾವುದರಿಂದ ಹೇಗೆ ತುಂಬಿಸಬೇಕೆನ್ನುವುದು ಒಂದು ಸೃಜನಶೀಲ ಸಾಹಸ, ಇದನ್ನ ಸಾಹಸ ಎಂದು ಗುರುತಿಸಿದ್ದು ಏಕೆಂದರೆ ಸತ್ವಯುತವಾದದ್ದನ್ನ ಪುಟಗಳ ಮಿತಿಯ ಜೊತೆಗೆ ಸಮಯದ ಚೌಕಟ್ಟಿನೊಳಗೇ ಕೊಡಲು ಅದೊಂದು ಸಾಹಸವೆ, ಇಷ್ಟರ ಮಧ್ಯೆ ಹೊಳೆದದ್ದು ತಾರೆ ಉಳಿದದ್ದು ಆಕಾಶವಾಗುವುದೇ ಹೆಚ್ಚು.

ಈ ಸಂಚಿಕೆಯ ಬಹುಪಾಲು ಪುಟಗಳು ಎಕ್ಕುಂಡಿಯವರನ್ನ ಕುರಿತ ಒಂದು ಕೊಲಾಜ್ ಆಗಿ ರೂಪುಗೊಂಡಿದೆ. ಈವರೆಗೆ ಹೆಚ್ಚು ಚರ್ಚೆಯಾಗದ ಎಕ್ಕುಂಡಿಯವರನ್ನ ಕುರಿತು ಚರ್ಚಿಸುವ ಅವರ ನೆನಪಿಗೊಂದು ರೂಪುಕೊಡುವ ಕೆಲಸ ಮಾಡಿದೆ. ಸಂಚಯದ ಒತ್ತಾಯಕ್ಕೆ ಒಪ್ಪಿ ತಮ್ಮ ಬರಹಗಳನ್ನು ನೀಡಿದ ಎಲ್ಲ ಲೇಖಕರಿಗೂ ನಾವು ಕೃತಜ್ಞರು.

ಸಂಪುಟ ಏಳರ ಕೊನೆಯ ಸಂಚಿಕೆ ಇದು. ಒಟ್ಟಾರೆ ಆಗಸ್ಟ್ 94 ರಿಂದ ಅಕ್ಟೋಬರ್ 95ರವರೆಗೂ ಹೊರಬಂದಿರುವ ಆರು ಸಂಚಿಕೆಗಳೂ ನಿಮಗೆ ಉಪಯುಕ್ತವಾಗಿ ನಮ್ಮ ಸುತ್ತಲ ಏರಿಳಿತಗಳಿಗೆ ಸ್ಪಂದಿಸಿದೆ. ಬಿಡಿ ಕವಿತೆಗಳ 'ಅನಾವರಣ', ಸುಧಾಶರ್ಮ ಅವರ 'ಏಕಾಂತದ ಸ್ವಗತ' ಹಾಗೂ ಮುಖಪುಟದ ವಸ್ತು 'ಪ್ರಾಣಿ ಚಿತ್ರಣ' ಈ ಸಂಚಿಕೆಗಳ ವಿಶೇಷತೆಯಾಗಿದೆ;

'ಕನ್ನಡದ ಸಣ್ಣ ಕಥೆಗಳ' ಕುರಿತು ಮತ್ತು 'ಗ್ರಾಫಿಕ್' ವಿಶೇಷ ಸಂಚಿಕೆಗಳು ಈ ಸಂಪುಟದ ಹೆಜ್ಜೆ ಗುರುತುಗಳು, ಮತ್ತೊಮ್ಮೆ 'ಸಂಚಯ' ನಮ್ಮೆಲ್ಲರ ಅಭಿವ್ಯಕ್ತಿಗೆ ಸ್ಪಂದನಕ್ಕೆ ಭೂಮಿಕೆಯಾಗುವತ್ತ, ಹಳೆಯ ಚಂದಾದಾರರ ನವೀಕರಣ ಸಂಬಂಧ ಗಟ್ಟಿಗೊಳಿಸುವತ್ತ, ಹೊಸ ಚಂದಾದಾರರ ಸ್ವಾಗತ ಮತ್ತಷ್ಟು ಹೊಸ ಮನಸ್ಸುಗಳ ಸಂಚಯವಾಗುತ್ತಾ ನಿರಂತರವಾಗಲೆಂದು ಆಶಿಸುವೆ.

ಸಂಚಯದ ಪರವಾಗಿ

ಡಿ. ವಿ. ಪ್ರಹ್ಲಾದ್

ಸು. ರಂ. ಎಕ್ಕುಂಡಿ ; ಕೆಲವು ನೆನಪುಗಳು

ಇಂಗ್ಲೀಷ್ ಮೂಲ : **ಡಾ|| ಬಿ. ಸಿ. ರಾಮಚಂದ್ರ ಶರ್ಮ**

ನಾನೀಗ ಎಕ್ಕುಂಡಿಯವರ ಸಾವಿನ ಛಾಯೆಯಲ್ಲಿರುವೆ ಅನಿವಾರ್ಯವಾಗಿ ನನ್ನ ಮನಸ್ಸು ನಮ್ಮ ಮೊದಲ ಭೇಟಿಯತ್ತ ಹಿಂದೋಡುತ್ತದೆ. ನನ್ನ ಮೊದಲ ಕವನ ಸಂಕಲನ 'ಹೃದಯಗೀತ'ದ ಹಸ್ತಪ್ರತಿಯನ್ನ ಬಗಲಲ್ಲಿಟ್ಟುಕೊಂಡು, ನನ್ನೊಬ್ಬ ವ್ಯಾಪಾರಿ ಮಿತ್ರ ಅದರ ಪ್ರಕಟಣೆಗೆ ಹಣ ಹೂಡಲು ಮುಂದಾಗಿದ್ದರಿಂದ ಉತ್ಸುಕನಾಗಿದ್ದೆ. ಆ ಹೊತ್ತಿಗೆ ನನ್ನ ಕೆಲವು ಕವಿತೆಗಳು ಪತ್ರಿಕೆಗಳಲ್ಲಿ ಬೆಳಕು ಕಂಡಿದ್ದರೂ ಯಾರಾದರೂ ಒಂದಿಬ್ಬರು ಹೆಸರಾಂತ ಲೇಖಕರು ನಾನೂ ಬರೆದದ್ದು ಕವಿತೆಗಳೇ ಎಂದು ಪ್ರಮಾಣಿಸಬೇಕು ಎನ್ನಿಸುತ್ತಿತ್ತು. ಆ ಕಾಲದ ಯುವಕರು ಒಂದು ರೀತಿಯ ಮೆಚ್ಚುಗೆ ಆರಾಧನಾ ಭಾವದಿಂದ ಉಲ್ಲೇಖಿಸುತ್ತಿದ್ದ ಎರಡು ಹೆಸರುಗಳೆಂದರೆ ಗೋಪಾಲಕೃಷ್ಣ ಅಡಿಗ ಮತ್ತು ಸುಬ್ಬಣ್ಣ ರಂಗನಾಥ ಎಕ್ಕುಂಡಿ. ಪ್ರಜಾವಾಣಿಯಲ್ಲಿದ್ದ ಗೆಳೆಯ ವೈ. ಎನ್. ಕೃಷ್ಣಮೂರ್ತಿಯ ಸಲಹೆಯಿಂದ ನಾನು ಇವರಿಬ್ಬರ ಅಭಿಪ್ರಾಯಕ್ಕಾಗಿ ಬರೆದದ್ದಕ್ಕೆ, ಎಕ್ಕುಂಡಿಯವರು ತಕ್ಷಣವೇ ಉತ್ತರ ಬರೆದಾಗಿನ ನನ್ನ ಉದ್ವಿಗ್ನತೆ ಈಗಲೂ ನೆನಪಾಗುತ್ತದೆ. ಅಡಿಗರಾದರೋ ಸದಾ ಎಚ್ಚರಿಕೆಯ ವ್ಯಕ್ತಿ–ಕವಿ, ಉತ್ತರಿಸಲು ತಮ್ಮದೇ ಸಮಯ ತೆಗೆದುಕೊಂಡರು. ಅದರಲ್ಲೂ ಒಂದು ಮಾತು ಸೇರಿಸಿದ್ದರು. ನನ್ನ ಬರಹ ಸರಿಕಂಡರೆ ಮಾತ್ರಾ ಬರೆಯುವುದಾಗಿ, ಅವು ಅಯೋಗ್ಯವಾದದ್ದು ಎನ್ನಿಸಿದರೆ ನೇರವಾಗಿ ಹಾಗೇ ಬರೆಯುತ್ತೇನೆಂದರು.

ಇದು ನಡೆದದ್ದು 1951–52ರ ಸುಮಾರಿಗೆ, ಆಗ ನಾನಿನ್ನೂ ಇಪ್ಪತ್ತಾರರ ಯುವಕ, ನನ್ನ ಕಾವ್ಯದ ಬಗ್ಗೆ ನನಗಿದ್ದ ಅತೀವ ವಿಶ್ವಾಸದಿಂದ ಅವರ ಅಭಿಪ್ರಾಯ ಏನೇ ಆಗಿದ್ದರೂ ನಾನು ನನ್ನ ಕಾವ್ಯ ಬರಹವನ್ನು ಮುಂದುವರೆಸುವುದಾಗಿ ಬರೆದೆ, ಅದು ಅವರನ್ನ ತಟ್ಟಿ ಎಬ್ಬಿಸಿರಬೇಕು; ಕೆಲವೇ ದಿನಗಳಲ್ಲಿ ಅವರ ಬೆನ್ನುಡಿ ಬಂದಿತ್ತು.

ಈ ಘಟನೆಯನ್ನು ಹೇಳುವಲ್ಲಿ ನನಗೊಂದು ಉದ್ದೇಶವಿದೆ. ಆಗಿನ ಈ ಇಬ್ಬರು ಕವಿಗಳ ವ್ಯತ್ಯಾಸಗಳನ್ನು ಬೆಳಕಿಗೊಡ್ಡುವುದು. ನನ್ನ ಕವಿತೆಗಳನ್ನ ವಿಶ್ಲೇಷಿಸಿದ ಅವರಿಬ್ಬರ ದೃಷ್ಟಿಕೋನಗಳು ಪರಸ್ಪರ ತದ್ವಿರುದ್ಧ ನೆಲೆಯವೇ ಆಗಿವೆ. ಆಗ ಪ್ರಗತಿಶೀಲ ಚಳುವಳಿಯ ಕಾಲ, ಜೊತೆಗೆ ಗಾಂಧಿ ಹತ್ಯೆಯ ನಂತರದ ದಿನಗಳಲ್ಲಿ

ಸೂಕ್ಷ್ಮ ಯುವ ಮನಸ್ಸುಗಳಲ್ಲಿ ದೇಶ ಗಳಿಸಿಕೊಂಡ ಸ್ವಾತಂತ್ರ್ಯದ ನಂತರದ, ಸುಂದರ ಕನಸುಗಳ ಸರ್ವನಾಶದ ಪರಿಹಾಸ್ಯ ಕುರಿತು ಮರುಚಿಂತನೆ ನಡೆಯುತ್ತಿತ್ತು. ನಾನು ಮತ್ತು ಎಕ್ಕುಂಡಿಯವರಿಗಿಂತ ಅಡಿಗರು ಸುಮಾರು ಹತ್ತು ವರ್ಷ ಹಿರಿಯರು, ಅವರಿಗೆ ತಾವು ಬರೆದ ರೊಮ್ಯಾಂಟಿಕ್ ಕಾವ್ಯ ಮನೋಧರ್ಮದ ದಿಕ್ಕಿನಿಂದ ಬದಲಾಗಿ ಅನುಭವದ ಅರ್ಥಪೂರ್ಣತೆಯ ಶೋಧನೆ ಮುಖ್ಯವಾಗಿ ಅನುಭವದ ಶುದ್ಧರೂಪದ ಅಭಿವ್ಯಕ್ತಿ ಮುಖ್ಯವಾಯ್ತು.

ಅಡಿಗರು ನನ್ನ ಕಾವ್ಯದಲ್ಲಿದ್ದ ನವ್ಯಕಾವ್ಯದ ಗುಣಲಕ್ಷಣಗಳನ್ನ ಗುರುತಿಸಿ ಮೆಚ್ಚಿಕೊಂಡರೆ, ಎಕ್ಕುಂಡಿಯವರು ಆ ಕವಿತೆಗಳಲ್ಲಿದ್ದ ಪ್ರಗತಿಶೀಲ ಮನೋಭಾವ ಶೋಷಣೆಗೆ ಒಳಗಾದವರ ಬಗೆಗಿದ್ದ ಅನುಕಂಪಕ್ಕೆ ಮೆಚ್ಚಿಕೊಂಡರು. ಮಾಯ್‌ಕೋವಸ್ಕಿ ಮತ್ತು ಹಿಕ್‌ಮತ್ ಮುಂತಾದ ಎಡಪಂಥೀಯ ಕವಿಗಳ ಅನುವಾದ ಮೆಚ್ಚಿಕೊಂಡಿದ್ದರು. ನಿರಂಜನರ ಹಾಗೆ ನನ್ನ ಬಗೆಗೆ ಅತೀವ ಅಭಿಮಾನ ಇರಿಸಿಕೊಂಡಿದ್ದ ಎಕ್ಕುಂಡಿಯವರಿಗೂ ನಾನೂ ಅಡಿಗರ ಜೊತೆಗೆ ನವೋದಯದ ಬಣ್ಣಬಣ್ಣದ ಕನಸುಗಳ ದಿಕ್ಕಿಗೆ ಬೆನ್ನು ತಿರುಗಿಸಿದಾಗ ಭ್ರಮನಿರಸನವಾಗಿರಬೇಕು. ಮೆದುಮನಸ್ಸಿನ ಸಜ್ಜನರಾದ ಎಕ್ಕುಂಡಿ ಎಂದಿಗೂ ಅದನ್ನ ತೋರಗೊಡಲಿಲ್ಲ, ಕೊನೆಯವರೆಗೂ ಅವರೊಬ್ಬರೇ ತಾವು ನಂಬಿದ ಎಡಪಂಥೀಯ ನಿಲುವುಗಳಿಗೆ ಬದ್ಧರಾಗಿದ್ದರು.

ರಾಣಿಬೆನ್ನೂರಿನಲ್ಲಿ 1923ರಲ್ಲಿ ಮಾಧ್ವ ಬ್ರಾಹ್ಮಣರ ಮನೆಯಲ್ಲಿ ಹುಟ್ಟಿದ ಎಕ್ಕುಂಡಿ, ಕಿರಿವಯಸ್ಸಲ್ಲೇ ತಂದೆಯನ್ನ ಕಳಕೊಂಡರು. ವ್ಯಾಸಂಗಶೀಲ ಗಂಭೀರ ಪ್ರವೃತ್ತಿಯ ಎಕ್ಕುಂಡಿ ಮುಂದೆ ಕಾಲೇಜಿಗೆ ಸಾಂಗ್ಲಿಗೆ ಹೋದರು. ಅಲ್ಲಿದ್ದ ಗೋಕಾಕ್ ಮತ್ತು ಮುಗಳಿಯವರ ಪ್ರಭಾವಕ್ಕೆ ಒಳಗಾದರು. ಅವರ ಸಮಕಾಲೀನರಾದ ಗಂಗಾಧರ ಚಿತ್ತಾಲರ ಹಾಗೆ ಸೆಕೆಂಡರಿ ಶಾಲೆಯ ದಿನಗಳಿಂದಲೇ ತಮ್ಮ ಕವಿತೆ ಬರೆಯುವ ಪ್ರತಿಭೆಯಿಂದ ಗಮನ ಸೆಳೆದರು.

ಸಂಪ್ರದಾಯಸ್ಥ ಮನೆತನದಿಂದ ಬೆಳೆದು ಬಂದ ಎಕ್ಕುಂಡಿ ಒಂದು ರೀತಿಯ ಧಾರ್ಮಿಕತೆಯ ಗೆರೆಕೊರೆದ ಹಾಗೆ ಭೌತಿಕ ಯಶಸ್ಸುಗಳಿಂದ ದೂರ ಉಳಿದರು, ತಮ್ಮ ಯೂನಿವರ್ಸಿಟಿ ಶಿಕ್ಷಣ ಮುಗಿದ ನಂತರ ಕಾರವಾರ ಜಿಲ್ಲೆಯ ಬಂಕಿಕೊಡ್ಲದಲ್ಲೇ ಶಿಕ್ಷಕರಾದರು. ಗಮನಾರ್ಹವೆಂದರೆ ಗೋಕಾಕ್ ಅಂಥವರು ಅವರನ್ನ ಅಲ್ಲಿಂದ ಹೊರತರಲು ಮಾಡಿದ ಪ್ರಯತ್ನಗಳನ್ನು ಎಕ್ಕುಂಡಿಯವರು ಪ್ರತಿರೋಧಿಸಿದರು. ಧಾರವಾಡದಲ್ಲಿ ಕಾಲೇಜು ಮಟ್ಟದಲ್ಲಿ ಪಾಠ ಹೇಳುವ ವೃತ್ತಿಗೆ ಬೆನ್ನು ತೋರಿಸಿ ಬಂಕಿಕೊಡ್ಲದಲ್ಲೇ ಮೂವತ್ತೈದು ವರ್ಷಗಳು ಉಳಿದರು. ನಿವೃತ್ತಿಯ ನಂತರವೂ ಅವರಿಗೆ ಬೆಂಗಳೂರಿನಲ್ಲಿ ನೆಲೆಸಲು ಒಲ್ಲದ ಮನಸ್ಸನ್ನ ನಾನು ಕಲ್ಪಿಸಿಕೊಳ್ಳಬಲ್ಲೆ.

ಕುಮಟಾ ಸಾಹಿತ್ಯ ಸಮ್ಮೇಳನದ ಸಂದರ್ಭ, ತ.ರಾ.ಸು. ಮತ್ತು ವೈ. ಎನ್. ಕೃಷ್ಣಮೂರ್ತಿಯ ಜೊತೆಗೆ ಬಂಕಿಕೊಡ್ಲದಲ್ಲೇ ನಾನು ಎಕ್ಕುಂಡಿ ಅವರನ್ನು ಮೊದಲ ಸಲ ಭೇಟಿಯಾಗಿದ್ದೆ. ಈಗಲೂ ಅಲ್ಲಿನ ಹಸಿರು ಪರಿಸರ ಸುತ್ತಲಿನ ಬೆಟ್ಟಗಳು ಅಲ್ಲಿನ ಆಶ್ರಮದ ಹಾಗಿದ್ದ ವಾತಾವರಣ ನೆನಪಾಗುತ್ತದೆ. ಅಲ್ಲಿದ್ದ ಎಕ್ಕುಂಡಿ ಬದುಕು ತಮ್ಮನ್ನ ಇಟ್ಟಹಾಗೆ ಅತೀವವಾದ ಸಂತೃಪ್ತಿಯಿಂದ ಯಾವುದೇ ಬದಲಾವಣೆಗಳನ್ನು ಆಶಿಸದೇ ಇದ್ದರು.

ನಮ್ಮಗಳ ಮನಸ್ಸಿನಲ್ಲಿದ್ದ ರೊಮ್ಯಾಂಟಿಕ್ ಕವಿಯೊಬ್ಬನ ಚಿತ್ರಕ್ಕೆ ಎಕ್ಕುಂಡಿ ಸರಿಯಾಗಿ ಹೋಲುತ್ತಿದ್ದರು. ಬದುಕು ತಮಗೆ ಕೊಟ್ಟಿದ್ದರ ಬಗೆಗಿನ ತೃಪ್ತಿಯಿಂದ ತನ್ನದೇ ಸಂತೋಷಕ್ಕೆ ತನ್ನಪಾಡಿಗೆ ತಾನು ಹಾಡಿಕೊಳ್ಳುವ ಹಕ್ಕಿಯ ಹಾಗೆ ಕವಿತೆಯ ಬಗೆಗಿನ ಯಾವುದೇ ಚರ್ಚೆ ವಿವಾದಗಳಲ್ಲಿ ಒಳಗೊಳ್ಳದೇ ಉಳಿದಿದ್ದರು. ಅವರ ಈ ಏಕಾಂತದಲ್ಲಿ–ಮಾನವೀಯತೆ ತುಂಬಿತ್ತು. ಮನುಷ್ಯ ಮನುಷ್ಯನ ದೌರ್ಜನ್ಯ ಹೊರಿಸಿದ ಹಿಂಸೆ, ಅನುಭವಿಸುವ ನೋವುಗಳಲ್ಲಿ ಮನುಷ್ಯರ ನಡುವೆ ಶಾಂತಿ ಮತ್ತು ಸೋದರತ್ವದ ಕನಸು ಕಾಣುತ್ತಿದ್ದರು. ಅವರು ತೆಳುವಾಗಿ ನೇಯ್ದು ನಿರ್ಮಿಸುತ್ತಿದ್ದ ಪುರಾಣ ಪಾತ್ರಗಳ ಮಾಂತ್ರಿಕ ಚಿತ್ರಗಳಿಗೆ ಪ್ರೇರಣೆ ಎಲ್ಲಿಂದ ಒದಗಿ ಬರುತ್ತಿತ್ತೆಂದು ಊಹಿಸಬಲ್ಲೆ. ಅದು ಅವರು ಬದುಕಿನ ಸಾರ್ಥಕ್ಯ ಪಡೆದ ಬಂಕಿಕೊಡ್ಲವನ್ನು ಶಾಶ್ವತಗೊಳಿಸುವ ರೀತಿಯಾಗಿತ್ತು.

ಈ ಮಧ್ಯದಲ್ಲಿ ಅವರು ತಮ್ಮ ದಿಕ್ಕು ಬದಲಾಯಿಸಿ ಮಧ್ವಾಚಾರ್ಯರ ಬಗ್ಗೆ ಬರೆಯುತೊಡಗಿದಾಗ ನಮ್ಮ ಪೀಳಿಗೆಯ ಎಲ್ಲರ ಜೊತೆ ನಾನೂ ಅಚ್ಚರಿಗೊಂಡಿದ್ದೆ. ಪರಸ್ಪರ ವಿರುದ್ಧ ಧ್ರುವಗಳಾದ ಎಲ್ಲೂ ಸಂಧಿಸಲಾಗದ ಮಾರ್ಕ್ಸ್ ಮತ್ತು ಮಧ್ವರನ್ನು ತಮ್ಮ ಹೆಗಲಲ್ಲಿ ಹೊತ್ತ ಅವರ ಉತ್ತರ ಸಿದ್ಧವಿತ್ತು. ಎಕ್ಕುಂಡಿ ಅವರಿಬ್ಬರ ಕನಸುಗಳಲ್ಲಿನ ಸಾಮ್ಯತೆ ಗುರುತಿಸುತ್ತಿದ್ದರು. ಮಾರ್ಕ್ಸ್‌ನ ಮನುಷ್ಯ ತನ್ನದೆನ್ನುವ ತುಂಡು ನೆಲದ ಒಡೆತನದ ಕನಸು ಕಂಡರೆ, ಮಧ್ವರದ್ದು ಆಕಾಶದಲ್ಲೊಂದು ತುಂಡಿನ (ಆಧ್ಯಾತ್ಮದ) ಒಡೆತನದ ಹಕ್ಕು ಪ್ರತಿಪಾದನೆ; ಸರಳವಾದದ್ದೇ ಆದರೂ ಈ ಬಗ್ಗೆ ಅನೇಕರಿಗೆ ಅನುಮಾನಗಳಿದ್ದವು. ಎಕ್ಕುಂಡಿ ಮಾತ್ರ ಇದನ್ನ ಬಲವಾಗಿ ನಂಬಿದ್ದರು.

ಎಕ್ಕುಂಡಿ ಶಬ್ದಗಳ ಅನಿರೀಕ್ಷಿತ ಪ್ರಾಸಗಳ–ಒಡೆತನದ ವರ ಪಡೆದಿದ್ದರು. ಯಾವುದೇ ಸಂಶಯಗಳಿಗೆ ಒಳಗಾಗದೆ ಅವುಗಳನ್ನು ತಮ್ಮ ನವುರಾದ ವಸ್ತು ನಿರೂಪಣೆಗೆ ಬಳಸುತ್ತಿದ್ದರು. ಅಡಿಗರ ಕಾವ್ಯದಲ್ಲಿರುವ ಹಾಗಿನ ಬಿಗಿಯಾದ ಉದ್ವೇಗ (Tension) ಎಕ್ಕುಂಡಿ ತಮ್ಮ ಕಾವ್ಯದಲ್ಲಿ ತರುವುದಿಲ್ಲ. ಮಧ್ವ ಮತ್ತು ಮಾರ್ಕ್ಸ್‌ರ ದ್ವಂದ್ವದ ಬಿಕ್ಕಟ್ಟು ಕೂಡಾ ಮುಖಾಮುಖಿಗೆ ಒಳಗಾಗದೆ ಒಟ್ಟಾಗಿದ್ದು ಶಾಂತ ವಾಗಿರುತ್ತದೆ. ಪುರಾಣ ಪಾತ್ರಗಳೂ ಕೂಡಾ ವಿರಳವಾಗಿ ಸಮಕಾಲೀನ ನೆಲೆಯಲ್ಲಿ ನಿರ್ಧರಿಸಲು ಸಂಗತವಾಗದೆ ಬಂದು ಹೋಗುತ್ತವೆ.

ಮುಖ್ಯವಾಗಿ ಸೌಮ್ಯ ಸ್ವಭಾವದ, ಸಜ್ಜನಿಕೆಯ ಎಕ್ಕುಂಡಿಯವರು ತಾವು ನಿರ್ಮಿಸಿಕೊಂಡ ಕಾವ್ಯ ಪ್ರಪಂಚವನ್ನು ಅಷ್ಟೇ ಸೌಮ್ಯತೆ ಸಜ್ಜನಿಕೆಗಳಿಂದ ನಿಭಾಯಿಸಿಕೊಂಡು ಬಂದರು. ಅಂಥ ಕಾವ್ಯ ಪ್ರಪಂಚವನ್ನು ನಮಗೆ ಕೊಟ್ಟ ಅವರಿಗೆ ನನ್ನ ಕಾಣಿಕೆ ಈ ಬರಹ.

ಸು. ರಂ. ಎಕ್ಕುಂಡಿ ಜೀವನ-ಸಾಹಿತ್ಯ ವಿವರ

ಜನನ : 20 ಜನವರಿ 1923 ರಾಣೆಬೆನ್ನೂರಿನಲ್ಲಿ

ನಿಧನ : ಆಗಸ್ಟ್ 20 1995 ಬೆಂಗಳೂರಿನಲ್ಲಿ

ಕಾವ್ಯ : ಸಂತಾನ (1953)
ಹಾವಾಡಿಗರ ಹುಡುಗ (1967)
ಮತ್ಸ್ಯಗಂಧಿ (1975)
ಬೆಳ್ಳಕ್ಕಿಗಳು (1982)
ಬಕುಲದ ಹೂವುಗಳು (1991)

ಅನುವಾದ : ಪ್ರತಿಬಿಂಬಗಳು (1978)

ಸಣ್ಣ ಕಥೆಗಳು : ನೆರಳು

ವಿಮರ್ಶೆ : ಪು. ತಿ. ನರಸಿಂಹಾಚಾರ್

ಪ್ರಶಸ್ತಿಗಳು : ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ—1970
ಉತ್ತಮ ಶಿಕ್ಷಕ ಪ್ರಶಸ್ತಿ—1974
ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ—1978
ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ—1992

ಹೊಸ ಆಕಾರಗಳಲ್ಲಿ ಕಥನ

ಇಂಗ್ಲೀಷ್ ಮೂಲ : **ಹೆಚ್. ಎಸ್. ಶಿವಪ್ರಕಾಶ್**

'ಬಕುಲದ ಹೂವುಗಳು' ಪುಸ್ತಕ ಪರಿಚಯ

'ಬಕುಲದ ಹೂವುಗಳು' ಸು. ರಂ. ಎಕ್ಕುಂಡಿಯವರ ಹಲವು ದಶಕಗಳ ಕಾವ್ಯ ಪ್ರಯೋಗದ ಉತ್ತಮ ರಚನೆಯಾಗಿದೆ. ಈ ಸಂಕಲನದಲ್ಲಿ ಅನೇಕ ವರ್ಷಗಳಿಂದ ವಿಕಾಸಗೊಳ್ಳತೊಡಗಿದ್ದ ಕಥನ ಕವನಗಳು ಒಂದು ನಿಶ್ಚಿತ ರೂಪು ಪಡೆದಿವೆ. ಈಗಿನ ಅವರ ಶೈಲಿಯಲ್ಲಿ ಅಭಿವ್ಯಕ್ತಿಯ ಮಿತವ್ಯಯ ಮತ್ತು ಸಂಕ್ಷಿಪ್ತತೆ ಲಭಿಸಿವೆ.

ಈ ಸಂಕಲದ 35 ಕವಿತೆಗಳಲ್ಲಿ 33 ಕಥನ ಕವನಗಳಿವೆ. ಎಂದಿನ ಹಾಗೇ ಅವುಗಳ ವಸ್ತುವನ್ನ ಎಕ್ಕುಂಡಿಯವರು ತಾವು ತಮ್ಮ ಬದುಕಿನ ಬಹುಪಾಲು ದಿನಗಳನ್ನು ಕಳೆದ ಉತ್ತರ ಕನ್ನಡ ಜಿಲ್ಲೆಯ ಶಬ್ದ ಹಾಗೂ ಬಣ್ಣಗಳಿಂದ ನಿರೂಪಿಸಿದ್ದಾರೆ. ಅದು ಇತಿಹಾಸವೇ ಆಗಿರಲಿ ಅಥವಾ ವರ್ತಮಾನದ ನಿರೂಪಣೆಯೇ ಆಗಿರಲಿ.

ಬಹಳ ಕಾಲದಿಂದಲೂ ಕನ್ನಡದಲ್ಲಿ ಕಥನ ಕವನಶೈಲಿ ಇದ್ದರೂ ಎಕ್ಕುಂಡಿಯವರು ಪರಿಪೂರ್ಣತೆ ಸಾಧಿಸಿದ ಕಥನ ಕವನದ ಶೈಲಿಯನ್ನ ಇನ್ನಷ್ಟು ಸಮೀಪದಿಂದ ಸೂಕ್ಷ್ಮವಾಗಿ ನೋಡುವ ಅಗತ್ಯವಿದೆ. ಈ ಶತಮಾನದ ಉತ್ತಮ ಕವಿಗಳಾದ ಬೇಂದ್ರೆ, ಅಡಿಗ, ನರಸಿಂಹಸ್ವಾಮಿಗಳಂಥವರು ಕಥನ ಶೈಲಿಯ ಪ್ರಯೋಗ ನಡೆಸಿದ್ದಾರೆ. ಆದರೆ ಎಕ್ಕುಂಡಿ ಇವರೆಲ್ಲರಿಗಿಂತಲೂ ಭಿನ್ನವಾಗುತ್ತಾರೆ. ಬೇಂದ್ರೆಯವರ ಭಾವಗೀತಾತ್ಮತೆಯ ತೀವ್ರತೆಯಾಗಲೀ, ಅಡಿಗರ ರಚನೆಯ ಸಂಕೀರ್ಣತೆಯಾಗಲೀ ಅಥವಾ ನರಸಿಂಹಸ್ವಾಮಿಯವರ ನಗರ ಕೇಂದ್ರಿತ ಸೂಕ್ಷ್ಮತೆಗಳಾಗಲೀ ಎಕ್ಕುಂಡಿಯವರ ಕಾವ್ಯದಲ್ಲಿ ಇಲ್ಲ. ಈ ಎಲ್ಲ ಕವಿಗಳೂ ಕಥೆಯನ್ನ ಒಳಗೊಂಡಿದ್ದು ಅದನ್ನ ನಿರಾಕರಿಸುವ ಸಲುವಾಗಿಯೇ. ಬೇಂದ್ರೆಯವರಿಗೆ ಕಥೆ ಒಂದು ನೆಪವಾಗಿ ಅಲಂಕಾರಿಕ ಸ್ವರ ಲಾಲಿತ್ಯಕ್ಕೆ ಸಹಾಯಕವಾಗುತ್ತದೆ. ಅಡಿಗರಿಗೆ ಅದು ಅನುಭವದ ಹಾಗೂ ಅದರ ಸಾಧ್ಯತೆಗಳ ಶೋಧನೆಯ ಮಾಧ್ಯಮವಾಗುತ್ತದೆ. ನರಸಿಂಹಸ್ವಾಮಿಯವರ ಕಾವ್ಯದಲ್ಲಿನ ಕಥೆ ತಮ್ಮಷ್ಟಕ್ಕೇ ಆಕರ್ಷಕವಾಗಿಲ್ಲದೆ ಅದು ಕವಿಯ ರಚನಾ ಕೌಶಲ್ಯದಿಂದ ಶಕ್ತವಾದವುಗಳಾಗಿವೆ. ಎಕ್ಕುಂಡಿಯವರ ಕಾವ್ಯಕ್ಕೂ ಕಥೆ ಮುಖ್ಯವಾದರೂ ಕವಿತೆಯ ಆಂಶಿಕ ಪರಿಣಾಮ ಕಥೆಯಿಂದಲೇ ಹುಟ್ಟುವಂಥದ್ದು. ಇದರ ಅರ್ಥ ಇವರ ಬರಹ

ಕಾವ್ಯರೂಪದ ಕಥೆಗಳೆಂದೇನಲ್ಲ, ಕೆ. ವಿ. ನಾರಾಯಣ ಅವರು ತಮ್ಮ ಮುನ್ನುಡಿಯಲ್ಲಿ ಸೂಕ್ತವಾಗಿ ಗುರುತಿಸಿರುವ ಹಾಗೆ ಎಕ್ಕುಂಡಿಯವರದ್ದು ಕಥೆಗಳುಳ್ಳ ಕವನವಾಗದೆ ಕಥನ ಉಳ್ಳ ಕವನಗಳಾಗುತ್ತವೆ.

ಅವರ ಕಥನಗಳು ಕಳೆದುಹೋದ ಹಾಗೂ ವರ್ತಮಾನದ ಮಾನವ ಕುಲದ ಶ್ರೇಷ್ಠ ಜೀವಿಗಳ ಶ್ರದ್ಧಾಪೂರ್ವಕ ನೆನಕೆಯಾಗಿದೆ. ಎಕ್ಕುಂಡಿಯವರು ಅಂಥಾ ಉದಾಹರಣೆಗಳನ್ನು ಎಲ್ಲ ಕಡೆಗಳಲ್ಲೂ ಗುರುತಿಸಬಲ್ಲರು. ಪುರಾಣಗಳಲ್ಲಿ ಮಧ್ವಾಚಾರ್ಯ ಅಥವಾ ಕಾರ್ಲ್‌ಮಾರ್ಕ್ಸ್‌ನ ಆತ್ಮ ಚರಿತ್ರೆಯಲ್ಲೂ ಅಥವಾ ತಮ್ಮದೇ ಸುತ್ತಲ ಪರಿಸರದಲ್ಲೂ ಎಕ್ಕುಂಡಿ ಶ್ರೇಷ್ಠ ಜೀವಿಗಳನ್ನು ಕಾಣಬಲ್ಲರು. ಈ ಕಥೆಗಳು ಬೇರೆ ಬೇರೆ ತಾತ್ವಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಗಳಿಂದ ಬಂದದ್ದಾದರೂ ಅವು ಅವರಿಗೆ ತೊಡಕಾಗುವುದಿಲ್ಲ. ಅವರ ಕಾವ್ಯದಲ್ಲಿ ಮಧ್ವ ಮತ್ತು ಮಾರ್ಕ್ಸ್, 'ದ್ವೈತ' ಮತ್ತು ದ್ವಂದ್ವಾತ್ಮಕವಾದ 'ಆದಿಭೌತಿಕವಾದ', ಭಕ್ತಿ ಮತ್ತು ಕ್ರಾಂತಿಗಳು ಘರ್ಷಣೆಗೆ ಒಳಗಾಗುವುದಿಲ್ಲ. ಅಥವಾ ನಮ್ಮ ಅಡಿಗ ಮತ್ತು ಜೊತೆಯವರ ಹಾಗೆ ಎಕ್ಕುಂಡಿ ಇವತ್ತಿನ ವಾಸ್ತವಕ್ಕೂ ಗಂಟು ಹಾಕಲು ಪ್ರಜ್ಞಾಪೂರ್ವಕವಾಗಿ ಯತ್ನಿಸುವುದಿಲ್ಲ. ಇವರ ಕಥೆಗಳು ತಮ್ಮದೇ ನೆಲೆಯಲ್ಲಿ ಭಿನ್ನವಾಗಿದ್ದರೂ ತಮ್ಮ ಕವಿತೆಯ ಕೊನೆಯ ಸಾಲಿನಲ್ಲಿ ಎಕ್ಕುಂಡಿ ಒಂದು ವಿಶ್ವಸಂದೇಶ ನೀಡಿಬಿಡುತ್ತಾರೆ. ಈ ಗೊಂದಲ ಹೆಚ್ಚಿಸುವ ಹಾಗೆ ಎಕ್ಕುಂಡಿ ರೊಮ್ಯಾಂಟಿಕ್ ಕವಿಯ ಹಾಗೆ ಹೂವು ಹಕ್ಕಿಯ ಬಗ್ಗೆ ಬರೆಯಬಲ್ಲರು.

ಎಕ್ಕುಂಡಿಯವರ ಕಾವ್ಯದ ವಿಮರ್ಶೆ ಕೆಲವೊಮ್ಮೆ ಅವರ ಭಿನ್ನತೆ ಹಾಗೂ ಸಾಮರಸ್ಯವಿಲ್ಲದಿರುವಿಕೆಯನ್ನು ಗುರುತಿಸಿದೆ. ಆದರೆ ಅವರ ಕಾವ್ಯದ ಸಮಸ್ಯೆಗಳ ಹತ್ತಿರದ ಒಳನೋಟ ಸಾಧ್ಯವಾಗಿಲ್ಲ. ಎಡಪಂಥೀಯ ಓದುಗರು ಎಕ್ಕುಂಡಿ ತಮ್ಮ ಕವಿಯೆಂದು ಹೆಮ್ಮೆ ಪಟ್ಟರೂ ಶಂಕರ ಮತ್ತು ಮಧ್ವರ ಕುರಿತ ಅವರ ಆಕರ್ಷಣೆಗೆ ಕಸಿವಿಸಿಗೊಳ್ಳುತ್ತಾರೆ. ಇನ್ನೂ ಕೆಲವರು ಅವರ ಕಾವ್ಯದಲ್ಲಿ ಅಂತರ್ಗತವಾಗಿರುವ ವೈರುಧ್ಯವನ್ನು ಮತ್ತು ಅಸಮಗ್ರತೆಯನ್ನು ಅಪಶಕುನದ ಹಾಗೆ ಗುರುತಿಸುತ್ತಾರೆ.

ಎಕ್ಕುಂಡಿಯವರ ಕಾವ್ಯ ನೋವು ಶೋಷಣೆಗಳನ್ನ ಅನುಕಂಪದ ಸಹಭೋಗದ ಮೂಲಕ ಮೀರುವ ವಿಶಿಷ್ಟ ಕ್ಷಣಗಳನ್ನ ದಾಖಲಿಸುತ್ತದೆ. 'ಪ್ರವಾದಿಯ ನಿಲುವಂಗಿ' ಕವಿತೆಯು ಪ್ರವಾದಿಯೊಬ್ಬನ ಎಲೆ ಇಲ್ಲದ ಹೂವಿಲ್ಲದ ಉರಿಜಾಲಿಗಿಡ ತಬ್ಬುವ ಆಕರ್ಷಣೆಯು ಉಳ್ಳವರ ನಡುವಿನ ಇಲ್ಲದವನೊಬ್ಬನ ಹೋಲಿಕೆಯಾಗಿದೆ. ಯಾವ ಸಂತನ ಕುರಿತು ಎಕ್ಕುಂಡಿ ಬರೆದರೂ ತಮ್ಮ ತೀವ್ರವಾದ ಮಾನವೀಯ ಕಳಕಳಿಯಿಂದ ಅವುಗಳನ್ನು ಚಿತ್ರಿಸುತ್ತಾರೆ. ಇದು ಅವರ ಮಧ್ವಾಚಾರ್ಯರನ್ನ ಕುರಿತ ಕವಿತೆಗಳಲ್ಲಿಯೂ ಕಾಣಬಹುದಾಗಿದೆ. ಐತಿಹಾಸಿಕವಾಗಿ ಮಧ್ವಾಚಾರ್ಯರು ಶೋಷಿತರ ಪರವಾಗಿಲ್ಲದ ಕಲ್ಪನೆಯ ಜೊತೆಗೆ ಕೆಲವೊಮ್ಮೆ ಶೋಷಣೆ ಹಾಗೂ ಕಷ್ಟಗಳು ಪ್ರಕೃತಿಯ

ಜೊತೆಗಿನ ಅನ್ಯೋನ್ಯತೆ ಸಾಧಿಸುವಲ್ಲಿ ಪರಿವರ್ತಿತವಾಗಿದೆ. 'ಬಕುಲದ ಹೂವುಗಳು' ಕವಿತೆಯಲ್ಲಿ ಒಬ್ಬ ಕರಿಮೈಯ ಕೂಲಿ ಮತ್ತವನ ಹೆಂಡತಿ ನಿತ್ಯವೂ ತಮ್ಮ ದಾರಿಯಲ್ಲಿ ಅನೇಕ ವರ್ಷಗಳಿಂದ ಸಾಗುತ್ತಿದ್ದರೂ ಅಲ್ಲಿದ್ದ ಒಂದು ಬಕುಲದ ಹೂವರಳಿದ ಮರವನ್ನು ಗಮನಿಸಿರುವುದಿಲ್ಲ. ಅವನು ತನ್ನ ಹೆಂಡತಿಗೆ ಆ ಮರದ ಮಾಂತ್ರಿಕ ಚೆಲುವು ವಿವರಿಸುತ್ತಾ ತಮ್ಮ ಎಲ್ಲ ಕಷ್ಟಗಳೂ ಮರೆಯಾದವು ಎನ್ನುವ ಭಾವ ಹೊಂದಿದ್ದ ವಿವಾಹದ ಮೊದಲ ದಿನಗಳ ನೆನಪಿಗೆ ಸಾಗುತ್ತಾರೆ.

ಬೆಟ್ಟದಲ್ಲಿ ಈ ಅಮ್ಮ, ಮನೆಯಲ್ಲಿ ಆ
ಅಮ್ಮ, ನೆಲದಮ್ಮ ನೀಡಿರುವ ಗಿಡದ
ಹೂವು, ಒಲವು ಚಿಗುರೊಡೆದಾಗ, ಒಂ
ದು ದಿನ, ಮರೆತಾವು, ನಮ್ಮ ಬಡ ಬ
ದುಕುಗಳು ಉಂಡ ನೋವು ॥೧೦॥

ಮಡಕೆಯಲ್ಲಿ ಗಂಜಿ, ಅಷ್ಟಷ್ಟ ಅಂಜಿಕೆ
ಗಳನು ಹೆಡಿಗೆಯಲಿ ಹೊತ್ತು ನಡೆದಿ
ರಲು ಜೊತೆಗೆ, ಉಪ್ಪಿನಾಗರದಲ್ಲಿ ಬಾ
ಣಲೆಯ ಬೆಂಕಿಗಳು, ಆರಿದವು
ಬಕುಲದಲಿ ಒಂದು ಗಳಿಗೆ ॥೧೧॥

ಮನುಷ್ಯನ ಬದುಕಿನ ಸ್ಥಿತಿಯ ಅಪೂರ್ಣತೆ ಎಕ್ಕುಂಡಿ ನಿರ್ಲಕ್ಷಿಸುತ್ತಾರೆಂದೇನಲ್ಲ ಆದರೆ ಕ್ರೌರ್ಯ ಮತ್ತು ಸಂಕಟಗಳು (ಸಹಭೋಗದ) ಭಾವೈಕ್ಯದ ಕ್ಷಣಗಳಲ್ಲಿ ಕರಗಿ ಹೋಗಿರುತ್ತದೆ. ಮತ್ತೊಂದು ಕವಿತೆ 'ಸೋಜಿಗ'ದ ಉದಾಹರಣೆ ನಾವು ಗಮನಿಸು ವುದಾದರೆ ಒಂದು ದಿನ ನಂದಿ ದೇವಸ್ಥಾನದ ಅರ್ಚಕನೊಬ್ಬ ನಂದೀಶ್ವರನೇ ಮಾಯ ವಾಗಿರುವುದನ್ನು ಕಾಣುತ್ತಾನೆ. ಮತ್ತೊಂದು ಕಡೆ ನಂದಿಯು ಕೃಶವಾದ ಬಲಿಪಶು ವಾಗಿ ಕಸಾಯಿಖಾನೆ ಸೇರತೊಡಗುವ ಎತ್ತುಗಳ ಜೊತೆಗೆ ಕಟುಕನ ಮಚ್ಚಿನ ಎಡೆಗೆ ನಡೆಯತೊಡಗುತ್ತಾನೆ. ಈ ದೃಶ್ಯಕ್ಕೆ ಆ ಕಟುಕನ ಮನಕರಗಿ ಮಚ್ಚನ್ನು ಎಸೆದು ಅಡ್ಡ ಬೀಳುತ್ತಾನೆ. ಹೃದಯ ಹೀನ ಕಟುಕ ಕೂಡಾ ಸಂತನ ಪರಿವರ್ತನೆ ಪಡೆಯುತ್ತಾನೆ. ಆದರೆ ಎಕ್ಕುಂಡಿಯವರ ಉತ್ತಮ ಕವಿತೆಗಳಲ್ಲಿ ಒಳ್ಳೆಯ ಮತ್ತು ಕೆಟ್ಟದ್ದನ್ನ ಕುರಿತ ನಿಲುವು ಮತ್ತು ಮೈತ್ರೀಕರಣ ಅಷ್ಟೊಂದು ಸುಲಭವಾಗಿ ಆಗುವುದಿಲ್ಲ. ಉದಾಹರಣೆಗೆ ಕಾಳಿದಾಸನನ್ನು ಕುರಿತ ಕವನದಲ್ಲಿ, ಇಬ್ಬರು ರೈತರು ಆ ಕವಿಯನ್ನ ಅವನ ಮನೆಯಲ್ಲಿ ಭೇಟಿಮಾಡಿ ಅವನು ಸಂದೇಶ ಹೊತ್ತ ಮೋಡಕ್ಕೆ ತಮ್ಮ ಬಾಯಾರಿದ ಹೊಲಗಳಿಗೆ ಕೆಲವು ಹನಿ ನೀರುಣಿಸಲು ಹೇಳಬೇಕೆಂದು ಬಿನ್ನವಿಸಿಕೊಳ್ಳುತ್ತಾರೆ.

ಪ್ರಕೃತಿ ಮತ್ತು ಮನುಷ್ಯನೊಳಗಿನ ಒಳಿತನ್ನು ಕುರಿತ ಪೂಜ್ಯಭಾವ ಎಕ್ಕುಂಡಿಯವರ ಕಾವ್ಯದ ತುಂಬಾ ಆವರಿಸಿಕೊಂಡಿದೆ. ಈ ದೃಷ್ಟಿಯಿಂದಲೇ ಸಾಮಾಜಿಕ ಅಸ್ವಾಸ್ಥ್ಯಗಳನ್ನೂ ಎಕ್ಕುಂಡಿ ಗುರುತಿಸತೊಡಗುತ್ತಾರೆ. ಇದು ಹಿಂಸೆ ಹಾಗೂ ಬಂಡಾಯ ಮನೋಭಾವದ ಸೂಕ್ಷ್ಮಗಳಿಗೆ ಅರ್ಥವಾಗುತ್ತಿಲ್ಲ.

ಕೆ. ವಿ. ನಾರಾಯಣ ಅವರು ಎಕ್ಕುಂಡಿಯವರ ಕಾವ್ಯವನ್ನು 'ಸ್ತೋತ್ರ' ಹಾಗೂ 'ಕೀರ್ತನೆ'ಗಳ ನಡುವೆ ಗುರುತಿಸುತ್ತಾರೆ. ಸ್ತೋತ್ರ ದೇವರನ್ನ ಕುರಿತ ಅಚಲ ನಂಬಿಕೆಯ ಮೂಲದಿಂದ ಹುಟ್ಟುವುದಾದರೆ ಕೀರ್ತನೆ ವಚನದಂತೆ ದೇವರೊಂದಿಗಿನ ಸಂಭಾಷಣೆಗೆ ತೊಡಗುತ್ತದೆ. ಎಕ್ಕುಂಡಿಯವರ ಕಥನ ಕ್ರಮ ಸ್ತೋತ್ರದ ಅಪಾರ ದರ್ಶಕತೆ ಮತ್ತು ಕೀರ್ತನೆಯ ಸಂವಾದದಿಂದ ಹೊರಗೆ ನಿಲ್ಲುತ್ತದೆ. ಆದರೂ 'ನಂಬಿಕೆ' ಎನ್ನುವುದು ಎಕ್ಕುಂಡಿಯವರ 'ಮೊದಲ ಸತ್ಯ'ವಾಗಿ ಉಳಿಯುತ್ತದೆ. ಅವರು ಅದನ್ನು ಪ್ರಶ್ನಿಸಲು ಅಥವಾ ಪರೀಕ್ಷಿಸಲು ತೊಡಗುವುದು ಕಡಿಮೆ. ಅಡಿಗರ ಕಾವ್ಯದ ಹಾಗೆ ಸತ್ಯದ ಅನುಭವದ ಅನ್ವೇಷಣೆಯ ಸಂಕಟವನ್ನಾಗಲೀ ಹೋರಾಟವನ್ನಾಗಲೀ ತೋರುವುದಿಲ್ಲ. ಆದರೆ ಎಕ್ಕುಂಡಿಯವರ ಕಾವ್ಯ ಸೂಕ್ಷ್ಮವಾಗಿ ನಂಬುವವನ ಛಿದ್ರತೆ ನ್ಯೂನತೆಗಳು ತಾತ್ಕಾಲಿಕ ಹಾಗೂ ನಶ್ವರವೆಂದು ಬಿಂಬಿಸುತ್ತವೆ.

ಇಪ್ಪತ್ತನೆಯ ಶತಮಾನದ ಮೊದಲ ಭಾಗದ ಭಾರತೀಯ ಸಂಸ್ಕೃತಿಯ ಮಿಥ್‌ಗಳ ಬಿಂಬವಾಗಿದ್ದ ಎಲ್ಲೆಲ್ಲೂ ಪ್ರಕೃತಿ ಮನುಷ್ಯನ ಸೌಂದರ್ಯ ಹಾಗೂ ಒಳಿತನ್ನು ಕಾಣುವ ದೃಷ್ಟಿ ಎಕ್ಕುಂಡಿಯವರದ್ದಾದರೂ ನಂತರದಲ್ಲಿ ಅವರು ಸಮಾಜವಾದದ ಪಾಠಗಳನ್ನ ಕಲಿತವರು, ನವ್ಯ ಕಾವ್ಯದ ಶೋಧಕ ಶಕ್ತಿ ಉತ್ಸುಕತೆ ಅವರ ಕವಿತೆಯ ಮೇಲೆ ಪರಿಣಾಮ ಬೀರದಿರುವುದು ಕಂಡುಬರುತ್ತದೆ. ಅವರ ಕಾವ್ಯ ಅನುಭವದ ತೀವ್ರ ಅಭಿವ್ಯಕ್ತಿಯಾಗದೆ ಒಂದು ನಿಶ್ಚಿತ ದೃಷ್ಟಿಕೋನದಿಂದ ಅದನ್ನು ಕಥಿಸತೊಡಗುತ್ತದೆ.

ಭಾರತೀಯ ನವ್ಯಕಾವ್ಯದ ಮಬ್ಬು ಬೆಳಕಿನಲ್ಲಿ ನಮ್ಮ ಭಾಷೆಯ ವಿಭಿನ್ನ ಕಾವ್ಯ ಪರಂಪರೆಗಳಿಗೆ ನಮ್ಮನ್ನ ನಾವು ಗುರುತಿಸಿಕೊಳ್ಳುವ ಅಥವಾ ಪ್ರಸ್ತುತಗೊಳಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಸು. ರಂ. ಎಕ್ಕುಂಡಿಯವರ ಕಾವ್ಯದ ಎಚ್ಚರವಾದ ಮರುಪರಿಶೀಲನೆಯ ಅಗತ್ಯ ಇದೆ.

ಕೃಪೆ : Indian Literature–159.

ಬೆಳ್ಳಕ್ಕಿಗಳ ನೆನಪಲ್ಲಿ....

ಡಿ.ವಿ. ಪ್ರಹ್ಲಾದ್

ಅವತ್ತು ಭಾನುವಾರ, ಬೆಂಗಳೂರು ತನ್ನ ಜಡತೆಯೊಳಗೆ ಮುಳುಗಿತ್ತು, ಸಾವಿನ ಹಾಗೆ. ಸಾವಿಗಿರುವ ಒಂದು ವಿಚಿತ್ರ ಗುಣ ವೈಭವೀಕರಣ ಇರಬಹುದೆ ? ಸತ್ತವರ ನೆನಪಲ್ಲಿ ಬದುಕಿದವರ ಹಳಹಳಿಕೆ, ಅವರ ಪ್ರತಿಯೊಂದು ನೆನಪಿಗೂ ವಿಶೇಷ ಅರ್ಥ ಆವರಿಸಿಬಿಡುತ್ತದೆ. ಎಕ್ಕುಂಡಿಯಂಥವರ ಸಾವು ಮನಸ್ಸು ಹಿಡಿಮಾಡಿ ಮಾತುಗಳ ಮೇಲೆ ಭಾವುಕತೆ ಸವಾರಿ ಮಾಡತೊಡಗುತ್ತದೆ. ಇದಕ್ಕೆ ಕಾರಣ ನನಗೆ ಅವರ ಬಗ್ಗೆ ಇರುವ ಗೌರವ ಪ್ರೀತಿಗಳು.

ಆ ಕಾಲಕ್ಕೆ ನಾನು ಮನೆ ಮನೆ ತಿರುಗುವ ಸೇಲ್ಸ್‌ಮನ್, ಬೆಳಗಿನ ಹೊತ್ತು ಸಂಜೆ 'ಡೆಮಾನ್‌ಸ್ಟ್ರೇಷನ್ನಿ'ನ ನೆಪದಲ್ಲಿ ಮಾರುವ ಜಾಲಕ್ಕೆ ಸರಿಯಾದ ಬಕರಾಗಳನ್ನ ಹುಡುಕುವ ಕೆಲಸ ಅದು. ನಮ್ಮ ಅವತ್ತಿನ Prospectಗಳನ್ನ ಗುರುತಿಸೋ ಕೆಲಸ. ಹಾಗೇ ಬಸವೇಶ್ವರನಗರದ ಸಾಲು ಮನೆಗಳಲ್ಲಿ ಎಕ್ಕುಂಡಿಯವರ ಮನೆಗೂ ನುಗ್ಗಿದ್ದೆ. ಚೆನ್ನಾಗಿ ನೆನಪಿದೆ ಕೆನ್ ಸ್ಕೂಲಿನಲ್ಲಿ ನಡೆದ ಕವಿಗೋಷ್ಠಿಯೊಂದರಲ್ಲಿ ಅವರನ್ನ ಮೊದಲ ಸಲ ಕಂಡಿದ್ದೆ. ಮ್ಯಾಗಸಿನ್ ಒಂದರಲ್ಲಿ ಅವರ ಸಂದರ್ಶನ ಕೂಡಾ ಓದಿದ್ದೆ. ಆ ಕ್ಷಣಕ್ಕಷ್ಟೇ ಪರಿಚಯವಾದ ನನ್ನ ಎಷ್ಟೋ ವರ್ಷಗಳಿಂದ ಬಲ್ಲವರಹಾಗೆ ಮಾತು 'ಸೇಲ್ಸ್-ಸಾಹಿತ್ಯದ' ವಿಚಿತ್ರ ಸಂಬಂಧ ಕುರಿತು, ಅವತ್ತು ಮೊದಲ ಸಲ ಅವರ ವಿಶ್ವಾಸದ ಚಾ ಕುಡಿದು ಆಗಿನ್ನೂ ಪುಟ್ಟದಾಗಿದ್ದ ಸೈಕ್ಲೋಸ್ಟೈಲಿನ ಸಂಚಯ ತೋರಿಸಿದ್ದೆ. ಬಹಳ ಸಂಭ್ರಮ ಪಟ್ಟಿದ್ದರು ಚಿಕ್ಕ ಮಕ್ಕಳ ಸಣ್ಣಪುಟ್ಟ ಸರ್ಕಸ್ಸುಗಳಿಗೆ ಅಜ್ಜ ತೋರುವ ಸಂಭ್ರಮದ ಹಾಗೆ, ಎಷ್ಟೋ ಸಲ ಅವರ ಪುಟ್ಟ ಮೊಮ್ಮಗನ ಜೊತೆ 'ಈ ಅಜ್ಜ ನಂದು' ಅಂತ ಹುಡುಗುತನದ ಹುಸಿ ಜಗಳವೂ ಆಡಿದ್ದೆ. ಅವತ್ತಿನ Prospectingನ ಫಲ ಬಹುಕಾಲ ಉಳಿದಿತ್ತು. ವ್ಯಾನಿನೊಳಗಿಂದ ನಿರ್ಜೀವವಾಗಿದ್ದ ಅವರನ್ನ ಮನೆಯೊಳಕ್ಕೆ ಮಲಗಿಸುವವರೆಗೆ.

ಎಕ್ಕುಂಡಿ ಬರೆದ ಕಾವ್ಯದ ಬಗ್ಗೆ-ನಂಬಿಕೊಂಡಿದ್ದ ಮೌಲ್ಯಗಳ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿವೆ. ಕವಿ-ಎಕ್ಕುಂಡಿಗಿಂತಲೂ ತಮ್ಮ ಸರಳತೆ-ಹಿರಿತನದ ವ್ಯಕ್ತಿಯಾಗಿ ಅವರು ನಮಗೆ ಹೆಚ್ಚು ಪ್ರಿಯವಾದರು. ಫೆಬ್ರವರಿಯಲ್ಲಿ ಸಂಚಯದ ಕಾರ್ಯಕ್ರಮಕ್ಕೆ ಬಂದಾಗಲೂ ಮಧ್ಯಮ ವರ್ಗದವರು ಮಾರ್ಕೆಟ್ಟಿಗೆ ಹೋದಷ್ಟು ಸರಳವಾಗಿ

ಬಂದಿದ್ದರು. ಆದರೆ ತಮ್ಮ ಕವಿತೆ ಮತ್ತು ಮಾತುಗಳ ಮೂಲಕ ತೆರೆದುಕೊಂಡ ಎಕ್ಕುಂಡಿ ದೊಡ್ಡವರಾಗಿ ಕಂಡರು. ಯಾವತ್ತೂ ಅವರು ನಮ್ಮೆದುರು ಹಿರಿಯ ಸಾಹಿತಿಗಳ 'ದೊಡ್ಡತನ' ತೋರಲಿಲ್ಲ, ಹುಬ್ಬು ಗಂಟಿಕ್ಕಿದ ಒಂದು ಅಂತರ ಇಟ್ಟೇ ವ್ಯವಹರಿಸಿದವರ ಮಧ್ಯೆ, ದೊಡ್ಡದಾಗಿ ಕಣ್ಣರಳಿಸಿ ನಗುನಗುತ್ತಾ ಬನ್ನಿ ಬನ್ನಿ ಅಂತ ಮೈ ಎಲ್ಲಾ ಸಂಭ್ರಮಪಡುತ್ತಿದ್ದ ಎಕ್ಕುಂಡಿ ಪ್ರತಿಯೊಬ್ಬರಿಗೂ 'ನಮ್ಮವರಾಗಿದ್ದು' ಈ ಕಾರಣಕ್ಕೆ.

ಎಕ್ಕುಂಡಿಯವರ ದೊಡ್ಡತನ ಕಾಣಿಸಿದ್ದು ಅವರ ವಿಶಾಲ ಓದು ಅದರ ಜೊತೆಗೂಡಿದ ವಿನಯ ಸಜ್ಜನಿಕೆಗಳಲ್ಲಿ, ಕಾವ್ಯದ ಬಗೆಗಿದ್ದ ಅತೀವ ಪ್ರೀತಿಯಲ್ಲಿ. ಹೊಸ ಕವಿಗಳು ಬರಬೇಕು ಹೊಸ ಕಾವ್ಯ ಬರಬೇಕು ಎಂದು ಯಾವಾಗಲೂ ಹೇಳುತ್ತಿದ್ದರು. ಬರಲಿರುವ ಕಾವ್ಯ ಕನ್ನಡ ಕಾವ್ಯ ಪರಂಪರೆಯ ಸತ್ವ ಹೀರಿ ಹೊಸದರತ್ತ ಮುಖಮಾಡಿದ ಕಾವ್ಯ ಎಂದು ಅವರ ನಿರೀಕ್ಷೆಯಾಗಿತ್ತು. ಕನ್ನಡಕ್ಕೆ ಆರನೇ ಜ್ಞಾನಪೀಠ ಬಂದಾಗ ನೇರವಾದ ತಮ್ಮ ಅನಿಸಿಕೆ ತಿಳಿಸುವಲ್ಲಿ, ವಿಮರ್ಶಕರೊಬ್ಬರು ಬೇಂದ್ರೆ ಕವಿತೆಯೊಂದರಲ್ಲಿ 'ಕ್ಷೇತ್ರ' ಎಂಬ ಪದವೊಂದರ ಬಳಕೆ ಬರೇ ಪ್ರಾಸಕ್ಕಾಗಿ ಬರೆದದ್ದು ಎಂದು ಬರೆದ ತಪ್ಪು ಗ್ರಹಿಕೆಯನ್ನ ಗೀತೆಯ ಹಿನ್ನೆಲೆ ಕೊಟ್ಟು ವಿವರಿಸಿದಾಗ, ಬಡತನ ನೋವಿನ ಬಗ್ಗೆ ಮಾತಾಡುವಾಗ ಎಕ್ಕುಂಡಿ ಪಾರದರ್ಶಕವಾಗುತ್ತಾರೆ, ತಾವು ನಂಬಿದ ಹಾಗೆ ಬರೆದದ್ದಕ್ಕೆ–ಬದುಕಿದ್ದಕ್ಕೆ.

ಎಕ್ಕುಂಡಿ ಒಬ್ಬ Great Poet ಅಲ್ಲಲ್ಲ, ಅವರ ಕಾವ್ಯ ಕುರಿತು ಈವರೆಗೆ ನಡೆದಿರುವ ಚರ್ಚೆಯೇ ಕನ್ನಡ ಸಾಹಿತ್ಯ ಅವುಗಳನ್ನ ಕುರಿತು ಕಟ್ಟುವ ಬೆಲೆ ಅಂತೆಲ್ಲಾ ಅಭಿಪ್ರಾಯಗಳಿವೆ. ಯಾವುದೇ ಲೇಖಕರು ರಾತ್ರೆ ಕಳೆದು ಬೆಳಗಾಗುವುದರಲ್ಲಿ ಮುಖ್ಯರಾಗುವುದು. ಪ್ರತಿಯೊಬ್ಬ ಕವಿಯೂ ಯುಗದ ಕವಿಯಾಗಲೀ ಜನಾಂಗದ ಕಣ್ಣು ತೆರೆಸಿದ ಕವಿಯಾಗಲೀ ಆಗಬೇಕೆನ್ನುವುದು ಅತಿಯಾದ ನಿರೀಕ್ಷೆಯೆ. ಎಕ್ಕುಂಡಿ ತಮ್ಮ ಹಾಗೆ ಬರೆದರು ಬದುಕಿದರು ಅಷ್ಟೆ. ಯು. ಆರ್. ಅನಂತಮೂರ್ತಿಯವರ ಅನಿಸಿಕೆಯಂತೆ ಅಡಿಗರ ದಟ್ಟ ಪ್ರಭಾವಕ್ಕೆ ಒಳಗಾಗದೇ ಬರೆದ ಇಬ್ಬರು ಕವಿಗಳು ಪು.ತಿ.ನ. ಮತ್ತು ಎಕ್ಕುಂಡಿ, ತಮ್ಮದೇ ದಾರಿಯಲ್ಲಿ ಸಾಗಿದವರು ಯಾವುದೋ. ಹಳ್ಳಿಗಾಡಿನ ಶಾಲೆಯೊಂದರಲ್ಲಿ ಕಲಿಸುತ್ತಾ ಅವರು ಕವಿಯಾಗಿ ಬೆಳೆದ ರೀತಿ ಸಾಮಾನ್ಯವೇನಲ್ಲ ಇವತ್ತಿನ ವಿಮರ್ಶೆ ಹಾಗೂ ಪ್ರಚಾರ ಜಾಲಗಳು ಯಾರನ್ನ ಬೇಕಾದರೂ ಅತ್ಯದ್ಭುತ ಅದ್ವಿತೀಯರನ್ನ ಮಾಡಲು ಶಕ್ತವಿರುವಾಗ ಕಾಲವಷ್ಟೇ ಇವುಗಳಿಗೆ ಉತ್ತರ ನೀಡುತ್ತದೆ ಎನ್ನುವುದು ಸಂಗತವಾದ ನಿರೀಕ್ಷೆಯೆ ?

ನಮ್ಮ ವಿಮರ್ಶೆ ಅದ್ಭುತಗೊಳಿಸೋ ಕೃತಿಗಳು ಒಬ್ಬಂಟಿ ಕೂತು ಓದುವಾಗ ಅಂಥಾ ಅದ್ಭುತವಾದದ್ದು ಅಂತ ಕೆಲವು ಸಲ ಅನ್ನಿಸುವುದಿಲ್ಲ. ಸತ್ತ ಅಮ್ಮನ ಬಗ್ಗೆಯೋ ಮಗುವಿನ ಮಜ್ಜನದ ಜೊತೆಗಿನ ಗೊಮ್ಮಟನ ಮಹಾಮಜ್ಜನದ

ಹೋಲಿಕೆಯೋ ಕೆಲವು ಕ್ಷಣ ಆಪ್ತವೆನಿಸುತ್ತದೆ ಕವಿತೆ ನಮ್ಮದೆನಿಸುತ್ತದೆ. ಇಂಥಾ ಸಣ್ಣ ಆರ್ದ್ರತೆ ಹೊತ್ತು ತರುವ ಸರಳ ಕವಿತೆ ಇನ್ನೂ ಬೇಕೆನ್ನಿಸುತ್ತದೆ.

ಅವತ್ತು ಎಕ್ಕುಂಡಿಯವರ ಮನೆಯಲ್ಲಿ ಅವರ ನಿಧನದ ವಾರ್ತೆ ಟಿ.ವಿ.ಯಲ್ಲಿ ಬರುತ್ತಿತ್ತು. ಟಿ.ವಿಯಲ್ಲಿದ್ದ ಎಕ್ಕುಂಡಿ ಎಂದಿನ ಹಾಗೆ ತಮ್ಮದೇ ರೀತಿಯಲ್ಲಿ ಕವಿತೆ ಓದುತ್ತಿದ್ದರು, ಜಡವಾಗಿದ್ದ ಎಕ್ಕುಂಡಿಯವರ ಸುತ್ತ ಮನೆಯ ಜನರೆಲ್ಲಾ ಅಳುತ್ತಿದ್ದರು. ಇವರಲ್ಲಿ ಯಾವ ಎಕ್ಕುಂಡಿಯವರನ್ನ ನಾವು ಕಳಕೊಂಡಿದ್ದು ? ಯಾರು ಶಾಶ್ವತವಾದದ್ದು ? ಹಾರಿ ಹೋದ ಬೆಳ್ಳಕ್ಕಿಗಳ ನೆನಪಾಗಿ ಉಳಿದದ್ದು ? ಹೊರಗೆ ಚೇರಿನಲ್ಲಿ ಕುಸಿದ ಮಾಧ್ವ ಹಿರಿಯರೊಬ್ಬರು 'ನಾರಾಯಣ' 'ನಾರಾಯಣ' ಎನ್ನುತ್ತಿದ್ದರು.

ಎಷ್ಟೊಂದು ಪುಟ್ಟ ಹೆಜ್ಜೆಗಳಿವು ? ಎಷ್ಟು ವಿಧ
ಬೆಟ್ಟಗಳ ಹತ್ತಿಳಿದು ಬಂದ ಹೆಜ್ಜೆ
ಸುಡುವ ದೂಳಿಯಲಿ ದೂರದ ದಾರಿಗಳ ನಡೆದು
ನೆರಳುಗಳ – ಬೆಂಡಾದ ಹೆಜ್ಜೆ
ಕತ್ತಲಿನ ಕದ ತೆರೆದು ಹೆದರಿ ಬಂದ ಹೆಜ್ಜೆಗಳು
ಕೂಲಿ ಕಂಬಳಿಯ ಪರದೇಶಿ ಹೆಜ್ಜೆ
ಬಿಸಿ ಬಿಸಿ ತಟ್ಟೆಗಳ ಹೊಗೆಯಲ್ಲಿ, ನಗೆಯ
ನಾಲಿಗೆ ಚಾಚಿ – ಬಂದಿರುವ ಹಸಿದ ಹೆಜ್ಜೆ

—ಹೆಜ್ಜೆಗಳು
ಸು. ರಂ. ಎಕ್ಕುಂಡಿ

ಎಕ್ಕುಂಡಿ ಕಂಡ ಬೆಳಗು

ಚಿಂತಾಮಣಿ ಕೊಡ್ಲೆಕೆರೆ

ಎಕ್ಕುಂಡಿ ಬೆಳಕಿನ ಕವಿ. ಕತ್ತಲೆಯಲ್ಲಿ ಮುಳುಗಿದ ಸಮಾಜಕ್ಕೆ ಕವಿಗಳು ಬೆಳಕು ತರುವ ಪ್ರೊಮೀಥಿಯಸ್‌ಗಳಾಗಬೇಕು ಎಂದು ಹಂಬಲಿಸಿದವರು. ಪ್ರೊಮೀಥಿಯಸ್ ಗ್ರೀಕ್ ಕತ್ತಲಲ್ಲಿ ಮುಳುಗಿದ್ದಾಗ ಜನರ ನೋವು ನೀಗಲು ಗ್ರೀಕರ ದೇವತೆ ಜ್ಯುಪಿಟರ್‌ನಲ್ಲಿಗೆ ಹೋಗಿ ತನ್ನ ಕಣ್ಣುಗಳನ್ನು ಬಲಿಕೊಟ್ಟು ಬೆಳಕು ತಂದನಂತೆ. ಎಕ್ಕುಂಡಿಯವರು ವೇದಗಳಿಂದ, ತನ್ನ ಮನದ ಹೊಸ ಹಿಗ್ಗಿನಿಂದ ಕಾವ್ಯಕ್ಕೆ ಬೆಳಕು ತಂದವರು. ನೊಂದವರ ಬದುಕಿನಲ್ಲಿ ತಂಪನ್ನು, ಬೆಳಕನ್ನು ತರಬಯಸಿದ್ದು-ಅವರ ಬೆಳಕಿನ ಹಸಿವಿನ ಇನ್ನೊಂದು ಮುಖ. ನನ್ನ ಚಿಕ್ಕಂದಿನಲ್ಲಿ ಈ ಕವಿ ಹೇಳಿಹೋದ ಒಂದು ಬೆಳಕಿನ ಕತೆಯೊಡನೆ ಈ ಲೇಖನವನ್ನು ಆರಂಭಿಸುತ್ತೇನೆ.

ಒಂದು ಹಳ್ಳಿಯ ಒಬ್ಬ ರೈತ ಒಂದು ಸಲ ತನ್ನ ಮೂರು ಮಕ್ಕಳಲ್ಲಿ ಯಾರು ಹೆಚ್ಚು ಬುದ್ಧಿವಂತರು ಎಂಬುದನ್ನು ತಿಳಿಯಲು ಒಂದು ಪಂಥ ಏರ್ಪಡಿಸುತ್ತಾನೆ. ತಾನು ಕೊಡುವ ಹಣದಿಂದ ಯಾರು ಒಂದು ಕೋಣೆಯಲ್ಲಿ ಹೆಚ್ಚು ಸಾಮಾನನ್ನು ತುಂಬುತ್ತಾರೋ-ಅವರು ಹೆಚ್ಚು ಬುದ್ಧಿವಂತರು ಎಂದು ರೈತ ಮಕ್ಕಳಿಗೆ ತಿಳಿಸುತ್ತಾನೆ. ಈ ಸ್ಪರ್ಧೆಯಲ್ಲಿ ಗೆಲ್ಲುವವನು ರೈತನ ಕಿರಿಯ ಮಗ. ಆತ ಒಂದು ಮೇಣದಬತ್ತಿ ತಂದು ಕೋಣೆಯನ್ನು 'ಬೆಳಕಿನಿಂದ ತುಂಬಿ' ಜಯಶಾಲಿಯಾದ. ಹಳ್ಳಿಯ ಶಾಲೆಯ ವಾರ್ಷಿಕೋತ್ಸವದ ಆ ಭಾಷಣದಲ್ಲಿ ಅಂದು ಈ ಕಥೆ ಹೇಳಿದ ಎಕ್ಕುಂಡಿಯವರು ನಮ್ಮ ಮೇಲೆ ದೊಡ್ಡ ಪ್ರಭಾವ ಬೀರಿದರು.

ಅಂಥ ಬೆಳಕನ್ನು ಎಕ್ಕುಂಡಿಯವರು ತಮ್ಮ ಕವಿತೆಗಳಲ್ಲಿ ತುಂಬಿದವರು. ಅಂದು ಅವರು ಹಾಡಿದ ಹಾಡಿನಲ್ಲೂ ಆ ಬೆಳಕಿತ್ತು :

> 'ಮೂಡಲ ದೀಪವನುರಿಸುವ ಕೈಯಿಗೆ
> ಶರಣೆಂಬೆವು ನಾವು'

ಸೂರ್ಯ ಎಕ್ಕುಂಡಿಯವರಿಗೆ 'ಮೂಡಲದೀಪ'. ಎಷ್ಟು ಸುಂದರವಾದ ಚಿತ್ರ! ಅವರು ನಿಧನರಾದ ರಾತ್ರಿ ಅವರ ಕವಿತೆಗಳನ್ನು ಓದುತ್ತ ಕುಳಿತಿದ್ದ ನನಗೆ

ಈ ಕವಿ ಬೆಳಕಿನ ಬಗೆಗೆ ಅತ್ಯುತ್ಸಾಹದಿಂದ ಬಣ್ಣಿಸುತ್ತಾ ಹೋಗುವುದು ಬೆರಗುಂಟು ಮಾಡಿತು. ಅವರ ಎಷ್ಟೋ ಕಥನಕವನಗಳು ಆರಂಭವಾಗುವುದೇ ಬೆಳಕಿನೊಡನೆ. ಬೆಳಗಾಗುವ ಕ್ರಿಯೆಯನ್ನು ಎಕ್ಕುಂಡಿ ತಮ್ಮ ಕವಿತೆಗಳಲ್ಲಿ ಬಗೆಬಗೆಯಾಗಿ ವರ್ಣಿಸುತ್ತಾ ಹೋಗುತ್ತಾರೆ. 'ಮತ್ಸ್ಯಗಂಧಿ ಸತ್ಯವತಿ' ಎಂಬ ಅವರ ಕವಿತೆ ನಸುಕನ್ನು ಹಿಡಿದಿಡುವ ಬಗೆ ಗಮನಿಸಿ :

ಬ್ರಾಹ್ಮೀ ಮುಹೂರ್ತ ರಸಮಂತ್ರ ಗಾನದಲ್ಲಿ
ನಿರ್ವಿಕಾರ ನಿರ್ಲಿಪ್ತ ತಾನದಲ್ಲಿ
ಕಾಲಪುರುಷ ಕುಳಿತಂತೆ ಧ್ಯಾನದಲ್ಲಿ
ಸ್ಥಿತಪ್ರಜ್ಞ ಮನದಂತೆ ಬಾನಿನಲ್ಲಿ
ನೀಲಶುಕ್ರ ನಕ್ಷತ್ರ ಹೊಳೆಯುತಿತ್ತು
ದೇವಜೀವನದ ತೇಜವಿಳಿಯುತಿತ್ತು
ಸೃಷ್ಟಿಕರ್ತನೆಡೆ ಸೃಷ್ಟಿ ಸುಳಿಯುತಿತ್ತು

ನಸುಕಿನ ಶುಕ್ರನಕ್ಷತ್ರದ ಮಿನುಗು ಎಕ್ಕುಂಡಿಯವರಿಗೆ ಕಾಲಪುರುಷನ ಧ್ಯಾನದಂತೆ ಕಾಣುತ್ತದೆ. ದೇವಜೀವನದ ತೇಜವಿಳಿಯುತ್ತಿರುವ ಸೃಷ್ಟಿ. ಸೃಷ್ಟಿಕರ್ತನೆಡೆ ಸುಳಿಯುತ್ತಿರುವ ಬ್ರಾಹ್ಮೀ ಮುಹೂರ್ತವಿದು. ನಸುಕಿನ ಕ್ಷಣಗಳ ಬಳಿಕ

ಬಂಗಾರ ರಥವ ಬಿಳಿಗುದುರೆ ಎಳೆಯುವಂತೆ
ದೇವಪಯಣಪಥ ಜೀವ ತುಳಿಯುವಂತೆ
ಬೆಳಕು ಬಂತು ಬ್ರಾಹ್ಮೀ ಮುಹೂರ್ತದಲ್ಲಿ
ಮುಗಿಲ ಕಮಲವರಳಿತ್ತು ದಲವ ತೆರೆದು
ಪರಬ್ರಹ್ಮ ಪರಮಾತ್ಮ ಜ್ಯೋತಿಯೆರೆದು
ದೇವಚೇತನದ ಸ್ವರ್ಣಕುಂಭ ಸುರಿದು

ಬೆಳಗು 'ಬಂಗಾರ ರಥದ ಬಿಳಿಗುದುರೆ ಎಳೆಯುವಂಥ', 'ದೇವಪಯಣ ಪಥವನ್ನು ಜೀವ ತುಳಿಯುವಂಥ' ಕ್ಷಣ. ಸೂರ್ಯ 'ಮುಗಿಲ ಕಮಲ'. ಆತ 'ಪರಬ್ರಹ್ಮ ಪರಮಾತ್ಮ ಜ್ಯೋತಿ'ಯನ್ನೇ ಭೂಮಿಗೆ ಎರೆಯುತ್ತಿದ್ದಾನೆ. 'ದೇವ ಚೇತನದ ಸ್ವರ್ಣಕುಂಭ'ವನ್ನು ಸುರಿಯುತ್ತಿದ್ದಾನೆ. ಆತ ಹುಟ್ಟುವುದೆಂದರೆ ಕಾಲ ಪುರುಷ ಕಣ್ಣೆವೆ ತೆರೆದಂತೆ : ಬ್ರಹ್ಮಶಿಲ್ಪಿ ಹೊಸರೂಪ ಕೊರೆದಂತೆ. ಈ ಬೆಳಕು ಗಾಳಿಗೆ ಮರ ಉಸುರಿದ 'ಮೂಕಮನಸು', 'ಹೂವಿನಕ್ಷಿಯಲಿ ನೆಲವು ಕಂಡ ಕನಸು.' ಹೀಗೆ ಸಂಭ್ರಮಿಸುತ್ತ ಕವಿಗೆ ಜಗವೇ ಯಕ್ಷಲೋಕವಾಗಿಬಿಡುತ್ತದೆ.

'ಬೆಳಕು', ಬೆಳಕಿನ ಹಂಬಲ–ಎಕ್ಕುಂಡಿಯವರ ಕಾವ್ಯದ ಕನಸುಗಳಲ್ಲಿ ಪ್ರಧಾನವಾದುದು. ಇದಕ್ಕೆ ಮೇಲೆ ಹೇಳಿದಂತೆ ಇನ್ನೂ ಅನೇಕ ಉದಾಹರಣೆಗಳನ್ನು ಅವರ ಕವಿತೆಗಳಿಂದ ಕೊಡಬಹುದು. 'ಸಂಪಾತಿ' ಕವಿತೆಯಲ್ಲಿ ಬೆಳಗಿಗೆ 'ಕಣ್ಣು ತೆರೆಯಿತು ಮುಗಿಲು ಬಂಗಾರ ಬಳಿದು' ಎಂಬ ಸ್ವರ್ಣರೇಖೆ ತೊಡಿಸಿದ್ದಾರೆ. ಒಂದೆಡೆ ಮೂಡಲದೀಪ, ಇನ್ನೊಂದೆಡೆ ಮುಗಿಲ ಕಮಲ ಆಗಿದ್ದ ಸೂರ್ಯ ಇಲ್ಲಿ 'ಕುಂಕುಮದ ಹುಡಿಯೆರಚಿ ಹೊಳೆವಗ್ನಿಪಿಂಡ' ಆಗಿದ್ದಾನೆ. ಹಾಗೆಯೇ ಹೊಂಬೆಳಗಿನ ಸಮಯವನ್ನು 'ಭಗವಂತನ ನಗೆ ಗರಿಗೆದರುವ', 'ನೆಲ ಮುಗಿಲಿನನಂತತೆಯನ್ನು ಪಡೆದ', 'ರೆಕ್ಕೆಯ ಋಷಿಗಳ' (ಹಕ್ಕಿಗಳ) 'ರಸಗಾಯತ್ರಿ'ಗೆ 'ಕಂಪಿನಬಟ್ಟಲು'ಗಳು ತೆರೆಯುವ ಕ್ಷಣಗಳನ್ನಾಗಿ ಕಂಡ "ಊರ್ವಶೀ" ಕವಿತೆಯನ್ನು ನೋಡಬಹುದು. ಕವಿಗೆ ಈ ಕವಿತೆಯಲ್ಲಿ ಲೋಕವೇ 'ಹಿರಣ್ಯಗರ್ಭನ ಗುಡಿ'ಯಾಗಿ ಕಂಡಿದೆ.

'ಶ್ವೇತಕೇತು ದೇವರ್ಷಿ' ಕವಿತೆಯಲ್ಲಿ ಎಕ್ಕುಂಡಿಯವರು ಕತ್ತಲು ಹರಿದು ಬೆಳಗಾಗುವುದನ್ನು ಕಂಡ ಬಗೆ ಹೀಗೆ :

'ಉಷಾ ಸೂಕ್ತದೊಡನೆದ್ದು ಬಂದಿತೊ ಬಾನ ಬೆಳ್ಳಿ ಚುಕ್ಕಿ
ದಿಗ್ದಿಗಂತಕೂ ಸಡಿಲುತಿದ್ದಿತೊ ಇರುಳ ತೋಳತೆಕ್ಕೆ'

'ಉಭಯ ಸರಸ್ವತಿ'ಯಲ್ಲಿ ಬೆಳಗಿನ ಸೂರ್ಯ ಉದಯಿಸುವ ಬಗೆ :

'ಮೂಡಲಕಂಪಿನ ಬೆಳಕಿನ ಕೆಂಪಿನ
ಬಂಗಾರದ ಹೂವರಳಿತ್ತು'

ಮತ್ಸಗಂಧಿ ಕವಿತೆಯಲ್ಲಿ ಮುಗಿಲ ಕಮಲವೆಂದು ಸೂರ್ಯನನ್ನು ಕಾಣಿಸಿದ್ದ ಕವಿ 'ಬಂಗಾರದ ಹೂ' ಎಂಬ ವಿಶೇಷಣದಿಂದ ಅದನ್ನು ವಿಸ್ತರಿಸಿದಂತಿದೆ. 'ಶಬರಿ' ಕವಿತೆಯಲ್ಲಿ ಇದೇ ಸೂರ್ಯ 'ಚಿನ್ನದ ಬಿಂದಿಗೆ'ಯಾಗಿದ್ದಾನೆ. ಇಲ್ಲಿ ಬೆಳಗನ್ನು ಕವಿ 'ಚಿನ್ನದ ಬಿಂದಿಗೆ ಬೆಳಕನು ಸುರಿಯಿತು ಮೂಡಲ ದೆಸೆಯಿಂದ' ಎಂದು ಚಿತ್ರಿಸಿದ್ದಾರೆ.

ಬಂಡೆ, ಹುಡುಗ ಮತ್ತು ಬೆಸ್ತ (ಜಕಣಾಚಾರಿಯ ಕುರಿತ ಕವಿತೆ) ದಲ್ಲಿ ಬೆಳಗಾಗಿದ್ದು :

ಬಂಗಾರ ತಳಿಗೆಯಲಿ ಹಾಡು ಸುರಿದವು ಹಕ್ಕಿ
ಗುಡಿಸಿ ಬಂದಿತು ಹೂವಿನೆದೆಯ ಗಾಳಿ
ಹೆದರಿ ಕಣ್ಮರೆಗೋಡು ಚೆದುರಿದವು ಚುಕ್ಕೆಗಳು
ಬಿಚ್ಚಿಕೊಂಡಿತು ಬೆಳಕು ಬಣ್ಣ ತಾಳಿ

ಇಂಥ ಇನ್ನೂ ಕೆಲವು ಬೆಳಗಿನ ಬಣ್ಣನೆ, ಹಂಬಲದ ಸಾಲುಗಳನ್ನು 'ಪಣತಿ ಮತ್ತು ದೀಪ', 'ದಾಸಿಮಯ್ಯ ಮತ್ತು ಬೆಕ್ಕು' 'ಕ ವಷ ಐಲೂಪ' ಮುಂತಾದ ಕವಿತೆಗಳಿಂದ-ಕೊಡಬಹುದು.

ಬೆಳಕಿನ ಕುರಿತ ಎಕ್ಕುಂಡಿಯವರ ಪ್ರೀತಿ, ಆದರಗಳು ಪ್ರಕಟವಾಗುವ ಬೇರೊಂದು ಬಗೆಯನ್ನು 'ಬುಟ್ಟಿ ಮತ್ತು ಬೀಗದ ಕೈ' ಕವಿತೆಯಲ್ಲಿ ನೋಡಬಹುದು. ಶ್ರೀನಿವಾಸನಾಯಕರ ಜಿಪುಣತನವನ್ನು ವರ್ಣಿಸುತ್ತಾ 'ಇಲ್ಲಿ ಬೆಳಕಿನ ಕಿರಣ ಕಾಲಿಡದು' ಎಂದು ಅವರ ಮನಸ್ಥಿತಿಯನ್ನೇ ಸೂಚಿಸುತ್ತಾರೆ. ಆದರೆ ಪರಿವರ್ತನೆಯ ಕ್ಷಣಗಳಲ್ಲಿ 'ಒಳಗೆಲ್ಲೊ ಒಂದು ಕಿಟಿ ಜ್ಯೋತಿ ಹೊತ್ತಿ'ದಾಗ ಈತ 'ಬೆಳಕಿನಲ್ಲೆ ಅಲೆದರಿಡಿಯ ದಿವಸ'. ಮುಂದೆ ಈತ ಪುರಂದರದಾಸರಾಗಿ ಹೊಂಬೆಳಗು ಕಾಯುತ್ತಿರುವ, ಹಾಡುಗಳ ಮೈ ತೊಳೆಯುವ ಹೊಳೆಯ ದಡಕ್ಕೆ ನಡೆಯುತ್ತಾರೆ. ಶ್ರೀನಿವಾಸ ನಾಯಕ ಪುರಂದರರಾಗುವ ಕ್ರಿಯೆ ಕತ್ತಲೆ ಕಳೆದು ಬೆಳಕಾಗುವ ಕ್ರಿಯೆಯಂತೆ ಎಕ್ಕುಂಡಿಯವರಿಗೆ ಕಂಡಿದೆ. ಇನ್ನು ಬಡವರ ಬಾಳಿನಲ್ಲಿ ಬೆಳಕನ್ನು ತರುವ ಆಶಯವನ್ನು, 'ಕತ್ತಲಲ್ಲಿ ಎಡವದಂತೆ ದೀಪವೊಂದನ್ನು ಹಚ್ಚಿಡುವ' ಹಂಬಲ ವನ್ನು ಪ್ರಕಟಿಸುವ ಉದಾಹರಣೆಗಳನ್ನು ಎಕ್ಕುಂಡಿಯವರ ಕವಿತೆಗಳಿಂದ ಕೊಡುತ್ತ ಹೋಗಬಹುದು. ಆ ಆಸೆಯನ್ನು ನಾನು ನಿಯಂತ್ರಿಸಿಕೊಳ್ಳಬೇಕಾಗಿದೆ. ಆದರೆ ಬಡ ಗುಡಿಸಿಲಿನ ಹುಡುಗಿ (ಅವಳ ಅಪ್ಪ ಅಮ್ಮ ಇಲ್ಲ) ಅಜ್ಜಿಯೆದುರು ಜ್ವರದಿಂದ ಬಳಲಿ ಸಾಯುವುದನ್ನು 'ಎರಡು ಕಣ್ಣು ಕಳೆದುಕೊಂಡು ಲೋಕ ಸಣ್ಣದಾಯಿತು' ಎಂಬ ಸಾಲುಗಳ ಮೂಲಕ ಸೂಚಿಸಿರುವುದು ಹೃದ್ಯವಾಗಿದೆ, ಇದನ್ನು ಹೇಳದೆ ಮುಂದೆ ಹೋಗುವುದು ಕಷ್ಟ. ಆ ಬಡ ಹುಡುಗಿಯ ಕಣ್ಣಿನ ಕಾಂತಿಗೂ ಎಕ್ಕುಂಡಿಯವರ ಕಾವ್ಯದ ಬೆಳಗಿನಲ್ಲಿ ಸ್ಥಳವಿದೆ.

ಬೆಳಗನ್ನು ಕುರಿತ ಎಕ್ಕುಂಡಿಯವರ ಹಲವು ವರ್ಣನೆಗಳನ್ನು ಓದುತ್ತ ಕುತೂಹಲ ದಿಂದ ಅವೆಲ್ಲವನ್ನೂ ಒಂದೆಡೆ ಇಟ್ಟು ನೋಡಲು ಮಾಡಿದ ಪ್ರಯತ್ನ ಇದು. ಬೆಳಗನ್ನು ಸೂರ್ಯದೇವನನ್ನು ಕುರಿತು ಋಗ್ವೇದದ ಕವಿ ಋಷಿಗಳ ಬಗೆಯ ಸಂಭ್ರಮವನ್ನೇ ಅವರು ಪ್ರಕಟಿಸುತ್ತಾರಾದರೂ ಅದನ್ನು ಕಂಡ ಕಣ್ಣು, ಕಾಣಿಸುವ ಹಿಗ್ಗುಗಳಲ್ಲಿ ಒಂದು ನವೀನ ಕಾಂತಿಯಿದೆ, ವೈಭವವಿದೆ. ಎಕ್ಕುಂಡಿಯವರಿಗೂ 'ಇದು ಬರಿ ಬೆಳಗಲ್ಲ'. ಮೂಡಲ ಮನೆಯ ಮುತ್ತಿನ ನೀರಿನ ಎರಕವನ್ನು ಎಕ್ಕುಂಡಿ ಎರೆದ ಬಗೆಯಲ್ಲಿ ಒಂದು ಹೊಸ ಸೊಗಸಿದೆ. ಕನ್ನಡದ ಮುಖ್ಯ ಕವಿಗಳಲ್ಲೊಬ್ಬರಾದ ಅವರ ಕಾವ್ಯದಲ್ಲಿ ಬೆಳಕು ತೇಜೋಮಯವಾಗಿ ಬೆಳಗುವ ಕ್ಷಣಗಳತ್ತ ಇದೊಂದು 'ಬೆಳಕಿಂಡಿ'ಯ ಪ್ರಯತ್ನ.

★★

ಮುಖಾಮುಖಿ :

'ಕವಿಯಾದವನಿಗೆ ಸ್ವಂತಿಕೆ ಮುಖ್ಯ' ; ಸು. ರಂ. ಎಕ್ಕುಂಡಿ

ಸಂದರ್ಶನ : ಡಿ. ವಿ. ಪ್ರಹ್ಲಾದ್
ಸಹಾಯ : ಸತ್ಯೇಂದ್ರ

ಸಂಚಯಕ್ಕಾಗಿ ಎಕ್ಕುಂಡಿಯವರನ್ನ 90ರಲ್ಲಿ ಸಂದರ್ಶಿಸಲಾಗಿತ್ತು. ನಾವು ಕೇಳಿದ ಅನೇಕ ಪ್ರಶ್ನೆಗಳಿಗೆ ಅವರ ಉತ್ಸುಕತೆ ತುಂಬಿದ ಉತ್ತರಗಳು ಮತ್ತೆ ಮತ್ತೆ ನೆನಪಾಗುವಂಥದ್ದು, ಅವರ ಸಂದರ್ಶನವನ್ನ ಮರು ಮುದ್ರಿಸುವ ಮೂಲಕ ಅವರ ಈ ಸ್ಮರಣೆ ಇನ್ನಷ್ಟು ಅರ್ಥಪೂರ್ಣವಾದೀತೆಂಬ ಭರವಸೆ ನಮ್ಮದು. –ಸಂ

● ನಿಮ್ಮನ್ನು ಕವಿಯಾಗಿ ರೂಪಿಸಿದ ಸಂಗತಿಗಳು ಯಾವುವೆಂದು ವಿವರಿಸುತ್ತೀರಾ ?

○ ಮೊದಲನೆಯದು ನನ್ನ ಶಾಲೆಯ ದಿನಗಳ ಶಿಕ್ಷಣ ಪರಿಸರ, ಜೆ. ಎಸ್. ದೇಸಾಯ್ ಎನ್ನುವ ಇಂಗ್ಲೀಷ್ ಶಿಕ್ಷಕರಿದ್ದರು. ನಮ್ಮ ಪಠ್ಯದಲ್ಲಿನ ಕವಿತೆಗಳ ಜೊತೆಗೆ ಆ ಕಾಲಕ್ಕೆ ಪ್ರಕಟಣೆಗೊಳ್ಳುತ್ತಿದ್ದ ಕವಿತೆಗಳನ್ನೂ ಕಲಿಸಿ, ನಮ್ಮಲ್ಲಿ ಕಾವ್ಯವನ್ನ ಕುರಿತು ಆಸಕ್ತಿ ಮೂಡಿಸಿದರು. ನನ್ನ ಮನೆಯಲ್ಲಿ ನಡೆಯುತ್ತಿದ್ದ ಧಾರ್ಮಿಕ ಕಾವ್ಯವಾಚನ, ಇವೂ ಅಲ್ಲದೆ ನನ್ನಲ್ಲಿದ್ದ ಯಾವುದೋ ಸೃಜನಶೀಲ ಆಸಕ್ತಿಯೂ ಕಾರಣವಾಗಿ ಆಗಿನ್ನೂ ಮೊಳಕೆಯಲ್ಲಿದ್ದದ್ದು ನನಗೆ ಸಹಕಾರಿ ಯಾಯ್ತು. ಕಾವ್ಯದ ಅಭಿಮಾನದ ಜೊತೆಗೆ ನನ್ನೂರಿನ ವಾತಾವರಣದಲ್ಲಿದ್ದ ಕನ್ನಡ ಮತ್ತು ಈ ಸಂಸ್ಕೃತಿಯ ಮೇಲಿನ ಅಭಿಮಾನವೂ ನನ್ನ ಕವಿಯಾಗಿ ರೂಪಿಸಲು ಕಾರಣವಾಯಿತು. ಆದರೆ ನನ್ನ ಕೌಟುಂಬಿಕ ಪರಿಸ್ಥಿತಿ ಕಾವ್ಯ ರಚನೆಗೆ ಸಹಾಯಕವಾಗುವಂಥಾದ್ದಾಗಿರಲಿಲ್ಲ. ಹೊರಗಿನ ಅಭಿಮಾನದ ವಾತಾವರಣ ಕಾವ್ಯ ರಚನೆಗೆ ಪ್ರೇರೇಪಿಸಿತು.

● ಒಬ್ಬ ಕವಿಯಾಗಿ ನೀವು ನಿಮ್ಮ ಕಾವ್ಯದ ಪ್ರಮುಖ ನೆಲೆಗಳನ್ನ ಯಾವುದೆಂದು ಗುರುತಿಸುತ್ತೀರಿ ?

○ ನನ್ನ ಕವಿತೆಯ ಮೂಲ ನೆಲೆಯಲ್ಲಿ ಮುಖ್ಯವಾದದ್ದು ಸೌಂದರ್ಯದ ಹುಡುಕಾಟದ ಹಸಿವು ಮತ್ತು ಜೀವನದ ಉನ್ನತ ಮೌಲ್ಯಗಳ ಹುಡುಕಾಟ, ಗೋಕಾಕ್, ಮುಗಳಿ ಮುಂತಾದವರ ಭಾವಗೀತೆಗಳಿಂದ ನಾನು ಹೆಚ್ಚು ಪ್ರಭಾವಿತನಾಗಿದ್ದೇನೆ...

● ಆ ರೀತಿಯ ಭಾವಗೀತಾತ್ಮಕ ಅಂಶಗಳನ್ನ ನಿಮ್ಮ ಕಾವ್ಯದಲ್ಲೂ ಗುರುತಿಸ ಬಹುದಲ್ಲವೆ ?

○ ಹೌದು. ನನ್ನ ಕಾವ್ಯ ರಚನೆ ಆರಂಭವಾದದ್ದೇ ರಮ್ಯ ಸಂಪ್ರದಾಯದ ಕಾಲದಲ್ಲಿ. ಮೊದಲಿನಿಂದಲೂ ಬಂದ ಸೌಂದರ್ಯ ಜಿಜ್ಞಾಸೆ, ಇಡೀ ನನ್ನ ಕಾವ್ಯದ ಮೊದಲ ಹಂತವನ್ನ ರೂಪಿಸಿತು. ಪೌರಾಣಿಕ ಕಥೆಗಳನ್ನ ಆರಿಸಿಕೊಂಡು, ಸೌಂದರ್ಯ ಸತ್ಯ ಮತ್ತು ಆಧ್ಯಾತ್ಮವನ್ನ ಕುರಿತು ಕವಿತೆಗಳನ್ನ ಬರೆಯುತ್ತಿದ್ದೆ. ನಂತರದ ಎರಡನೆಯ ಹಂತ **ಮಾರ್ಕ್ಸ್‌ವಾದ,** ಎಷ್ಟು ಮಿಲಿಯಾಂತರ ಜನ ಈ ಶಿಕ್ಷಣವನ್ನ ಸೌಲಭ್ಯ ಸವಲತ್ತುಗಳನ್ನ ಪಡೆಯಬಲ್ಲರು ? ಕೆಲವರ ಕೈಯಲ್ಲೇ ಉಳಿಯುವ ಈ ಎಲ್ಲಾ ಸಂಗತಿಗಳೂ ನನ್ನ ಕಾಡಿದವು. ಜೊತೆಗೆ ಬಡತನದ ನನ್ನ ವೈಯುಕ್ತಿಕ ಅನುಭವಗಳೂ ಜೊತೆಗೂಡಿತು.

● ಒಬ್ಬ ಕವಿಗೆ ತನ್ನದೇ ಸ್ವಂತಿಕೆ ಬಹುಮುಖ್ಯ ಎನ್ನುವ ನಿಮ್ಮ ಸ್ವಂತಿಕೆಯನ್ನ ಕಥನ ಕವನಗಳಲ್ಲಿ ಗುರುತಿಸಿಕೊಂಡಿದ್ದೀರಾ ?

○ ನಿಜ, ನನಗೆ ಮೊದಲೇ ತಿಳಿಸಿದಂತೆ Romantic ಕಾವ್ಯ ತುಂಬಾ ಸೇರುತ್ತೆ. ನಮ್ಮ ಪರಂಪರೆಯ ಸೌಂದರ್ಯ ಜಿಜ್ಞಾಸೆ ನಮ್ಮ ಅನೇಕ ಪುರಾಣ ಮಹಾ ಕಾವ್ಯಗಳಲ್ಲಿದೆ ಎನ್ನಿಸಿ ಹೆಚ್ಚು ಆಸಕ್ತಿ ವಹಿಸಿದೆ. ಕಥನ ಕವನಗಳ ರಚನೆ ಪ್ರಾರಂಭದಲ್ಲಿ ನನಗೆ ಆಸಕ್ತಿಯ ವಿಷಯವಾಗಿತ್ತು. ಆಸಕ್ತಿ ಎಂದುಕೊಂಡದ್ದು ನನ್ನ ಅಭಿವ್ಯಕ್ತಿಯಾಯ್ತು. ಕೆಲ ವರ್ಷಗಳ ನಂತರ ಈ ರಚನೆಯಲ್ಲಿ ಏಕತಾನತೆ ಭಾಸವಾಗಿ, ಬದಲಾವಣೆಗೆ ಮೂರು ವರ್ಷಗಳು ರಷ್ಯನ್ ಕವಿತೆಗಳನ್ನ ಅನುವಾದಿಸಿದೆ. ಆಗ ಮಾರ್ಕ್ಸ್‌ವಾದ ಹೆಚ್ಚು ಹತ್ತಿರವಾಯ್ತು. ಈಗ ಇವೆರಡನ್ನೂ ಸಮನ್ವಯಗೊಳಿಸಿ ಭಿನ್ನವಾದ ರಚನೆಯ ಪ್ರಯೋಗ ನಡೆಸಿರುವೆ.

● ಕಥನ ಕವನ ಒಂದು ತಂತ್ರವಾದರೂ ಈ ಪ್ರಕಾರವನ್ನ ಕುರಿತು ಇರುವ ಚರ್ಚೆಗೆ ನಿಮ್ಮ ಅನಿಸಿಕೆ ಏನು ? ಕಥೆ ಕವಿತೆಗಳದ್ದು ಭಿನ್ನ ಅಸ್ತಿತ್ವವಿರುವಾಗ ಕಥನ ಕವನದ ಅಗತ್ಯ ಏನು ?

○ ಕಥನ ಕವನ ಒಂದು ಸಂವಹನದ ತಂತ್ರ ನಿಜವೇನೋ ಸರಿ, ಆದರೆ ಅದು ಜೀವನಕ್ಕೆ ಹತ್ತಿರವಾಗುವಂಥಾದ್ದು. ಸಂವಹನ ಕೂಡಾ ಸುಲಭವಾಗುತ್ತೆ ಹೇಳಬೇಕೆನ್ನುವುದನ್ನೆಲ್ಲಾ ಬರೀ ಗದ್ಯ ಅಥವಾ ಪದ್ಯದ ಮೂಲಕವೇ ಹೇಳಬೇಕೆನ್ನುವುದು ಸರಿಯಲ್ಲ. ಕಥೆ ಹೇಳುತ್ತಲೇ Emotional life ರೂಪಿಸುತ್ತಾ ಕಾವ್ಯವಾಗುತ್ತಾ ಸಾಗುವುದು ಇದರ ವಿಶೇಷತೆ. ಕಥನ ಕವನಗಳಿಗೆ ಬಹು ದೊಡ್ಡ ಪ್ರಾಚೀನ ಕಾವ್ಯಪರಂಪರೆಯೇ ಇದೆ. ಉದಾಹರಣೆಗೆ ಮಾಸ್ತಿಯವರ ಕಥನ ಕವನಗಳು; ಇವನ್ನ ಕಥೆಯ ರೂಪದಲ್ಲಿ ರಚಿಸಿದ್ದರೆ. ಇಷ್ಟು ಪರಿಣಾಮಕಾರಿಯಾಗಿ, ಸಂಕ್ಷಿಪ್ತವಾಗಿ ಹೇಳಲು ಸಾಧ್ಯವೇ ಇರಲಿಲ್ಲ ಎನ್ನಿಸುತ್ತದೆ.

● ಕಥೆಯ ಹಂದರದ ಒಳಗೇ ಕವಿತೆ ರಚಿಸಬೇಕಾಗುವ ಸಾಧ್ಯತೆ ಕಥನ ಕವನಕ್ಕೆ ಇರುವ ಮಿತಿ ಎನ್ನಬಹುದೆ ?

○ ಎಲ್ಲಾ ಪ್ರಕಾರಗಳಿಗೂ ಅದರದ್ದೇ ಆದ ಮಿತಿಗಳು ಇದ್ದೇ ಇರುತ್ತವೆ. ಅದರಂತೆ ಕಥನ ಕವನಗಳಿಗೂ. ತನ್ನ ಕಥೆಯ ಚೌಕಟ್ಟಿನೊಳಗೇ ಹೇಳಬೇಕಾದುದನ್ನು ಸಂಕ್ಷಿಪ್ತವಾಗಿ ಹೇಳುವುದು ಒಂದು ಸಾಹಸವೇ, ಅದಕ್ಕೆ ತಾಳ್ಮೆ ಮತ್ತು ಹೆಚ್ಚಿನ ಕುಶಲತೆ ಅಗತ್ಯ, ಜೊತೆಗೆ ತಿಳಿದಿರುವ ಕಥೆಯನ್ನೇ ಹೆಚ್ಚು ಆಪ್ತವಾಗುವ ಹಾಗೆ ಹೇಳಬೇಕಾಗುತ್ತೆ.

● ಇವತ್ತಿನ ದಲಿತ ಬಂಡಾಯದ ಆಶಯಗಳು ನಿಮ್ಮ ಆಶಯಗಳಿಗೆ ಹತ್ತಿರವಾಗುತ್ತದೆ ಅಲ್ಲವೇ ?

○ ಹೌದು, ನಮ್ಮ ಭಾಷೆಗೆ ಹೊಸ ಸತ್ವವನ್ನ ಕೊಟ್ಟಿರುವ ಚಳುವಳಿ ಇದು. ಯಾವ ಜನ ಇವತ್ತು ಬರೆಯಲು ಆರಂಭಿಸಿದ್ದಾರೊ ಅವರದ್ದು ಅಗಾಧವಾದ ನಿಗೂಢ ಮತ್ತು ಅತ್ಯಂತ ಪ್ರಬಲವಾದ ಬದುಕಿನ ಅನುಭವಗಳು : ನಿಲುವು ಮೌಲ್ಯಗಳು. ಈವರೆಗೆ ಇವುಗಳು ತಿಳಿಯದೆ ನಮ್ಮ ಸಮಾಜದ ಸ್ವರೂಪ ಸ್ವಲ್ಪ ವಿಕಲಾಂಗವಾಗಿತ್ತು ಎನ್ನಿಸುತ್ತದೆ.

● ನಿಮ್ಮ ಕವಿತೆಗಳಿಗೆ ಅವುಗಳ ಪ್ರಭಾವ ಆಗಿದೆಯೆ ?

○ ಪ್ರಭಾವ ಅಂತ ಹೇಳಲಾರೆ, ಈ ಎಲ್ಲ ಪ್ರಭಾವಗಳೂ ನನ್ನ ಸ್ವಂತಿಕೆಯನ್ನೇನೂ ಬದಲಾಯಿಸಿಲ್ಲ.

● ಒಬ್ಬ ಬರಹಗಾರನಿಗೆ ಬದ್ಧತೆ ಅಗತ್ಯ ಇದೆ ಎಂದು ನಿಮಗೆ ಅನ್ನಿಸುತ್ತದೆಯೇ ?

○ ಬರಹಗಾರ ನಿಜವಾಗಿಯೂ ಬದ್ಧನಾಗಿರಬೇಕಾದದ್ದು ತನಗೇ. ಜೀವನದ ಬಗ್ಗೆ ಸಮಗ್ರ ದೃಷ್ಟಿ ಇರಬೇಕು. ಬೆಳಕು ಏಳು ಬಣ್ಣಗಳಿಂದ ಕೂಡಿದೆ. ಅದರ ಯಾವುದೇ ಒಂದು ಬಣ್ಣ ನಮಗೆ ಪ್ರಿಯವಾಗಬಹುದು. ಆದರೆ ಏಳೂ ಬಣ್ಣಗಳೂ ಸೇರದೆ ಬೆಳಕಾಗದು ಹಾಗೆಯೇ ಬರಹಗಾರ ತಾನು ಬದುಕುವ ಅನುಭವಿಸುವ ಎಲ್ಲ ಸಂಗತಿಗಳ ಬಗ್ಗೆಯೂ ಸಮಾನವಾಗಿ ಧ್ಯಾನಿಸಿ ಬರೆಯಬೇಕು.

● ಇವತ್ತಿನ ಕಾವ್ಯ ಪರಿಸರದ ಬಗೆಗೆ ನಿಮ್ಮ ಅನಿಸಿಕೆ ಏನು ?

○ ಐವತ್ತು ವರ್ಷಗಳಿಂದ ಮೂರು ತಲೆಮಾರುಗಳ ಕಾವ್ಯರಚನೆಯನ್ನ ನಾನು ಕಂಡವನು. ಆದರೆ ಆತ್ಮವಿಶ್ವಾಸದಿಂದ ಹೇಳಬಲ್ಲೆ ; ಈಗಿನ ಕವಿಗಳು ಈ ಮೂರು ತಲೆಮಾರಿನ ವಾರಸುದಾರರು. ಅವುಗಳ ಸತ್ವ ಅರಗಿಸಿಕೊಂಡು ಹೊಸದರತ್ತ ಮುಖ ಮಾಡಿದವರು ಉತ್ತಮ ಕಾವ್ಯರಚನೆ ಹೆಚ್ಚು ಹೆಚ್ಚು ಕವಿಗಳಿಂದ ಸಾಧ್ಯವಾಗುತ್ತಿದೆ.

● ಆದರೆ ಇವುಗಳ ಗಟ್ಟಿತನ ಹೇಗೆ ?

○ ಗಟ್ಟಿತನ ಎನ್ನುವುದು ಈಗಿನದ್ದನ್ನ ಹಿಂದಿನ ಕೆಲವು ಕವಿತೆಗಳಿಗೆ ಹೋಲಿಸಿದಾಗ ಮೂಡುವ ಪ್ರಶ್ನೆ ಈ ಹೋಲಿಕೆ ಸರಿಯಲ್ಲ ; ಈ ಗಟ್ಟಿತನ ಉತ್ಕೃಷ್ಟತೆ ಕುರಿತು ತೀರ್ಮಾನ ಮಾಡುವವರು ನಾವಲ್ಲ, ಕಾಲ ಅದನ್ನ ನಿರ್ಧರಿಸುತ್ತದೆ. ಇಲ್ಲಿ ಸ್ವಂತಿಕೆ ಮುಖ್ಯ. ನಿಮ್ಮ ಪ್ರಾಮಾಣಿಕ ಅಭಿವ್ಯಕ್ತಿ ಯಾವ ರೂಪದಲ್ಲಿದೆ ಎನ್ನುವುದು, ಮತ್ತು ನಿಮ್ಮದೇ ಆದ ಸ್ವಂತಿಕೆ ಕಂಡುಕೊಳ್ಳುವುದು ಮುಖ್ಯ.

● ಕೊನೆಯ ಪ್ರಶ್ನೆ ; ನಿಮ್ಮ ಕಾವ್ಯ ರಚನೆ ನಿಮಗೆ ತೃಪ್ತಿ ತಂದಿದೆಯೆ ?

○ ಭಾಷೆಯೊಂದಿಗೆ ಒಡನಾಡುವುದರ ಮೂಲಕ ಸಮುದಾಯದ ಜೊತೆಗೆ ನನ್ನ ಒಡನಾಟ, ನಾನು ಪಡೆದ ಕೆಲವು ಅನುಭವಗಳನ್ನ ಜನರೊಂದಿಗೆ ಹಂಚಿಕೊಳ್ಳುತ್ತೇನೆ, ಹಾಗೇ ಸಮಾಜದಿಂದಲೂ ನಾನು ಪಡೆದಿದ್ದೇನೆ, ಇದೊಂದು Exchange of cultural values ಎನ್ನಿಸುತ್ತೆ, ಕಾವ್ಯ ಸಂತೋಷ ಕೊಟ್ಟಿದೆ ಕಾವ್ಯದಿಂದ ಪಡೆದದ್ದನ್ನ ನಾನು ಸಮಾಜಕ್ಕೆ ಕೊಟ್ಟಿರುವೆ, ಕೆರೆಯ ನೀರನ್ನ ಕೆರೆಗೆ ಚೆಲ್ಲಿದ ಹಾಗೆ. ★

ಎಕ್ಕುಂಡಿ ತೋರಿದ ಬಕುಳದ ಹೂವುಗಳು

ಎಸ್. ಸಂಧ್ಯಾ

1994ರ ಸಂಕ್ರಾಂತಿ ಹಬ್ಬದ ಸಡಗರದ ಅಂಕೋಲಾ. ಅಲ್ಲಿನ ಸಾಹಿತಿ ಬಂಧು ಮಿತ್ರರಿಗೆ ಮತ್ತೂ ಸಡಗರದ ಸಂಕ್ರಾಂತಿ : 'ಬಕುಳದ ಹೂವು'ಗಳಿಗಾಗಿ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತರಾದ ಶ್ರೀ ಸು. ರಂ. ಎಕ್ಕುಂಡಿಯವರಿಗೆ ಸನ್ಮಾನ ಮಾಡುವ ಮತ್ತು 'ದಿನಕರ ಸಾಹಿತ್ಯ ಪ್ರಶಸ್ತಿ'ಯನ್ನು ಶ್ರೀ ಎಚ್. ಎಸ್. ಶಿವಪ್ರಕಾಶರಿಗೆ ಪ್ರಧಾನ ಮಾಡುವ ಸಮಾರಂಭ. ಆಗಲೇ ನನಗೆ ಶ್ರೀ ಎಕ್ಕುಂಡಿಯವರನ್ನು ಅಷ್ಟು ಸಮೀಪದಿಂದ ನೋಡುವ ಮತ್ತು ಎಕ್ಕುಂಡಿ ದಂಪತಿಗಳ ಜೊತೆ ಒಂದೆರಡು ದಿನ ಕಳೆಯುವ ಸುಯೋಗ ಒದಗಿದ್ದು.

ಸುಮಾರು ಮೂರು ದಶಕಗಳ ಕಾಲ ಅಂಕೋಲಾ ತಾಲ್ಲೂಕಿನ ಬಂಕಿಕೊಡ್ಲದ ಖಾಸಗಿ ಶಾಲೆಯೊಂದರಲ್ಲಿ ಉಪಾಧ್ಯಾಯರಾಗಿದ್ದ ಎಕ್ಕುಂಡಿಯವರ ಶಿಷ್ಯವರ್ಗ ಬಹು ದೊಡ್ಡದು ; ಇಂದು ಉಪಾಧ್ಯಾಯ ವೃತ್ತಿಯೋ, ವ್ಯವಸಾಯವೋ, ವ್ಯಾಪಾರವೋ ಮಾಡಿಕೊಂಡು ಸಂಸಾರಿಗಳಾಗಿರುವ ನಡುವಯಸ್ಸಿನ ಅನೇಕ ಶಿಷ್ಯರು ಎಕ್ಕುಂಡಿಯವರು ಇಳಕೊಂಡಿದ್ದ ಗೆಸ್ಟ್ ಹೌಸಿಗೆ ಹಿಂಡು ಹಿಂಡಾಗಿ ಬರಹತ್ತಿದ್ದರು. ಊರು ಪ್ರಶಾಂತ. ಕತ್ತಲಾವರಿಸಿ ಆಗಿತ್ತು. ಊರೆಲ್ಲ ಮಲಗಿದೆ ಎಂದುಕೊಂಡರೆ– ಇಲ್ಲ ! ತಾವು ಈಗಲೂ ಮಕ್ಕಳೇ, ಎಕ್ಕುಂಡಿಯವರ ಶಿಷ್ಯರೇ ಎಂಬಂತೆ ಆ ಶಿಷ್ಯವೃಂದ ಮೇಷ್ಟರನ್ನು ನಡುವೆ ಕುರ್ಚಿ ಮೇಲೆ ಕೂರಿಸಿ ತಾವೆಲ್ಲ ಕೈಕಟ್ಟಿ ನಿಂತಿದ್ದರು. 'ಹೌದ್ರಿ ಸರ್ರ', 'ಇಲ್ರಿ ಸರ್ರ' ಮಾತ್ರ ನುಡಿಯುತ್ತಿದ್ದರು. ಅದೂ ಮೆಲು ನುಡಿಯಲ್ಲಿ. ಎಕ್ಕುಂಡಿಯವರು ಮಾತ್ರ ಒಬ್ಬೊಬ್ಬ ಶಿಷ್ಯನನ್ನೂ ಗುರುತು ಹಿಡಿಯುವ ಪ್ರಯತ್ನ ಮಾಡುತ್ತಾ, ಸಂತೋಷದಿಂದ ಕಣ್ಣರಳಿಸಿ ಉದ್ಗರಿಸುತ್ತಿದ್ದರು. "ಓಹೋ ಹೋ... ಗಾಂವ್‌ಕರ್ ಅಲ್ಲೇನೋ ನೀನೂ ?" ಮನೆಮಂದಿಯನ್ನೆಲ್ಲಾ ವಿಚಾರಿಸಿಕೊಳ್ಳುತ್ತಿದ್ದರು. ಊರವರನ್ನೆಲ್ಲಾ ವಿಚಾರಿಸಿಕೊಳ್ಳುತ್ತಿದ್ದರು. ಮುಖದಿಂದ 'ಪ್ರೀತಿ' ಅನ್ನುವುದು ಧಾರಾಕಾರ ಸ್ಫುರಿಸುತ್ತಿತ್ತು.

ಬಂಕಿಕೊಡ್ಲಕ್ಕೆ ಹೋಗಬಯಸಿದ ಎಕ್ಕುಂಡಿಯವರನ್ನು ಅವರ ಶಿಷ್ಯವೃಂದ ಅವರೊಂದಿಗೆ ನಮ್ಮನ್ನೂ ಕರೆದೊಯ್ದರು. ಶಾಲೆಯ ಪಾಲಿಗೆ ಆದೊಂದು ಹಬ್ಬ. ಅಲ್ಲಿನ ಉಪಾಧ್ಯಾಯ ವೃಂದಕ್ಕೆ ಅವರನ್ನು ಕಾಣಲು ಅಷ್ಟು ತವಕ. ಎಳ್ಳು–ಸಕ್ಕರೆ

ಕೊಡುವುದೇನು ಹಿರಿಯ ದಂಪತಿಗಳ ಕಾಲಿಗೆ ಎರಗುವುದೇನು ! ಶಾಲೆಯಲ್ಲಿ ಹೊಸದಾಗಿ ಎದ್ದಿದ್ದ ಕಟ್ಟಡಗಳನ್ನು ತೋರಿಸಿದರು, ನಿವೃತ್ತರಾದವರ ಆರೋಗ್ಯದ ಬಗ್ಗೆ ತಿಳಿಸಿದರು, ಶಾಲೆಯ ವಿವಿಧ ಚಟುವಟಿಕೆಗಳ ಬಗ್ಗೆ ಹೇಳಿದರು…ಅಂದು ಶಾಲೆಗೆ ರಜೆ ನೀಡಬೇಕೆನ್ನುವಷ್ಟು ಹಬ್ಬದ ವಾತಾವರಣ.

'ಎಕ್ಕುಂಡಿ ಬಂದಾರ', 'ಎಕ್ಕುಂಡಿ ಬಂದಾರ' ಎನ್ನುತ್ತಾ ಸುತ್ತ ಮುತ್ತಲ ಊರುಗಳಿಂದ ಜನ ಕಾಲುದಾರಿಯಲ್ಲಿ ಬಂದು ಟಾರು ರಸ್ತೆಯಲ್ಲಿ ಕಾಯ್ದಿರುತ್ತಿದ್ದರು. ಎಕ್ಕುಂಡಿಯವರು ಕಾರಿಂದ ಇಳಿದು ಅವರುಗಳ ಬಳಿ ಓಡುತ್ತಿದ್ದರು : "ಆರಾಮಿದ್ದೀಯೇನಪಾ ?" ಎಂದು ಅವರನ್ನು ಮಾತಾಡಿಸುತ್ತಿದ್ದರು. ಆ ಜನರ ಉತ್ಸಾಹಕ್ಕೆ ಪೋಷಕವಾಗಿ ಕವಿಯ ತೆರೆದಮನ, ಸಂತಸ ಉಕ್ಕೇರುವ ಮುಖಭಾವ. ಮಾತು ಉದ್ಗಾರಗಳು…

ಅಲ್ಲಿನ ಒಂದು ಬುಡಕಟ್ಟಿನವರಾದ ಆಗೇರು ಮತ್ತು ಹಾಲಕ್ಕಿ ಒಕ್ಕಲಿಗರು ಕೆಲಸ ಮಾಡುತ್ತಾ ಹಾಡುತ್ತಿದ್ದುದು ದೂರದಿಂದ ಕೇಳಿಬಂದಾಗ, ಕಿವಿಗೊಟ್ಟು ಆಲಿಸಿದರು. ಹೇಳಿದರು : "ಕೇಳಿಸುತ್ತಾ, ಕೆಲಸ ಮಾಡುವವರು ಹಾಡು ಹಸೆಯನ್ನು ಕಾಲ ಕಳೆಯಲು ಹಾಡೋದಿಲ್ಲ !" ಅವರ ಮಾರ್ಕ್ಸಿಸ್ಟ್ ನಿಲುವನ್ನು ತೋರಿಸುವ ಈ ಮಾತುಗಳು ಒಂದು ಕಡೆ. ಇದೇ ಎಕ್ಕುಂಡಿಯವರು ಗೋಕರ್ಣ ಊರು ತಲುಪಿದ ಕೂಡಲೆ 'ಓಂ ನಮಃ ಶಿವಾಯ' ಎಂದು ಮಂತ್ರೋಚ್ಚಾರ ಮಾಡಲು ಶುರು ಮಾಡಿದ್ದು ದೇವಸ್ಥಾನ ಬಿಟ್ಟು ಶ್ರೀ ಗೌರೀಶ ಕಾಯ್ಕಿಣಿಯವರ ಮನೆ ತಲುಪುವವರೆಗೂ ಪಠಿಸುತ್ತಲೇ ಇದ್ದರು. ಎಷ್ಟು ವಿಚಿತ್ರ ಈ ವ್ಯಕ್ತಿ ಎನ್ನಿಸಿತು ; ಇವೆರಡೂ ನಿಲುವಿನ ಹಿಂದೆ ಸಮನ್ವಯಗೊಂಡ ಪಕ್ವ ವ್ಯಕ್ತಿತ್ವದ ಪರಿಚಯ ನನಗಾಯಿತು.

"ಬಕುಳದ ಹೂವು ಅಂದರೆ ಯಾವುದು, ಸರ್ ?" ದಾರಿಯಲ್ಲಿ ಒಮ್ಮೆ ಕೇಳಿದೆ. ಅದು ಹೇಗಿರುತ್ತದೆಂದು ವಿವರಿಸುವುದು ಬೇಡವೆಂದು, ಅದನ್ನು ತಾವು ತೋರಿಸುವುದಾಗಿ ಹೇಳಿದರು.

ಅಂಕೋಲಾದಿಂದ ಬಂಕಿಕೂಡ್ಲಕ್ಕೆ ಹೋಗುವ ಮಾರ್ಗದಲ್ಲಿ ಒಂದು ಮಾರ್ಕಂಡೇಯ ದೇವಸ್ಥಾನವಿರುವುದನ್ನು ನೆನಪು ಮಾಡಿಕೊಂಡು ಅದನ್ನು ತಾವು ಮತ್ತೆ ನೋಡಬೇಕೆಂದು ಬಯಸಿದರು. ಆ ದೇವಸ್ಥಾನ ಸಿಕ್ಕಾಗ ಅದರ ಗುರುತು ಕವಿಗೆ ಆಗಲಿಲ್ಲ ; ಕಾರಣ ಅದರ ಜೀರ್ಣೋದ್ಧಾರ ಆಗಿತ್ತು. ನಗುತ್ತಾ ಹೇಳಿದರು, "ಈ ಊರಲ್ಲಿ ಮಾರ್ಕಂಡ ಎನ್ನುವ ಒಬ್ಬ ಯೋಧ ಶತ್ರುಗಳ ವಿರುದ್ಧ ಹೋರಾಡಿದ್ದರ ಗುರುತಾಗಿ ಅವನ ಹೆಸರಲ್ಲಿ ಈ ದೇವಸ್ಥಾನ ಕಟ್ಟಿದ್ದು. ಅದೇ ಬರಬರುತ್ತಾ ಮಾರ್ಕಂಡೇಯ ದೇವಸ್ಥಾನ ಎಂದಾಗಿ, ಈಗ ಶಿವನ ದೇವಸ್ಥಾನವಾಗಿದೆ. ಪುರಾಣ ಚರಿತ್ರೆಗಳ ಸಂಬಂಧ ಹೀಗಿದೆ ನೋಡಿ". ಆಮೇಲೆ "ಇರಿ, ಇದೇ ದೇವಸ್ಥಾನದ ಎದುರಿಗೆ ಬಕುಳದ ಮರ ಇತ್ತು", ಎನ್ನುತ್ತಾ ಕಾರಿನಿಂದ ಇಳಿದರು. ಮಗುವಿನಂತೆ

ಓಡಿದರು. ದೇವಸ್ಥಾನದ ಆಸು ಪಾಸೆಲ್ಲ ಸುತ್ತಾಡಿದರು. "ಇಲ್ಲೇ ಆ ಮರ ಇದ್ದಿದ್ದು. ಇಲ್ಲೇ ಆ ಕವನ ಹುಟ್ಟಿದ್ದು" ಎನ್ನುತ್ತಾ ಮತ್ತೆ ನಕ್ಕರು. "ಇದು ಇವರು ಸಾಲೀಗೆ ಹೋಗೋ ಬರೋ ಮಾರ್ಗ. ದಿನಾ ಅ ಮರ ದಾಟಿ ಹೋಗುತ್ತಿದ್ದರು", ಅನುಮೋದಿಸಿದರು ಶ್ರೀಮತಿ ಎಕ್ಕುಂಡಿಯವರು. "ಆ ಮರ ಈಗಿಲ್ಲ, ಆದರೆ ಬಕುಳದ ಮರಗಳಿಗೆ ಹೂಗಳಿಗೆ ಕೊರತೆಯಿಲ್ಲ. ಮುಂದೆ ತೋರಿಸುತ್ತೇನೆ" ಎಂದ ಎಕ್ಕುಂಡಿಯವರನ್ನು "ಆ ಕವನ ಹುಟ್ಟಿದ ಇದೇ ಜಾಗದಲ್ಲಿ ಒಂದು ಫೋಟೋ ತೆಗೆಯುತ್ತೇನೆ ದಯವಿಟ್ಟು ನಿಲ್ಲಿರಿ" ಎಂದು ಕೇಳಿಕೊಂಡೆ. ಅಷ್ಟರಲ್ಲಿ ದೇವಸ್ಥಾನದ ಮುಂದೆ ಇದ್ದ ನಲ್ಲಿಯೊಂದರಲ್ಲಿ ನೀರು ಸೋರುತ್ತಿರುವುದನ್ನು ಗಮನಿಸಿ ಎಕ್ಕುಂಡಿಯವರು "ಬಂದೆ" ಎನ್ನುತ್ತಾ ಮತ್ತೆ ಓಡಿದರು. ನಲ್ಲಿ ನಿಲ್ಲಿಸಿ ಬಂದು, ಶ್ರೀಮತಿಯವರೊಂದಿಗೆ ಫೋಟೋ ತೆಗೆಸಿಕೊಂಡರು.

ಮುಂದೆ ಬಕುಳದ ಬೃಹತ್ ವೃಕ್ಷವೊಂದನ್ನು ತೋರಿಸಿ ಪರಿಚಯಿಸಿದರು. ಅದರ ತುಂಬೆಹೂ ಗಾತ್ರದ ಪರಿಮಳಯುಕ್ತ ಹೂಗಳನ್ನು ಆರಿಸಿ ಎತ್ತಿ ತೋರಿಸಿದರು. ಕೊಂಬೆಯೊಂದನ್ನು ಜಗ್ಗಿ ಎಳೆದು ತೋರಿದರು. ಅಲ್ಲಿನ ಸ್ಥಳೀಯ ಜನರಾದ ಸಿದ್ದಿಗಳ ಮದುವೆಗಳು ಒಡವೆಗಳಿಲ್ಲದಿದ್ದರೂ ಸರಿ, ಬಕುಳದ ಹೂಗಳಿಲ್ಲದೆ ಹೇಗೆ ಅಪೂರ್ಣವಾಗುವುದೆಂದು ತಿಳಿಸಿದರು. ದಿನಗಟ್ಟಲೆ ವಾರಗಟ್ಟಲೆ ತಿಂಗಳುಗಟ್ಟಲೆ ಈ ಹೂಗಳು ಗಂಧ ಸೂಸುತ್ತಲೇ ಇರುತ್ತೆಂದು ತಿಳಿಸಿದರು.

ಅಲ್ಲಿಂದ ಮುಂದೆ, ಇಷ್ಟು ಹೊತ್ತೂ ಕಣ್ಣಿಗೆ ಕಾಣುವಂತಿದ್ದರೂ ನಾನು ಕಂಡಿರದು ಕಾಣತೊಡಗಿತು : ಎಲ್ಲ ಸಿದ್ದಿ ಹೆಣ್ಣುಮಕ್ಕಳ ಮುಡಿಯಲ್ಲಿ ಬಕುಳದ ಹೂದಂಡೆ ; ಎಲ್ಲ ಮಾರುಕಟ್ಟೆ ಅಂಗಡಿ ಬೀದಿಗಳಲ್ಲಿ ಬಕುಳದ ಹೂದಂಡೆ ! ಸಮಾರಂಭದಲ್ಲಂತೂ ಬಿಡಿ, ಎಲ್ಲರ ಬಾಯಲ್ಲೂ "ಬಕುಳದ ಹೂ"ವಿನದೇ ಮಾತು !

ಎಕ್ಕುಂಡಿಯವರು ಬಕುಳದ ಹೂವಿನಂತೆಯೇ : ಕೋಮಲ, ಸೌಮ್ಯ, ಸುಗಂಧಭರಿತ, ಮುಗ್ಧ, ಮೃದು ; ವಿಶಾಲ ವೃಕ್ಷವೊಂದರ ನಿರಾಡಂಬರ ಕುಸುಮ. ಬಹಳ ಕಾಲ ಸುಗಂಧ ಸೂಸವ ಹೂವು.

"ಆ ಮರ ಈಗಿಲ್ಲ. ಆದರೆ ಬಕುಳದ ಮರಗಳಿಗೆ ಹೂಗಳಿಗೆ ಕೊರತೆಯಿಲ್ಲ..." ಕವಿ ಹೇಳಿದ ಮಾತು.

ಸಫಲವಾಗಲಿ, ವಿಫಲವಾಗಲಿ ಮನುಷ್ಯ ಕನಸುಗಳನ್ನು ಹೊಂದಿರಬೇಕು, ಕನಸುಗಳು ಜೀವನವನ್ನು ಶ್ರೀಮಂತಗೊಳಿಸುತ್ತವೆ.

ಸು. ರಂ. ಎಕ್ಕುಂಡಿ

ಸುಬ್ಬಣ್ಣ ರಂಗನಾಥ ಎಕ್ಕುಂಡಿ

ಮಹಾಬಲಮೂರ್ತಿ ಕೊಡ್ಲೆಕೆರೆ

ಎಕ್ಕುಂಡಿಯವರನ್ನು ನಾನು ನೋಡಿದ್ದು ನಾನು ಓದುತ್ತಿದ್ದ ಗೋಕರ್ಣದ ಎರಡನೇ ನಂಬರ್ ಶಾಲೆಯಲ್ಲಿ. ನಾನಾಗ ನಾಲ್ಕನೆ ಇಯತ್ತೆಯ ಹುಡುಗ. ನಮ್ಮ ಶಾಲೆಗೆ ಯಾವುದೋ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಅವರು ಆಗಮಿಸಿದ್ದರು.

ಅವರು ಏನು ಭಾಷಣ ಮಾಡಿದರೊ, ಏನನ್ನು ವಿವರಿಸಿದರೊ ಅದ್ಯಾವುದನ್ನೂ ನಾನು ನೆನಪಿಸಿಕೊಳ್ಳಲಾರೆ. ಆದರೆ ಅವರು ಒಂದೆರಡು ಅವರ ಕವಿತೆಗಳನ್ನು ಓದಿದ್ದರು. ಅದು 'ಮೂಡಣ ದೀಪವನುರಿಸುವ ಕೈಯಿಗೆ ಶರಣೆಂಬೆವು ನಾವು' ಎಂಬ ಒಂದು ಪದ್ಯ.

ಆದರೆ ಆಗ ನನಗೆ ಆ ಪದ್ಯ ಅರ್ಥವಾಗಿರದಿದ್ದರೂ ಅವರು ಕವಿತೆ ಹಾಡಿದ ರೀತಿ ಮನಸ್ಸಿಗೆ ತುಂಬ ಹಿತವೆನಿಸಿತ್ತು. ಬಹುಶಃ ಸಾಹಿತ್ಯದ ಕುರಿತು ಆಸಕ್ತಿಯ ಮೊಳಕೆ ನನ್ನಲ್ಲಿ ಮೊಳೆತದ್ದೂ ಇಲ್ಲಿಂದಲೇಯೋ ಏನೊ ? ಇಲ್ಲಿಂದಲೆಯೇ ಎಂಬ ನಿರ್ದಿಷ್ಟ ಗೀಟು ಎಳೆಯುವುದು ಅವಸರದ್ದಾದರೂ ಕಾವ್ಯದ ಕುರಿತಾಗಿನ ಸಂವೇದನೆ ನನ್ನಲ್ಲಿ ಬೇರು ಬಿಟ್ಟದ್ದೋ, ಮುಂದೆ ಬಿಡಲಿರುವ ಬೇರಿಗೆ ಅದೇನನ್ನೋ ಗುಟುಕುಕೊಟ್ಟ ಮೂಲ ದ್ರವ್ಯವೊ...ಏನೋ ಒಂದಂತೂ ಹೌದು. ಅಥವಾ ಇದು ಹೀಗೇ ಎಂದು ವಿವರಿಸುವುದಕ್ಕೂ ತುಸು ಕಷ್ಟವಾಗುತ್ತದೆ. ಅಂತೂ ಎಕ್ಕುಂಡಿ ನನಗೆ ಅದೆಂತದೋ ಮೋಡಿ ಹಾಕಿದ್ದಂತೂ ನಿಜ. ನಮ್ಮ ಆ ಕನ್ನಡ ಶಾಲೆಯಿರುವಲ್ಲಿಂದ ತೀರಾ ಹತ್ತಿರದಲ್ಲಿ ಬರುವ ಕಡಲಿನ ತೆರೆಗಳ ಶಬ್ದ ಎಕ್ಕುಂಡಿ ಹಾಡಿದ ಕವಿತೆಯ ಸುಮಧುರತೆಯೊಂದಿಗೆ ತಾಳ ಬಾರಿಸಿದಂತಿತ್ತು.

ನಮ್ಮ ಆ ಶಾಲೆಗೆ ಹತ್ತಿರವೇ ಇದ್ದ ಗೌರೀಶ ಕಾಯ್ಕಿಣಿಯವರ ಮನೆಗೆ ಆಗಾಗ ಹೋಗಿ ಬರುತ್ತಿದ್ದ ಅವರನ್ನು ನಂತರ ಎಷ್ಟೋ ಸಲ ಶಾಲೆಯ ಕಡಗಟ್ಟಿನ ಮೇಲಿಂದ ನೋಡಿದ್ದಿದೆ ಗೋಪಜ್ಜಿ ಮನೆ ಮುಂದಣ ಜಾಗೆಯಲ್ಲಿ ಹಾಣಿಗೆಂಡೆ ಆಟವಾಡುತ್ತಿದ್ದ ನಾವು ಗೆಳೆಯರು ಅವರು ಗೌರೀಶರ ಮನೆಗೆ ಹೋಗುವ ದಾರಿಯಲ್ಲಿ ಅವರನ್ನು ಕಂಡು ಅಂದು ಶಾಲೆಯಲ್ಲಿ ಹಾಡಿದವರು ಎಂದು ಗುರುತಿಸಿ ಅವರನ್ನು ಮುತ್ತಿಕೊಂಡಿದ್ದದೆ. ಆಗ ಅವರು ಅವರ ಧಾರವಾಡೀ ಕನ್ನಡದಲ್ಲಿ "ಹ್ಯಾಂಗಿದಿರೀ, ಎಷ್ಟನೇ ನಂಬ್ರಾ ಬಂದ್ರಿ

ಶಾಲೀ ಒಳಗ, ಚಲೋ ಓತ್ತೀರಿ ಹೌದಲ್ಲೊ" ಎಂದು ಮಣ್ಣಾಗಿದ್ದರೂ ನಮ್ಮ ಕೈ ಕುಲುಕಿ ಹೋಗುತ್ತಿದ್ದರು. ಅವರು ನಮ್ಮೂರಿನ ಪಕ್ಕದ ಕುಗ್ರಾಮ ಬಂಕಿಕೊಡ್ಲದಲ್ಲಿ ಹೈಸ್ಕೂಲಿನಲ್ಲಿ ಹೆಡ್ಮಾಸ್ತರ್ ಆಗಿದ್ದರು.

ಒಂದು ಸಲ (ಆಗ ಬಂಕಿಕೊಡ್ಲದಲ್ಲಿ ಬೊಳೀರ್ ಜಾತ್ರೆ ಎಂದು ಒಂದು ಜಾತ್ರೆ ಜೋರಾಗಿ ನಡೆಯುತ್ತಿತ್ತು. ನಮಗೆಲ್ಲ ಗೆಳೆಯರಿಗೆ ಟಾರು ಇದ್ದಿರದ ಆ ಮಣ್ಣು ರಸ್ತೆಯಲ್ಲಿ ಬಂಕಿಕೊಡ್ಲದ ಜಾತ್ರೆಗೆ ಹೋಗಿ ಬರುವುದು ಖುಷಿಯಾಗುತ್ತಿತ್ತು. ಹೋಗಿ ಬರುತ್ತಿದ್ದೆವು) ಬೊಳೀರ್ ಜಾತ್ರೆಗೆ ಬಂಕಿಕೊಡ್ಲಕ್ಕೆ ಹೋಗಿದ್ದಾಗ ಎಕ್ಕುಂಡಿಯವರ ಮನೆಗೂ ಹೋಗಿ ಬಂದಿದ್ದೆವು ನಾವು ಒಂದೆರಡು ಗೆಳೆಯರು. ಆಗ ಅವರಿಗೆ ನಾನು ಕೊಡ್ಲೆಕೆರೆ ಗಜು ಭಟ್ಟರ ಮಗ ಎಂದು ತಿಳಿದದ್ದು. ಓಹೋಹೋ ನೀನು ಅವರ ಮಗನೊ ಎಂದು ಕಣ್ಣಾಡಿಸಿದ ರೀತಿ ಈಗಲೂ ಮರೆಯಲಾಗುತ್ತಿಲ್ಲ. ಆಗ ನನ್ನ ತಂದೆ TDB ಉಪಾಧ್ಯಕ್ಷರಾಗಿದ್ದ ಸಮಯ. ಬಂಕಿಕೊಡ್ಲದ ಶಾಲೆಯ ವಿಷಯ ವೊಂದಕ್ಕೆ ನನ್ನ ತಂದೆ ಜತೆ ಕುಮಟಾಕ್ಕೆ ಹೋಗಿದ್ದಾಗ ಬಸ್ತಿ ಪೇಟೆಯಲ್ಲಿ ಮಳೆ ಬಂದು ನೆನೆದು ಗಂಟೆಗಟ್ಟಲೆ ಹೊಟೆಲೊಂದರಲ್ಲಿ ಮಾತನಾಡಿದ್ದ ರೀತಿ ವಿವರಿಸಿದ್ದರು.

ಇವನ್ನೆಲ್ಲ ಯಾಕೆ ಬರೆಯುತ್ತಿದ್ದೇನೆ ಎಂದರೆ ಇವೆಲ್ಲ ವರ್ತಮಾನಗಳು ಭೂತ ಕಾಲಕ್ಕೆ ಸರಿದು ನೆನಪಾದ ಸಂಗತಿಗಳಾಗಿದ್ದು ವರ್ಷಗಟ್ಟಲೆ ಹಿಂದಿನವು ಎಂದು ಅನಿಸದೇ ಇರುವುದಕ್ಕಾಗಿ. ನಿನ್ನೆ ಮೊನ್ನೆಯ ತನಕವೂ ನಾನು ಗೋಕರ್ಣದ ಬೀದಿಯಲ್ಲಿ ಹಾಣೆಗೊಂಡೆ ಆಡುತ್ತಿದ್ದ ಹುಡುಗ, ಕವಿಯಾದ ಎಕ್ಕುಂಡಿ ಮಾಸ್ತರನ್ನು ನನ್ನ ಕೊಳೆಯಾದ, ಮಣ್ಣಾದ ಕೈಗಳಿಂದ ಮುಟ್ಟಿದ್ದೆ ಎಂದೇ ಅನಿಸುತ್ತಿದೆ. ಆದರೆ ಅದೇ ಎಕ್ಕುಂಡಿ ಮಾಸ್ತರ್ರು ನಾನು ಬ್ಯಾಂಕೊಂದನ್ನು ಕೆಲಸಕ್ಕಾಗಿ ಸೇರಿ, ವರ್ಗಾವರ್ಗಿಗೊಳ್ಳುತ್ತ ತೂರಾಡುತ್ತ, ತೇಲುತ್ತ ಬೆಂಗಳೂರಿಗೇ ಬಂದಿದ್ದಾಗಿನ ದಿನಗಳಲ್ಲಿಯೇ ಬೆಂಗಳೂರಿಗೆ ಬಂದು ಆಗಾಗ ಎಲ್ಲೆಲ್ಲೋ ಕಾರ್ಯಕ್ರಮಗಳಲ್ಲಿ ಸಿಕ್ಕ ಬಾಲ್ಯದಲ್ಲಿ ಕುಲುಕಿದ್ದ ಕೈಗಳಿಗೆ (ಕಪ್ಪು ರೋಮಗಳು ದಟ್ಟೈಸಿದ ಈ ದಿನಗಳಲ್ಲಿ) ಈಗಲೂ ಅವರ ಕೈಕುಲುಕುವ ಆರ್ದ್ರತೆ ಒದಗಿಕೊಳ್ಳ ತೊಡಗಿದ್ದು ಖುಷಿ ಎನಿಸುತ್ತಿತ್ತು. ಅದೇ ಎಕ್ಕುಂಡಿ ಮಾಸ್ತರ್ರು ಪ್ರಾಣ ಬಿಟ್ಟು ನಿರ್ಜೀವವಾಗಿ ಬಿದ್ದುಕೊಂಡಿದ್ದನ್ನು ನೋಡುವುದೂ ಈ ಬೆಂಗಳೂರಿನಲ್ಲಿ ಒದಗಿ ಬರುತ್ತದೆಯೆಂಬುದು ನನಗೆ ತಿಳಿದಿರಲಿಲ್ಲ.

ಪ್ರಾಣ ನೀಗಿ ಮಲಗಿದ್ದರೂ ಎಕ್ಕುಂಡಿಯವರು 'ಓ ಮಾಬಲ ಮೂರ್ತಿ' ಎಂದು ಕೈಕುಲುಕಲು ಎದ್ದು ಬಂದು ಬಿಡುತ್ತಾರೆ ಎಂದೇ ಅನಿಸುತ್ತಿತ್ತು ಎಷ್ಟೋ ಹೊತ್ತಿನ ತನಕ.

ಆದರೆ ಅದು ಹಾಗಾಗಲಿಲ್ಲ. ನನ್ನ ಕೈಗಳು ತಬ್ಬಲಿಯಾದವು ಎಂದು ಆಗ ಅನಿಸದಿರಲಿಲ್ಲ. ಸಾವು ಎಂದರೆ ಏನು ಎಂಬುದು ಮತ್ತೂ ದಟ್ಟವಾದ ಸಂಗತಿ

ಯಾಯ್ತು. ಎಕ್ಕುಂಡಿಯವರು ಒದಗಿಸಿದ ಕೊನೆಯ ಪಾಠವದು. ಎಕ್ಕುಂಡಿಯವರು ಬದುಕಿರುವ ತನಕವೂ ಮನಸ್ಸಿನ ಅಂಗಳದಲ್ಲಿ ನಾನಿನ್ನೂ ಹಾಣೆಗೆಂಡೆ ಆಡುವ ಹುಡುಗ ಎಂಬ ಭಾವನೆಯೇ ತುಂಬಿರುತ್ತಿತ್ತು. ಅವರ ಸಾವು ಬದುಕಿನ ಮತ್ತೊಂದು ಕಾವ್ಯದ ಬಳೆಯನ್ನು ತೆರೆದಿಟ್ಟಿತು. 'ಕಾಲೋ ಜಗದ್ಭಕ್ಷಕ' ಎಂಬ ಮಾತು ಸ್ಪಷ್ಟವೆನಿಸಿತ್ತು. ಕಾಲ ಅವರನ್ನಂತೂ ಮುಗಿಸಿತ್ತು. ನನ್ನ ಬಾಲ್ಯಕ್ಕೂ ಒಂದು ತೆರೆ ಎಳೆದಿತ್ತು. ಅಬ್ಬ ..ಸಾವೆ !

ನನ್ನ ಪ್ರಥಮ ಕವನ ಸಂಕಲನಕ್ಕೆ ಮುನ್ನುಡಿ ಬರೆದುಕೊಟ್ಟಿದ್ದರು. ನನ್ನ ಸಂಕಲನವೇನು ಒಳ್ಳೆಯ ಸಂಕಲನವಲ್ಲ. ಆದರೂ ಎಕ್ಕುಂಡಿಯವರು ನನ್ನನ್ನು ತುಂಬಾ ಹೊಗಳಿದ್ದರು, ಅವರ ಹೊಗಳಿಕೆಯೇ ಒಂದು ಕನ್ನಡಿಯಾಗಿತ್ತು. ನನ್ನ ಕುಬ್ಜತೆಯನ್ನು ತೋರಿಸುತ್ತಲೇ ಇತ್ತು. ಆ ಕನ್ನಡಿಯ ಮೂಲಕ ನಾನು ಎಲ್ಲೆಲ್ಲಿ ತುಂಬಿಕೊಳ್ಳಬೇಕು ಎಂಬ ವಿಷಯವನ್ನು ಪರೋಕ್ಷವಾಗಿ ತಿಳಿ ಹೇಳಿದ್ದರು. ನಾನೇ ಹಣ ಹಾಕಿ ತಂದ ಆ ಕವನ ಸಂಕಲನದ ಪ್ರತಿಗಳು ಇನ್ನೂ ನನ್ನಲ್ಲಿ ನಾಲ್ಕೈದು ನೂರಾದರೂ ಇವೆ. ಆದರೆ ಯಾರಿಗೂ ಕೊಡುತ್ತಿಲ್ಲ ನಾನೀಗ ಅವನ್ನು. ಎಕ್ಕುಂಡಿಯವರ ಮುನ್ನುಡಿಯ ಬಲದಿಂದಲೇ ನನ್ನನ್ನು ನಾನು ವಿಮರ್ಶಿಸಿಕೊಳ್ಳಬಹುದಾದ ಶಕ್ತಿ ಒದಗಿ ಉತ್ತಮ ಕವನಗಳನ್ನು ಬರೆಯಲು ಈಗ ಪ್ರಯತ್ನಿಸುತ್ತಿರುವದಂತೂ ನಿಜ.

ಈಗ ಎಕ್ಕುಂಡಿಯವರಿಲ್ಲ. ಅವರ ಕಾವ್ಯದ ಕುರಿತು ನಾನು ಬರೆಯ ಬಯಸುವುದಿಲ್ಲ. ಕಾವ್ಯದ ಕುರಿತು ಬರೆದರೆ ಮತ್ತೆ 'ಅನ್ನರೊರೆದುದನೆ' ಎಂಬ ಅಡಿಗರ ಮಾತು ನೆನಪಿಗೆ ಬಂದು ಕಾಡುತ್ತದೆ. ಬದಲು ಹಾಣೆಗೆಂಡೆಯಾಟ ಆಡಿ ಮಣ್ಣಾದ ಕೈಗಳಿಂದ ಅವರ ಕೈಕುಲುಕಿ ಸಂತಸಿಸಿದ ಗೋಕರ್ಣದ ಅಂದಿನ ವರ್ತಮಾನವನ್ನು ಒಮ್ಮೆ ಇಲ್ಲಿ ನೆನಪಿಸಿಕೊಂಡು, ಬೆಂಗಳೂರಿನ ಮಣ್ಣಲ್ಲಿ ಇಂಗಿ ಹೋದ ಎಕ್ಕುಂಡಿಯವರನ್ನು ಸಾವು ಬದುಕಿನ ಸಂದರ್ಭದ ಒಂದು ಟಿಪ್ಪಣಿಯಾಗಿ ಇಲ್ಲಿ ಬರೆದಿದ್ದೇನೆ. ಅಷ್ಟೆ.

ತಪ್ಪೋಲೆ

★ ಕಳೆದ ಗ್ರಾಫಿಕ್ ವಿಶೇಷ ಸಂಚಿಕೆಯ (ಸಂ : 4) ಕೆ. ವಿ. ಸುಬ್ರಹ್ಮಣ್ಯಂ ಅವರ ಲೇಖನದಲ್ಲಿ ಕೆ. ಜಿ. ಸುಬ್ಬಣ್ಣ ಎನ್ನುವ ಬದಲಾಗಿ ಕೆ. ಜಿ. ಸುಬ್ರಹ್ಮಣ್ಯಂ ಎಂದು ತಪ್ಪಾಗಿ ಅಚ್ಚಾಗಿದೆ. ಇದಕ್ಕಾಗಿ ವಿಷಾದಿಸುತ್ತೇವೆ.

★ ಸಂಚಿಕೆ 5ರಲ್ಲೂ ಅನೇಕ ಅಚ್ಚು ದೋಷಗಳಿಗಾಗಿ ವಿಷಾದಿಸುತ್ತೇವೆ.

–ಸಂ

ಕೆಲವು ಕಣ್ಣುಗಳ ಹಲವು ನೋಟಗಳಲ್ಲಿ...

● **ಪು. ತಿ. ನರಸಿಂಹಾಚಾರ್**

ಎಕ್ಕುಂಡಿಯವರಂಥ ಕವಿಗಳು ತುಂಬ ವಿರಳ. ಈ ವಿರುವೆಯವರು ಎಲ್ಲ ಕಾಲದಲ್ಲೂ ಲಭಿಸುವಂಥವರಲ್ಲ. ಇಂಥವರಿಂದ ಭಾಷೆಗೆ ಒಂದು ಮೆರಗು ಬರುತ್ತದೆ ; ಜನಪದ ಆತ್ಮಗೌರವ ಸಂಪನ್ನವಾಗುತ್ತದೆ. ಪದವಿ ಪ್ರತಿಷ್ಠೆಗಳ ಕಾಂಕ್ಷೆಯಿಂದ ಇಂಗ್ಲಿಷ್ ಭಾಷೆಯ ವ್ಯಾಮೋಹಕ್ಕೆ ಸಿಕ್ಕಿ ತಮ್ಮ ವಾಗಿಂದ್ರಿಯವನ್ನು ಶೋಷಿಸಿಕೊಂಡು ನಖ ದಂಷ್ಟ್ರಗಳನ್ನು ಬೆಳೆಸಿಕೊಳ್ಳಲು ಯತ್ನಿಸುತ್ತಿರುವ ನಮ್ಮ ನಾಡಿನ ಧೀಮಂತರು ಇಂಥ ಕವನವನ್ನು ಓದಿ ತಮ್ಮ ನೈಜ ಸತ್ವದ ತಿಳಿವನ್ನು ಪಡೆದಾರು ಎನ್ನುವಂತಿವೆ ಇವರ ಕವನಗಳು. ಏಕೆಂದರೆ, ಈ ಜಾತಿಯ ಕವನಗಳು ಬ್ಲೇಕ್ ಕವಿಯವಕ್ಕೇನೂ ಕಡಿಮೆಯವಲ್ಲ. ಅಲ್ಲದೆ ಇವು ಸ್ವಚ್ಛದೇಸೀ ಕವನಗಳು, ತಮ್ಮ ದೇಸಿಯಿಂದಲೇಶೋಭಿಸುವಂಥವು.

(ಬೆಳ್ಳಕ್ಕಿಗಳು–ಬೆನ್ನುಡಿಯಿಂದ)

● **ಶಾಂತರಸ**

ತಕ್ಷಣ ಎಕ್ಕುಂಡಿ ಕುರಿತು ಏನಾದರೂ ಹೇಳೋದು ಕಷ್ಟ. ಅವರ ವ್ಯಕ್ತಿತ್ವ ಬಹಳ ಸಂಯಮದ ಹಿರಿತನದ ಮಾನವೀಯ ಸಂಬಂಧಗಳನ್ನು ಹೊಂದಿತ್ತು. ಅವರ ಹುಡುಕಾಟ ಯಾವಾಗಲೂ ಸೌಂದರ್ಯ ಚೆಲುವಿನ ಕಡೆಗಿತ್ತು.

ಅವರು ನಂಬಿದ್ದ ಜನಪರವಾದ ಶೋಷಣೆ ಬಡತನದ ವಿರುದ್ಧದ ನಿಲುವುಗಳು ನನ್ನದೂ ಆಗಿದ್ದರಿಂದ ನನಗೆ ಬಹಳ ಸೇರಿತು. ಎಕ್ಕುಂಡಿಯವರ ಮಧ್ವ ಮತ್ತು ಮಾರ್ಕ್ಸ್ ಕುರಿತ ನಿಲುವು ಹೊರ ನೋಟಕ್ಕೆ ದ್ವಂದ್ವವಾಗಿ ಕಂಡರೂ, ಮನುಷ್ಯನ ಬದುಕಿನ ಕಷ್ಟನಷ್ಟಗಳು ಮಾರ್ಗದರ್ಶಕವಾಗಿ ನಮ್ಮ ದಾರಿ ಕಂಡುಕೊಳ್ಳಲು ಬೇಕಾದ ತಾತ್ವಿಕ ನೆಲೆಗಟ್ಟನ್ನು ಮಾಧ್ವ ಸಿದ್ಧಾಂತ ಕೊಟ್ಟದೆ. ಮಾಧ್ವ ಸಿದ್ಧಾಂತ ಅಂದ ತಕ್ಷಣ ನಾವು ಮೆಟ್ಟಿ ಬೀಳಬೇಕಿಲ್ಲ. ಯಾವ ಸಿದ್ಧಾಂತವೇ ಆಗಲಿ ಜನರಿಗೆ ವಿರುದ್ಧವಾದದ್ದಲ್ಲ ಹಾಗಿದ್ದರೆ ಯಾರೋ ಹೊರಗಿನಿಂದ ತಂದು ಹಾಕಿದ್ದಿರಬಹುದೇ ಹೊರತಾಗಿ ಮೂಲ ಸಿದ್ಧಾಂತ ಹಾಗಿರುವುದಿಲ್ಲ, ಎಕ್ಕುಂಡಿ ಮಾಧ್ವ ಸಿದ್ಧಾಂತ ಮೈಗೂಡಿಸಿಕೊಂಡಿದ್ದರೂ ಈ ಇಪ್ಪತ್ತನೇ ಶತಮಾನದ ಮನುಷ್ಯನಿಗೆ ತಾತ್ವಿಕವಾಗಿ ಮಾರ್ಕ್ಸ್ ಸಿದ್ಧಾಂತ ಕೂಡಾ ಆರ್ಥಿಕ ಸಾಮಾಜಿಕವಾಗಿ ಅಗತ್ಯ ಬೀಳುತ್ತದೆ, ಎಕ್ಕುಂಡಿಯವರ ಮಾನಸಿಕ ಮತ್ತು ಆತ್ಮಸ್ಥ ನೆಲೆಗಟ್ಟೇಸಿತ್ತು ಅದು ಜನಪರವಾಗಿತ್ತು. ಅಂತೆಯೇ ಅಲ್ಲಿ ಮಧ್ವ ಮತ್ತು ಮಾರ್ಕ್ಸ್ ಸಿದ್ಧಾಂತಗಳೆರಡೂ ನೆಲೆಗೊಂಡಿವೆ.

ಕವಿಯಾಗಿ ಒಂದು ಕಾಲದಲ್ಲಿ ಯಾರೋ ಒಂದಿಬ್ಬರು ಹೆಸರು ಮಾಡುತ್ತಾರೆ. ಆದರೆ ಅವರ ಜೊತೆಗೇ ಇತರರೂ ಅಸಮರ್ಥರು ಅಂತೇನಲ್ಲ. ಕನ್ನಡದಲ್ಲಿ ಕಥನ ಕಾವ್ಯಕ್ಕೆ ಎಕ್ಕುಂಡಿ ಕೊಟ್ಟ ಕೊಡುಗೆ ಬಹಳ ಹೊಸದು. ತಮ್ಮ ಎಲ್ಲ ನಿಲುವು ಅನಿಸಿಕೆಗಳನ್ನು ಅವರು ಪೌರಾಣಿಕ ಪ್ರತಿಮೆ ಕಥಾನಕಗಳ ಮೂಲಕ ತಿಳಿಸಿದರು. ಜನರಿಗೆ ಸೇರದೇ ಹೋಗುವುದನ್ನ ಬರೆದರೆ ಕಾಲವೇ ಅದನ್ನು ಬದಲಾಯಿಸಿ ಹೊಸತನ್ನ ಕೊಡುತ್ತಾ ಹೋಗುತ್ತದೆ. ಜನರ ಒಳಗಿನ ತುಡಿತ ಕಾಲದ ತುಡಿತವಾಗುತ್ತದೆ. ಅಂಥಾ ತುಡಿತವನ್ನು ಕವಿಯಾದವನು ಪೂರೈಸುತ್ತಾನೆ ಅದನ್ನ ಮಾಡಿದವರಲ್ಲಿ ಎಕ್ಕುಂಡಿಯೊಬ್ಬರು, ಇವತ್ತು ಇನ್ನೂ ಕಥನ ಕವನಗಳು ಬೇಕು.

ಎಕ್ಕುಂಡಿಯವರ ಬಗ್ಗೆ ನಮ್ಮಲ್ಲಿ ಚರ್ಚೆಯಾಗಿಲ್ಲ. ಅವರಿಗೆ ಅನ್ಯಾಯವಾಗಿದೆ. ನಾವು ಕನ್ನಡಿಗರು ಸಮಗ್ರವಾಗಿ ನೋಡಲು ಕಲಿತಿಲ್ಲ ನಾಲ್ಕು ಮಂದಿಗೆ ಮಾತ್ರಾ ಬೇಕಾದ್ದು ಆಗುತ್ತಿದೆ. ಒಂದು ಗುಂಪು ಯಾರನ್ನ ಪ್ರಚಾರ ಮಾಡುತ್ತದೋ ಅವರಿಗಿಂತಾ ಸಮರ್ಥರಾದ ಇತರ ಕವಿಗಳು ಮೂಲೆಗುಂಪಾಗುತ್ತಾರೆ ಎಕ್ಕುಂಡಿ ಒಂದು ಉದಾಹರಣೆ ಅಷ್ಟೆ ಅವರಂತೆ ಬಹಳ ಮಂದಿ ಉಳಿದಿದ್ದಾರೆ.

ಕನ್ನಡದಲ್ಲಿ ಎಕ್ಕುಂಡಿಯವರನ್ನ ಬಿಟ್ಟರೆ ತಮ್ಮ ಕವನಗಳನ್ನ ಚೆನ್ನಾಗಿ ಹಾಡುವ ಕವಿಗಳು ಕಾಣಬರುವುದಿಲ್ಲ. ಕಾವ್ಯವಾಚನ ಒಂದು ಕಲೆ, ನಮ್ಮ ಕವಿಗೋಷ್ಠಿಗಳು ಬಹುಮಟ್ಟಿಗೆ ಯಶಸ್ವಿಯಾಗುವುದೇ ಇಲ್ಲ. ಉರ್ದುವಿನ ಮುಷಾಯೆರಾ ಗಮನಿಸಿ, ಅದು ಗೇಯ ಪ್ರಧಾನವಾದ್ದು ನಮ್ಮ ಕವಿ ಸಮ್ಮೇಳನಗಳಲ್ಲಿ ಭಾವಪೂರ್ಣವಾಗಿ ಕವಿತೆ ಓದೋದು ಕಡಿಮೆ ಹಾಗೆ ಓದುವುದೂ ಹಾಡುವುದೂ ಒಂದು ಕಲೆ, ಗಮಕ್ ಬೇರೆ ಕವಿತೆ ಹಾಡೋದು ಬೇರೆ.

ಹೆಚ್. ಎಸ್. ವೆಂಕಟೇಶಮೂರ್ತಿ

ಎಕ್ಕುಂಡಿ ಮುಖ್ಯವಾಗಿ ಕಥನ ಪ್ರತಿಭೆಯ ಕವಿ. ಅದನ್ನೇ ಅವರು ತಮ್ಮ ಅಭಿವ್ಯಕ್ತಿಯ ಎಲ್ಲ ಶಕ್ತಿಯ ವಿನಿಯೋಗಕ್ಕೂ ಎಲ್ಲರಿಗಿಂತ ಭಿನ್ನವಾಗಿ ಬಳಸಿಕೊಂಡರು ಆ ಭಿನ್ನತೆ ಸ್ವರೂಪ 'ವರ್ಣನಾಪ್ರಧಾನವಾದ'ದ್ದು, ಕಥನದಲ್ಲಿ ಸಾಮಾನ್ಯವಾಗಿ ವರ್ಣನೆಗೆ ಸಮಯವಿರುವುದಿಲ್ಲ. ಕಥನ ಮುಂದೋಡುತ್ತಲೇ ಇರಬೇಕು. ಆದರೆ ಕಥನ ಗುಣಕ್ಕೆ ವರ್ಣಕ ಗುಣವನ್ನ ಬೆರೆಸಿದ್ದು ಅವರ ವಿಶಿಷ್ಟ ಸಾಧನೆ.

ಮತ್ತೊಂದು ವಿಶೇಷತೆ ಅವರ 'ಪುರಾಣ ಪ್ರೀತಿ'. ಇತಿಹಾಸ ಮತ್ತು ಪುರಾಣವನ್ನ ವರ್ತಮಾನದ ನೆಲೆಯಲ್ಲಿ ಮಂಡಿಸೋ ಪ್ರಯತ್ನ ಮಾಡುತ್ತಾರೆ. ಜೊತೆಗೆ ಅವರ ದೈವಿಕ ಅತಿ ಮಾನುಷ ಪಾತ್ರಗಳು 'ಮನುಷ್ಯ'ರಾಗುವ ಹಂಬಲ ಹೊತ್ತವರು. ಪುರಾಣೀಕರಣ ಎಲ್ಲವನ್ನೂ ಸಾಮಾನ್ಯವಾಗಿ ವೈಭವೀಕರಿಸುತ್ತೆ. ಆದರೆ ಎಕ್ಕುಂಡಿ ಸೃಷ್ಟಿಸಿದ ಪುರಾಣ ಪಾತ್ರಗಳು ಮಾನವತ್ವದ ಹಂಬಲ ಉಳ್ಳವರು. ಭಕ್ತ ಮತ್ತು

ಭಗವಂತ ಸಮಾನ ಪಾತಳಿಯಲ್ಲಿ ಬರುತ್ತಾರೆ. ಜನ ನಿರಂಜನರಾಗುವ ಹಾಗೇ ನಿರಂಜನ 'ಜನ'ವಾಗುವ ದ್ವಿಮುಖಿ ಚಲನೆಯಲ್ಲಿ ಇವರೆಲ್ಲಾ ಒಂದೇ ಸಮಾನ ಪಾತಳಿಯಲ್ಲಿ ಒಟ್ಟುಗೂಡುತ್ತಾರೆ.

ಅವರ ಪುರಾಣದ ನಿರೂಪಣೆಯಾಗಲೀ ಸೌಂದರ್ಯ ಪ್ರಜ್ಞೆಯಾಗಲೀ ಅವರ ಸಾಮಾಜಿಕ ಕಾಳಜಿ ಕಡಿಮೆ ಮಾಡಲಿಲ್ಲ. ಕವಿತೆ ಹೇಗೆ ಮನಸ್ಸಿಗೆ ಅನ್ನವನ್ನ ಕೊಟ್ಟು ಸಂಸ್ಕೃತಿಯನ್ನ ಬೆಳೆಸುತ್ತೋ ಹಾಗೆ ಸಹಜ ಬದುಕನ್ನೂ ಸಂಪದ್ಭರಿತ ಮಾಡಬೇಕು ಆ ಕರ್ತವ್ಯ ಕಾವ್ಯಕ್ಕಿದೆ ಅಂತ ಎಕ್ಕುಂಡಿ ಭಾವಿಸುತ್ತಾರೆ.

ಲಕ್ಷ್ಮೀಶನನ್ನನೆನಪಿಸುವಂಥಾ ನಾದಲಯ ಎಕ್ಕುಂಡಿ ಕಾವ್ಯದ ಮತ್ತೊಂದು ಗುಣ. ಅದು ಕೇವಲ ಮಾಧುರ್ಯಕ್ಕೆ ಬಂದಿರುವಂಥದ್ದು. ಕರ್ಕಶತೆ ಕಠೋರತೆಗಳಿಗೆ ಅಲ್ಲಿ ಸ್ಥಳವಿಲ್ಲ.

● ಕೆ. ಸತ್ಯನಾರಾಯಣ

ಒಬ್ಬ ಲೇಖಕನಿಗಿರಬೇಕಾದ ಖಾಸಗಿ ವ್ಯಕ್ತಿತ್ವ ಎಂಥದ್ದು ಅಂತ ಯೋಚಿಸಿದಾಗ ನಮ್ಮ ಕನ್ನಡ ಸಂಸ್ಕೃತಿಯಲ್ಲಿ ಈ ನಿಟ್ಟಿನಲ್ಲಿ ಎಕ್ಕುಂಡಿ ಮುಖ್ಯವಾಗುತ್ತಾರೆ. ಲೇಖಕ ಅಂದ್ರೆ ಸಮಾಜ ಸುಧಾರಕ ಕ್ರಾಂತಿಕಾರಿ ಅನ್ನೋ ಸೋಗು ಹಾಕದೆ, ಎಲ್ಲರ ಹಾಗೇ ಸಹಜವಾಗಿ ಸರಳವಾಗಿ ಬದುಕನ್ನ ವಸ್ತುನಿಷ್ಠವಾಗಿ ನೋಡುವಂತ ತನ್ನ ಖಾಸಗಿ ವ್ಯಕ್ತಿತ್ವದ ಜೊತೆಗೇ ಕವಿ ಭಾವವನ್ನು ಉಳಿಸಿಕೊಂಡು ಪ್ರಶಸ್ತಿ ಖ್ಯಾತಿಗಳಿಗೆ ಎಲ್ಲರೂ ಮುಗಿಬೀಳುವ ಇವತ್ತಿನ ಸಂದರ್ಭದಲ್ಲಿ ಲೇಖಕ ಅಂದ್ರೆ ಒಬ್ಬ ವಿಶಿಷ್ಟ ವ್ಯಕ್ತಿ ಅಂದುಕೊಳ್ಳದೆ ಸಹಜವಾಗಿ ಬದುಕಿದ ಅಡಿಗರು-ಎಕ್ಕುಂಡಿಯವರು ಒಂದು ಅಪರೂಪದ ಉದಾಹರಣೆ.

ಎಕ್ಕುಂಡಿಯವರು ಇತರ ಕವಿಗಳಿಗೆ ಹೋಲಿಸಿದಾಗ, ಬರೆದಿರೋದು ಕಡಿಮೆ ಯಾದರೂ, ಅವರ ಕಾವ್ಯಕ್ಕಿರುವ 'ಬೀಸು' ಮುಖ್ಯ ಎನಿಸುತ್ತದೆ. ಅವರ ಕಾವ್ಯದಲ್ಲಿ ಪುರಾಣಗಳಿಂದ ಎತ್ತಿಕೊಂಡ ಪ್ರಸಂಗಗಳನ್ನು ಕೂಡಾ ಬೇರೆ ಥರದಲ್ಲಿ ಕಥಿಸಲಾಗಿದೆ ಮತ್ತು ಹೊಸ ಅರ್ಥಗಳನ್ನು ತೋರಲಾಗಿದೆ. ಅವರ 'ಬೀಸಿ'ನಲ್ಲಿ ಪ್ರಾಣಿ ಪರಿಸರಗಳೂ ಇವೆ. ಅವರು ರೈತರ ಬಗ್ಗೆ ಬರೆಯಲಿ ಅಥವಾ ಕಾರ್ಲ್‌ಮಾರ್ಕ್ಸ್ ಕುರಿತೇ ಬರೆಯಲಿ ಅದರಲ್ಲೆಲ್ಲಾ ಬದುಕು ಬಹಳ ಮುಖ್ಯವಾಗುತ್ತದೆ. ಬದುಕನ್ನ ಬದುಕಿನ ತಿರುವುಗಳನ್ನ ಬೇರೊಂದು ಅರ್ಥದಲ್ಲಿ ನಿರೂಪಿಸಲು ಅವರ ಪಾತ್ರಗಳು ಸಹಾಯಕವಾಗುತ್ತವೆ.

ಇವರ ಕವನಗಳಲ್ಲಿ ಕತೆಗಾರನಾಗಿ ಪ್ರಬಂಧ ಬರೆಯೋನಾಗಿ ನನಗೆ ವಿಶೇಷ ಆಕರ್ಷಣೆ ಎಂದರೆ ಕಾದಂಬರಿಯಲ್ಲಿ ಅಥವಾ ಕತೆಯೊಂದರಲ್ಲಿ ಸಣ್ಣ ಸಣ್ಣ ವಿವರಗಳನ್ನ ಇಷ್ಟಪಡ್ತೀವೋ ಆ ರೀತಿಯ ವಿವರಗಳನ್ನ ನಾವು ಎಕ್ಕುಂಡಿ ಕವಿತೆಗಳಲ್ಲಿ ಕಾಣಬಹುದು. ಉದಾಹರಣೆಗೆ ಮಾರ್ಕ್ಸ್‌ನ ಬಾಡಿಗೆ ಮನೆಯೊಂದರ ವಿವರ ಬರೋ

ಕವಿತೆಯೊಂದರಲ್ಲಿ ಒಂದು ಒಳ್ಳೆಯ ಕಥೆ ಬರೆದಿದ್ರೆ ಎಷ್ಟು ವಿವರಗಳಿರುತ್ತಿತ್ತೋ ಅಷ್ಟೇ ವಿವರಗಳಿವೆ. ಅವು ಬರೀ ವಿವರಗಳಾಗದೆ ಬೇರೆಯದೇ ಒಂದು ಧ್ವನಿ ಶಕ್ತಿ ಪಡೆಯೋದು ಹೊಸ ಅರ್ಥ ಕೊಡೋದು ನನಗೆ ಆಕರ್ಷಕವೆನಿಸುತ್ತೆ.

● ಡಾ|| ಕೆ. ವಿ. ನಾರಾಯಣ

ಶ್ರೀ ಎಕ್ಕುಂಡಿಯವರು ಕಥಿಸುವ ಜಗತ್ತು ನಂಬುವಿಕೆಯ ಬುನಾದಿಯನ್ನು ಪಡೆದಿದೆ. ನಂಬುವಿಕೆ ಎಂದೆ. ನಂಬಿಸುವಿಕೆ ಎನ್ನಲಿಲ್ಲ. ಈ ವ್ಯತ್ಯಾಸ ಗಮನಿಸಬೇಕು. ನಂಬಿಸುವಿಕೆಯನ್ನು ಹುನ್ನಾರವಾಗಿ ಬಳಸುವ ಕವಿಗಳ ಬಗೆ ಬೇರೆ. ಅವರ ಸಮಸ್ಯೆಗಳೂ ಬೇರೆ. ಆದರೆ ಇವರಲ್ಲಿ ಅದು ಮುಖ್ಯವಾಗದು. ಏಕೆಂದರೆ ಕಥಕನ ಜಗತ್ತು 'ಇದೆ', ಕೊನೆಯ ಪಕ್ಷ ಅದು 'ಇದೆ' ಎಂಬ ಬಗ್ಗೆ ಕಥಕನಿಗೆ ದೃಢ ನೆಮ್ಮಗೆಯುಂಟು. ಹಾಗಾಗಿ ಜಗತ್ತು 'ಆಗುವ' ಬಗೆ, ಅದರ ತಳಮಳ, ಇಕ್ಕಟ್ಟು ಸಂಘರ್ಷ, ದ್ವಂದ್ವ ಶೋಧನೆ ಮೊದಲಾದವು ಈ ಕವಿತೆಗಳಲ್ಲಿ ಲವಲೇಶವೂ ಇಲ್ಲ. ಆದ್ದರಿಂದ ಈ ಕವಿತೆಗಳ ಕಥನ ಭಿನ್ನವಾಗುತ್ತದೆ ; ತನ್ನ ಬಗೆಯ ಭಿನ್ನತೆಯನ್ನು ಕಂಡುಕೊಳ್ಳಲು ಓದುಗನನ್ನು ಒತ್ತಾಯಿಸುತ್ತದೆ.

ಈ ಕವಿತೆಗಳ ಧಾರ್ಮಿಕತೆ ಓದುಗನಿಗೆ ಒಂದು ಸವಾಲಾಗಿ ನಿಲ್ಲುವುದು. ಮೀರುವಿಕೆಯು ತರುವ ತೀವ್ರ ಸಂಘರ್ಷವೇ ಕವಿತೆಯಲ್ಲಿ ಮೈದಳೆದಾಗ ಓದುಗನಿಗೆ ಸಂಘರ್ಷದ ಧಾರ್ಮಿಕತೆ ಸಮಸ್ಯೆಯಾಗುವುದಿಲ್ಲ : ಆದರೆ ಶ್ರೀ ಎಕ್ಕುಂಡಿಯವರ ಈ ಕವಿತೆಗಳ ಓದು ಹೀಗಾಗದು. ಕಥಕ ಕಟ್ಟಿಕೊಡುವ ಜಗತ್ತನ್ನು ಸುಮ್ಮನೆ ಗ್ರಹಿಸುವುದು ಸುಲಭವಲ್ಲ ; ಹತ್ತು ಬೆಳಕಲ್ಲಿ ನಿಂತ ದೇಹವನ್ನು ನೆರಳುಗಳಿಂದ ಹೊರತು ಪಡಿಸಿ ನೋಡುವ ಸಮಸ್ಯೆಯ ಹಾಗೆ. 'ತಾವೋ' ಕುರಿತ ಲಾವೊತ್ಸೆ ವಾಕ್ಯಗಳ ಜಪಾನಿನ ಜೆನ್ ಹೈಕುಗಳು ಕೂಡಾ ಇಂಥದ್ದೇ ಇಕ್ಕಟ್ಟಿಗೆ ಓದುಗನನ್ನು ಸಿಲುಕಿಸುತ್ತವೆ.

(ಬಕುಲದ ಹೂವುಗಳು–ಮುನ್ನುಡಿಯಿಂದ)

● ಕೀರ್ತಿನಾಥ ಕುರ್ತಕೋಟಿ

ಎಕ್ಕುಂಡಿಯವರ ಕಾವ್ಯ ಸೃಷ್ಟಿಯ ಮೂಲ ತತ್ವವೆಂದರೆ ಪುನರುಕ್ತಿ. ಅವರ ಕಥನ ಕವನಗಳ ಛಂದೋರಚನೆಯಲ್ಲಿ ಹರಿಹರನ ರಗಳೆಗಳ ಓಟವಿದೆ. ಇಲ್ಲಿ ಪುನರುಕ್ತಿಯಿಂದ ಬೇಸರವಿಲ್ಲ. ಶಬ್ದಗಳಂತೆ ವರ್ಣನೆಯ ಕ್ರಮವೂ ಪುನರುಕ್ತವಾಗುತ್ತದೆ. ಪುನಶ್ಚರಣದಿಂದ ಮಂತ್ರ ವಿಕಾಸಗೊಳ್ಳುವಂತೆ ಎಕ್ಕುಂಡಿಯವರ ಕಾವ್ಯದಲ್ಲಿ ವರ್ಣನೆಯ ವಿನ್ಯಾಸಗಳು ಪುನರುಕ್ತವಾಗುತ್ತದೆ. ಅದರಂತೆ ಕಾವ್ಯ ವಸ್ತುಗಳೂ ಪುನರುಕ್ತವಾಗುತ್ತವೆ. ಅದೊಂದು ಬಗೆಯ ಕಾವ್ಯ ಚಿಂತನೆ. ಪುನರುಕ್ತಿ ಕಾವ್ಯದ ಕುಶಲ ಕರ್ಮದ ನೈಪುಣ್ಯದ ಒಂದು ಭಾಗವಾದರೆ ಅದು ಯಾಂತ್ರಿಕ ಆಗಲಾರದು.

ಛಂದೋಗತಿಯ ಹೊರಗಿನ ಯಾಂತ್ರಿಕತೆ ಕವಿತೆಯ ಒಳಗಿನ ವೈವಿಧ್ಯವನ್ನು ರಕ್ಷಿಸಬಲ್ಲದು. ವೈವಿಧ್ಯವನ್ನೇ ಹುಡುಕಿಕೊಂಡು ಹೋದರೆ ಕವಿಗೆ ಅರಿವಾಗದಂತೆ ಯಾಂತ್ರಿಕತೆ ಒಳಗೆ ಬರಬಹುದಾಗಿದೆ. ಮುಕ್ತ ಛಂದಸ್ಸಿನ ರಚನೆ ಕೂಡ ಯಾಂತ್ರಿಕವಾಗಬಲ್ಲದು.

(ಪ್ರಜಾವಾಣಿ–'ಸಮ್ಮುಖ'ದಲ್ಲಿ)

● ಮಲ್ಲೇಪುರಂ ಜಿ. ವೆಂಕಟೇಶ್

ಪರಂಪರೆಯ ನೋಟ ಎನ್ನುವುದೇ ವರ್ತಮಾನದ ಜಗತ್ತನ್ನು ಕ್ಷೇಮವಾಗಿಟ್ಟುಕೊಳ್ಳುವುದು ಎಂಬರ್ಥದ ನೆಲೆಯಿಂದ ಮಾತ್ರ ಹುಟ್ಟಿಕೊಳ್ಳದೆ : ಬದುಕಿನ ಸಾತತ್ಯದ ನೆಲೆಯಿಂದ ನಿರ್ಧಾರಗೊಳ್ಳುತ್ತದೆ. ಹೀಗಾಗಿ ಎಕ್ಕುಂಡಿಯವರ ಕಾವ್ಯವು ತನಗೆ ಬೇಕಾದ ರೀತಿಯಲ್ಲಿ ಪ್ರತಿಮೆ, ರೂಪಕ ವಸ್ತು ಸಂಕೇತಗಳನ್ನು ನಿರ್ಮಿಸಿಕೊಳ್ಳುತ್ತದೆ. ಭಿನ್ನ ಜಗತ್ತಿನ ಕವಿಗಳಿಗಿಂತ ಇಂಥ ಕವಿ ವರ್ತಮಾನದ ಕಾವ್ಯ ಸಂಸ್ಕೃತಿಯ ಕ್ಷೇಮದಲ್ಲಿ ತನ್ನನ್ನೂ ಗುರುತಿಸಿಕೊಳ್ಳುವ ಹಂಬಲವನ್ನು ತೋರಿಸಿಕೊಳ್ಳುತ್ತಾನೆ. ಇದಕ್ಕಾಗಿಯೇ ಅವರದ್ದು 'ಎಕ್‌ಲೆಕ್ಟಿಕ್' ಮಾದರಿಯ ಕಾವ್ಯ ರಚನೆ ಆಗಿರುವುದು. ಇದು ಒಂದರ್ಥದಲ್ಲಿ ಅವರ ಮಿತಿ ಹೇಗೋ ಮತ್ತೊಂದರ್ಥದಲ್ಲಿ ಅವರ ವೈಶಿಷ್ಟ್ಯವೂ ಆಗಿದೆ.

(ಎಕ್ಕುಂಡಿಯವರ ಕಾವ್ಯದಲ್ಲಿ ಪರಂಪರೆಯ ನೋಟ ಲೇಖನದಲ್ಲಿ)

● ಎಂ. ಜಿ. ಚಂದ್ರಶೇಖರಯ್ಯ

ಸು. ರಂ. ಎಕ್ಕುಂಡಿಯವರು ಸಂಪ್ರದಾಯಶೀಲರಾದ ಆದರೆ ಬಡವನ ಬಾಳು ಹಸನಾಗಬೇಕೆಂಬ ಪ್ರಾಮಾಣಿಕ ಕಳಕಳಿ ಹಂಬಲವುಳ್ಳ ಕವಿ. ಇವರ ಕಾವ್ಯವು ಒಂದು ಸಾಮಾಜಿಕ ಸಂದರ್ಭವನ್ನು ಇರುವುದನ್ನು ಒಂದು ಕಾಲಸಂದರ್ಭದಲ್ಲಿ ಅದು ಇದ್ದಂತೆ ನೋಡುವ ರೀತಿಯದೇ ವಿನಃ, ಅವರು ಚಿತ್ರಿಸುವ ಸಾಮಾಜಿಕ ವ್ಯವಸ್ಥೆಯ ರಾಜಕೀಯ ಆರ್ಥಿಕ ಸಂಬಂಧ ಮತ್ತು ಸಂಘರ್ಷಗಳನ್ನು ಬಗೆದು ನೋಡುವ ರೀತಿಯದಲ್ಲ. ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ರಸಪರ ಧೋರಣೆಯ ನವೋದಯ ಕಾವ್ಯವನ್ನು ತಾತ್ವಿಕವಾಗಿ ವಿರೋಧಿಸಿ ಬಂದ ಪ್ರಗತಿಶೀಲ ಲೇಖಕರಲ್ಲೊಬ್ಬರಾದ ಎಕ್ಕುಂಡಿಯವರ ಕಾವ್ಯವು ಸಂಪೂರ್ಣವಾಗಿ ಹಳೆಯ ಕಾವ್ಯಮಾರ್ಗವನ್ನು ತೊರೆದುಕೊಂಡುದಲ್ಲ. ಕೀರ್ತನ ಸಾಹಿತ್ಯ ಮತ್ತು ಸರ್ವೋದಯ ಸಾಹಿತ್ಯಗಳಿಂದ ಎಕ್ಕುಂಡಿಯವರ ಕಾವ್ಯವು ಪುಷ್ಟಿಗೊಂಡಿದೆ.

(ಸು. ರಂ. ಎಕ್ಕುಂಡಿಯವರ ಕಾವ್ಯ ಮತ್ತು ಪ್ರಗತಿಶೀಲ ಸಾಹಿತ್ಯ ಲೇಖನದಲ್ಲಿ)

ಜಿ. ಪಿ. ಬಸವರಾಜು

ಎಕ್ಕುಂಡಿಯವರದು ವಚನಕಾರರಂತೆ ಭಕ್ತಿಯ ಮಾರ್ಗವಾದರೂ ಅನೇಕ ಮಿತಿಗಳನ್ನು ಪಡೆದುಕೊಂಡ ಹಾದಿ. ವಚನಕಾರರಿಗೆ ದಾಸರಿಗೆ ಭಕ್ತಿ ಎಂಬುದು ಮುಕ್ತಿಯ ಸಾಧನವಾಗಿದ್ದಂತೆಯೇ ಕ್ರಾಂತಿಯ ಅಸ್ತ್ರವೂ ಆಗಿತ್ತು. ಭಕ್ತಿಯ ಗಾಢ ಪರವಶತೆಯಲ್ಲಿ, ಅರ್ಪಣೆಯಲ್ಲಿ ಅನುಪಮ ವ್ಯಾಮೋಹದಲ್ಲಿಯೂ ಅವರಿಗೆ ಸಮಾಜದ ಬಗೆಗಿನ ಎಚ್ಚರ, ತಮ್ಮ ಕ್ರಾಂತಿಯ ಉದ್ದೇಶ ಜಾಗ್ರತವಾಗಿಯೇ ಇದ್ದವು.

...ಹೀಗಾಗಿ ಭಕ್ತಿ ಎಂಬುದು ಅವರಿಗೆಂದೂ ಕಾವ್ಯದಲ್ಲಾಗಲೀ ಬದುಕಿನಲ್ಲಾಗಲೀ ಕಾಲ್ತೊಡಕಾಗಿರಲಿಲ್ಲ. ಆದರೆ ಎಕ್ಕುಂಡಿಯವರಲ್ಲಿ ಹೀಗಾಗುವುದಿಲ್ಲ. ಇವರ ಕಾವ್ಯದ ಮೂಲಸೆಲೆ ಭಕ್ತಿಯಲ್ಲಿ ಕಂಡಾಗ ಅದು ಪರವಶತೆಯನ್ನು ಹುಟ್ಟಿಸುತ್ತದೆ : ಭಾವುಕತೆಯನ್ನು ತುಂಬುತ್ತದೆ. ಕೌತುಕ ಅನುಮಾನ, ವ್ಯಂಗ್ಯ ಕಿಲಾಡಿತನ, ಹಾಸ್ಯ ಇವೆಲ್ಲ ಎಕ್ಕುಂಡಿಯವರ ಭಕ್ತಿಯ ಸಾನಿಧ್ಯದಲ್ಲಿ ಗೈರು ಹಾಜರಾಗುತ್ತದೆ. ಎಲ್ಲಿಯಾದರೂ ಇವರ ಭಕ್ತಿಯ ಜೊತೆ ವ್ಯಂಗ್ಯ ಕಾಣಿಸಿದರೆ, ಪ್ರಣಯ ಮುಖ ತೋರಿಸಿದರೆ, ಅದು ಭಕ್ತಿಯ ಪ್ರಭೆಯನ್ನು ಹೆಚ್ಚಿಸುವ ಉದ್ದೇಶದಿಂದ ಬಂದಿರುತ್ತದೆ. ದಾಸರಿಗೆ ವಚನಕಾರರಿಗೆ ಅವರ ಪದಗಳು, ವಚನಗಳು ಕ್ರಾಂತಿಯ ಅಸ್ತ್ರವಾದಂತೆ ಅಂತರಂಗ–ಬಹಿರಂಗಗಳೆರಡಕ್ಕೂ ಸೇತುವಾಗಿದ್ದವು.

ಹೀಗಾಗಿಯೇ ಅದು ನುಡಿದರೆ ಮುತ್ತಿನ ಹಾರವಾಗುತ್ತಿತ್ತು. ಅದು ಜನರ ಭಾಷೆಯಾಗುತ್ತಿತ್ತು ಸಮುದಾಯದ ಅನುಭವವೇ ಅಭಿವ್ಯಕ್ತಿಗೊಳ್ಳುತ್ತಿತ್ತು. ಅದು ಕಾವ್ಯದ ಶಕ್ತಿಯೂ ಏಕಕಾಲದಲ್ಲಿ ಆಗುವ ಸಾಮರ್ಥ್ಯ ಪಡೆದುಕೊಂಡಿತ್ತು. ಎಕ್ಕುಂಡಿಯವರ ಕಾವ್ಯ ದಾಸರಿಂದ–ವಚನಕಾರರಿಂದ ಬೇರೆಯಾಗುವುದು ಈ ಬಿಂದುವಿನಲ್ಲೇ ಎಂದೆನಿಸುತ್ತದೆ. ಈ ಅರ್ಥದಲ್ಲಿಯೇ ಇವರ ಮಾರ್ಕ್ಸ್ ಮತ್ತು ಮಧ್ವ ಒಂದೇ ಬಿಂದುವಿನಲ್ಲಿ ಸೇರುವುದಿಲ್ಲ.

(ಎಕ್ಕುಂಡಿ ಕಾವ್ಯದಲ್ಲಿ ಸಮಾಜವಾದದ ದರ್ಶನ ಲೇಖನದಲ್ಲಿ)

ಓದಿ

"ಎಕ್ಕುಂಡಿ ನಮನ"

ಸಂಪಾದಕರು : ಜಿ. ಎನ್. ಮೋಹನ್

ಪ್ರಕಾಶಕರು : ಪುತ್ತೂರು ಕನ್ನಡ ಸಂಘ ದ. ಕ.

ಬೆಲೆ : ರೂ. 105 /–

ಮೈಸೂರಿನಿಂದ-ಮಡಿಕೇರಿಗೆ

ಇಲ್ಲಿ ಹಸಿರೋ ಹಸಿರು ಹುಡುಗಿ
ಕತ್ತರಿಸಿಟ್ಟಂತೆ ಕಾಡುಗಳು
ಮರಗಟ್ಟಿದ ಹಾಡುಗಳು, ಬೆಳ್ಳಂಬೆಳಗ್ಗೆ
ಕುಕ್ಕರ ಕೆರೆ ನೀರು ಬಾತುಗಳ
ನಿಶ್ಚಲ ದಾರಿಗಳ ಸೀಳು-ನೆನಪು
ಮಾಲೆಗಳು-ಸ್ವಯಂ ಸೇನೆಯು ಮರದ ಸಾಲುಗಳು.

ಇಲ್ಲಿ ಬೆಳ್ಳಂಬೆಳಗ್ಗೆ ಮಂಜು ಮುಸುಕುವುದಿಲ್ಲ ಕಣೇ
ಓಡು ಮಾಡಿನ ಸಂಧಿಗೆ ಹೊಗೆ ಏಳುವುದಿಲ್ಲ
ಕೊಕ್ಕರಿಸುವುದಿಲ್ಲ ಕೋಳಿಗಳು, ನನ್ನ ಉಮ್ಮನ
ಊದು ಕೊಳವೆಯು ರಾಗಗಳು ಜೀಕುವ ತೊಟ್ಟಿಲಿಗೆ
ಶೃತಿ ಹಿಡಿದ ತಾಲೀಲಗಳು ಡೇಲಿಯಾ ಹೂ
ಅರಸುತ್ತಾ ಹಾಡುವುದಿಲ್ಲ ಕಣೇ ಹುಡುಗಿಯರು
ನಿನ್ನಂತೆ, ಬಟ್ಟಲು-ಗಣ್ಣು ತುಳುಕಿ ತುಟಿ
ಕೊಂಕುವುದಿಲ್ಲವೇ ಇಲ್ಲ, ಇವರು ನಕ್ಕಾಗ
ಮುಂಜಾನೆಯ ಹನಿಮುತ್ತು ಗರಿಕೆ ಬಿಡುತ್ತವೆ ಕಣೇ.

ಇಲ್ಲ ಬೆಟ್ಟಕ್ಕೆ ಕಾಡು, ಮರದ ತುದಿ ಮೋಡ
ಮುತ್ತಿರುವುದಿಲ್ಲ ಹುಡುಗಿ ಚಾಮುಂಡಿ
ಮೈಯಲ್ಲಿ ಕಾರೆ ಮುಳ್ಳು, ಒರಟು ಕಲ್ಲು,
ಹರಿವುದಿಲ್ಲ ಕಣೇ ಜುಳು ಜುಳು ತೊರೆ,
ಹೊಳೆವ ಬಿಳಿ ಜೇಡಬಲೆ, ಕುಣಿಕೆ ತಪ್ಪಿಸಿ ಕುಣಿವ ಕರು
ಚಂಗನೆ ಚಿಮ್ಮುವುದಿಲ್ಲ ಹುಡುಗೀ.

ಅಬ್ದುಲ್ ರಷೀದ್

ಅಬ್ದುಲ್ ರಶೀದರ ಮೈಸೂರಿನಿಂದ--ಮಡಿಕೇರಿಗೆ ಜೀವಂತಿಕೆ ಸಹಜತೆಗಳ ಹುಡುಕಾಟ

ಸಂದೀಪ್ ನಾಯಕ

ಕವಿತೆಯೊಂದರ ಆಳಕ್ಕಿಳಿದು ಅದರ ಆತ್ಮ ಅಥವಾ ಜೀವವನ್ನು ಇಡಿಯಾಗಿ ಹಿಡಿಯುವುದು ಕಷ್ಟದ್ದು. ಕವಿತೆಯೊಂದರ ಅರ್ಥವಂತಿಕೆ "ಹೀಗೇ" ಎಂದು ಖಚಿತವಾಗಿ ಬೆರಳು ಮಾಡಿ ತೋರಿಸಲಾಗದು. ಒಳ್ಳೆಯ ಕವಿತೆಯೊಂದನ್ನು ಓದಿದಾಗ, ಅನುಭವ, ಅರ್ಥವಂತಿಕೆಯ ಹೊಸ ಸಾಧ್ಯತೆಗಳು, ನಮ್ಮ ಅರಿವಿನ ಪರಿಧಿಯನ್ನು ವಿಸ್ತರಿಸುತ್ತವೆ. ಕವಿತೆಯ "ಜೀವ"ವನ್ನು ಹಿಡಿಯಲು ಅದರೊಂದಿಗೆ ಒಂದಾಗಲು ಒಳ ದಾರಿಗಳನ್ನು, ಸೇತುವೆಗಳನ್ನು ಹುಡುಕಿಕೊಳ್ಳಲು ಅದೇ ಅಗತ್ಯ ನೆಲೆ ಈ ಉದ್ದೇಶವೇ, ಈ ಪ್ರಕ್ರಿಯೆಯೇ ಇಲ್ಲಿನ ಪ್ರಯತ್ನ.

ಅಬ್ದುಲ್ ರಶೀದ್‌ರ ಕವಿತೆಯ ಮೊದಲ ಪಂಕ್ತಿ ಮೈಸೂರಿನ ಕೃತಕತೆ ಮತ್ತು ನಿಶ್ಚಲ ಜಡತೆಯನ್ನು ಸೂಚಿಸುತ್ತಿದೆ. "ಹಸಿರೋ ಹಸಿರು" ಎಂಬ ಉತ್ಸಾಹವೆಂಬಂತೆ ಕಾಣುವ ಪ್ರಯೋಗ ವ್ಯಂಗ್ಯಾರ್ಥ ಉಳ್ಳದೆಂದು ಮುಂದಿನ ಸಾಲುಗಳಲ್ಲಿ ಸ್ಪಷ್ಟವಾಗುತ್ತದೆ "ಕತ್ತರಿಸಿಟ್ಟಂತೆ ಕಾಡುಗಳು" "ಸ್ವಯಂ ಸೇನೆಯ ಮರದ ಸಾಲುಗಳು" "ಮರಗಟ್ಟಿದ ಹಾಡುಗಳು" ಎಂಬ ಒತ್ತೊತ್ತಾಗಿ ಬರುವ ಪ್ರತಿಮೆಗಳು ನಗರೀಕರಣದ ದಾಳಿಯಿಂದ ಕೃತಕಗೊಳ್ಳುತ್ತಿರುವ ಸಹಜತೆಯನ್ನು ಬಿಂಬಿಸುತ್ತವೆ. ಇದೇ ಹಿನ್ನೆಲೆಯಲ್ಲಿ "ನೆನಪಿನ ಮಾಲೆಗಳು" ಎನ್ನುವಲ್ಲಿನ ಅರ್ಥವಂತಿಕೆಯನ್ನು ಗಮನಿಸಿ.

ಕವಿತೆಯ ಮುಂದಿನ ಭಾಗದಲ್ಲಿ ನೆನಪಿನಿಂದ ನೆನಪಿಗೆ ಒಂದು ಭಾವ ಪ್ರಪಂಚದತ್ತ ಕವಿ "ಸರಿಯುವ", ನೆನಪುಗಳ ಪುನರ್ ಸೃಷ್ಟಿ ಮಾಡುವ ಬಗೆಯನ್ನು ಗಮನಿಸಬಹುದು. "ಬೆಳ್ಳಂಬೆಳಿಗ್ಗೆ ಮಂಜು ಮುಸುಕುವ, ಓಡು ಮಾಡಿನ ಸಂಧಿಗೆ ಹೊಗೆ ಏಳುವ, ಕೊಕ್ಕರಿಸುವ ಕೋಳಿಗಳ, ಊದು ಕೊಳವೆಯ ರಾಗಗಳ, ತೂಗುವ ಶೃತಿ ಹಿಡಿದ ತಾಳೇಲಗಳ–ಈ ನಿಷೇದಾತ್ಮಕ ಚಿತ್ರಗಳೆಲ್ಲ ಹಳ್ಳಿಯೊಂದರ (ಅಂದರೆ ಕವಿತೆಯ ಮಡಕೇರಿಯ) ಕ್ರಿಯಾಶೀಲ ಜೀವಂತಿಕೆಯನ್ನು ಕವಿ ಮೈಸೂರಿನಲ್ಲಿ ಹುಡುಕುತ್ತಾರೆ. ಕೃತಕತೆಯನ್ನು ಮೈಗೂಡಿಸಿಕೊಂಡಿರುವ ಮೈಸೂರಿಗೆ ಇದೆಲ್ಲ ಕಳೆದ ದಿನಗಳಷ್ಟೇ. ಇದರೊಂದಿಗೆ "ಹುಡುಗಿ"ಯ ಕೃತಕತೆ ಮತ್ತು ಅಸಹಜತೆ ಜೊತೆಗೆ ಸಾಗಿ ಬಂದಿರುವುದು. "ಪರಿಣಾಮ"ವನ್ನು ಇನ್ನಷ್ಟು ತೀವ್ರವಾಗಿಸಿದೆ. ಬಟ್ಟಲುಗಣ್ಣು

ತುಳುಕಿ ತುಟಿ ಕೊಂಕಿಸುವ ಸ್ನಿಗ್ಧ ಸೌಂದರ್ಯ ಕಳೆದುಕೊಂಡಿರುವ ಹುಡುಗಿಯರು ನಕ್ಕರೆ "ಮುಂಜಾನೆಯ ಹನಿ ಮುತ್ತು" ಮತ್ತೆ ಗರಿಕೆಯೇ ಆಗದೆ ಇರುತ್ತದೆಯೇ ?

ಜೀವಂತಿಕೆ ಕಳೆದುಕೊಂಡ, ಜಡವಾದ ಮೈಸೂರಿನ ಪರಿಸರವನ್ನು ಕವಿ ಮಡಿಕೇರಿಯ ಸಹಜ ಕಣ್ಣಿನಿಂದ ನೋಡುತ್ತಾರೆ, ಹುಡುಕುತ್ತಾರೆ ಅದು "ಇಲ್ಲವಾದ" ನಿರಾಶೆಯಲ್ಲೇ "ಮೈಸೂರಿನಿಂದ–ಮಡಿಕೇರಿಗೆ" ಸರಿಯುತ್ತಾರೆ.

"ಇಲ್ಲ" ಎನ್ನುತ್ತಲೇ "ಇದೆ" ಎನ್ನುವ ಬೇರೊಂದು ಜೀವಂತ ಪ್ರಪಂಚದತ್ತ ಕವಿತೆಯ ಮುಂದಿನ ಚಿತ್ರಗಳು ಬೆಳೆಯುತ್ತವೆ. ಇವು ಕವಿತೆಯ ಮೂಲಕ "ಕವಿ" ಏನನ್ನು ಹುಡುಕುತ್ತಿದ್ದಾರೆ ಎನ್ನುವುದನ್ನು ಪ್ರತಿನಿಧಿಸುತ್ತದೆ.

ಬೆಟ್ಟವಿದ್ದೂ ಇಲ್ಲದ ಕಾಡು, ಮರದ ತುದಿಗೆ ಮುತ್ತಿರದ ಮೋಡ ಚಾಮುಂಡಿ ಬೆಟ್ಟದ ಮೈಯಲ್ಲಿ ಕಾರೆಮುಳ್ಳು, ಒರಟು ಕಲ್ಲುಗಳೆಲ್ಲ ಜಡತೆಯ ಪ್ರತಿರೂಪಗಳೇ ಆಗಿವೆ. ಇವುಗಳ ನಡುವೆ "ಹರಿವ ತೊರೆ, ಜೇಡರಬಲೆ, ಚಂಗನೆ ಚಿಮ್ಮುವ ಕುಣಿಕೆ ತಪ್ಪಿಸಿಕೊಂಡ ಕರುಗಳನ್ನು ಕವಿ ಹುಡುಕುತ್ತಾನೆ.

ಕವಿತೆಯ ಮೊದಲ ಸಾಲುಗಳಿಗೆ ಕೊನೆಯ ಪಂಕ್ತಿ ಹೋಲಿಸಿದಾಗ ಮೈಸೂರಿನ "ಜಡತೆ"ಗೆ ವಿರುದ್ಧವಾಗಿ ಇರಬಹುದಾದ ಅಥವಾ ಕವಿ ತನ್ನ ಹಿಂದಿನ ದಿನದಲ್ಲಿ ಅನುಭವಿಸಿದ "ಜೀವಂತಿಕೆ" ನಿಲ್ಲುತ್ತದೆ. ಚಿಮ್ಮುವ ಜೀವಂತಿಕೆಯನ್ನು ಕಳೆದುಕೊಂಡು ಯಾಂತ್ರಿಕತೆಯ ನೊಗಕ್ಕೆ ಕೊರಳು ನೀಡಬೇಕಾಗಿ ಬಂದಿರುವ ಅಸಹಾಕತೆಗೆ ಕವಿ ಪರಿತಪಿಸುತ್ತಾರೆ. ಇದೇ ಕವಿತೆಯ ಆಶಯ ಕೂಡ

ಕವಿತೆಯುದ್ದಕ್ಕೂ ಬೆರೆತಿರುವ ಆಪ್ತತೆ, ಇಂತಹ ಆಪ್ತತೆಯ ಮೂಲಕವೇ ಜಡತೆ ಮೂಲಕ ಜೀವಂತಿಕೆಗೆ ಸಾಗಬಹುದೆಂಬುದನ್ನು ಸೂಚ್ಯವಾಗಿ ಹಿಡಿದಿಟ್ಟಿವೆ. (ಗಮನಿಸಿ : 'ಕಣೇ ಹುಡುಗೀ') ಹೀಗೆ ಸಂವಾದಿಸುತ್ತಲೇ ಭಾವನಾತ್ಮಕವಾಗಿ ಕೊಕ್ಕರಿಸುವ ಕೋಳಿಗಳ ಉಮ್ಮನ ಊದು ಕೊಳವೆಯ ರಾಗಗಳನ್ನು, ಮರದ ತುದಿಯ ಮೋಡ ಹರಿವ ಜುಳು ಜುಳು ತೊರೆಯ ಜೀವಂತಿಕೆ ಸಹತೆಯನ್ನು ರಶೀದ್ ಸೃಷ್ಟಿಸುತ್ತಾರೆ. ವಾಸ್ತವದ ತೀವ್ರತೆ ಈ ಪ್ರಪಂಚಕ್ಕಿರುವುದೇ ಕವಿತೆಯ ಹೆಚ್ಚುಗಾರಿಕೆ.

ನನ್ನ ದೃಷ್ಟಿಯಲ್ಲಿ ಕಾವ್ಯವು–ಸೌಂದರ್ಯದ ಸೃಷ್ಟಿಯಾಗಿದೆ. ಉದಾತ್ತದ ಸ್ಮೃತಿಯಾಗಿದೆ. ಮತ್ತು ಅಪಾರದ ಅನ್ವೇಷಣೆಯಾಗಿದೆ. ಅದು ಕಡಲಿನ ಧ್ವನಿಯ ಹಾಗೂ ಬೆಳ್ಳಕ್ಕಿಗಳ ಕರೆಯ ಪ್ರತಿಧ್ವನಿಯಾಗಿದೆ.

—ಸು. ರಂ. ಎಕ್ಕುಂಡಿ

ಕದ ತಟ್ಟಿದ ಮುಸ್ಸಂಜೆ ಒಳ ಬಂದ ರಾತ್ರಿ

ಸುಧಾಶರ್ಮ ಚವತ್ತಿ

ವಸ್ತುನಿಷ್ಠ ಕವಿತೆಗೆ ಹೆಣಗಿ ಬರೆಯದೆ ಕೂತೆ. ವಸ್ತುವನ್ನು ಗ್ರಹಿಸುವ ಸಂಗತಿಗಳನ್ನು ವಿಶ್ಲೇಷಿಸುವ ರೀತಿ ಬದಲಾಗಬೇಕೆಂದು ನನ್ನಷ್ಟಕ್ಕೆ ನಾನೇ ಅಂದುಕೊಂಡೆ. ಅವತ್ತು ಯಾಕೋ ಅವಳು "ನಮ್ಮ ಮಧ್ಯೆ ಗೊತ್ತಿಲ್ಲದೇನೇ ಗೋಡೆಗಳು ಹುಟ್ಟುತ್ತವಲ್ಲವೇನೆ ?" ಎಂದು ಯಾವುದೋ ಮಾತಿಗೆ ಹೇಳಿದರೂ ನನಗೆ ಗೋಡೆ ಮೇಲಿನ ಬಿರುಕು, ಮಣ್ಣಿನ ಹಸಿ ಹಸಿ ಗೋಡೆ ಅದರ ಮೇಲೆ ಎಸಳು ಬಿಟ್ಟಿದ ಮೊಳಕೆ, ಅರ್ಧ ಗೋಡೆ, ಮುರಿದ ಗೋಡೆ. ಗೋಡೆಗೆ ನಿಶ್ಚಲತೆಯೋ ಸತ್ಯ. ಗೋಡೆ ಸೇತುವೆಯಾಗಬೇಕು. ಸೇತುವೆಯ ನಿಶ್ಚಲತೆಯಲ್ಲಿ ಸಂಚಾರ ಸತ್ಯ. ಗೋಡೆ ಎಬ್ಬಿಸಿ ಮನೆ ಕಟ್ಟಿ ಮನೆಯೊಳಗೇ ಬಂಧಿಯಾಗುತ್ತೇವೆ ಹೀಗೆ ಏನೇನೋ ಕವಿತೆ ಬರೆಯಲಾಗಲಿಲ್ಲ ಕಾಗದ ಕೂಡಾ ಹಾಗೆ ಆಯ್ತು. ಅದು ಬರಿದೆ ಹಾಳೆ ಎನ್ನಿಸಲಿಲ್ಲ. ಹಾಳೆಯೊಳಗಿನ ಅಕ್ಷರ ಬರಿದೆ ಅಕ್ಷರ ಎನ್ನಿಸಲಿಲ್ಲ. ಈ ಹಾಳೆ ಈ ಅಕ್ಷರಗಳೊಳಗೆ ಎಷ್ಟೊಂದು ಜೀವಗಳ ಉಸಿರು ತುಂಬಿದ ಹೃದಯವಿರುತ್ತದೆ. ಕಣ್ಣೀರು, ಪ್ರೀತಿ, ಸಿಟ್ಟು, ಮಮತೆ. ಹಾಳೆ ಧನ್ಯ. ಹಾಳೆ ಮಡಚಿ ದೋಣಿ ಮಾಡಿ ಅದರಲ್ಲಿ ಕಲ್ಲಿಟ್ಟು ಅದನ್ನು ನಾನು–ನೀನು ಎಂದು ಹೇಳಿ ತೇಲಿಬಿಟ್ಟ ಆಟ ನೆನಪಾದರಂತೂ ಹಾಳೆಯ ಬದುಕಿನ ಸಾರ್ಥಕತೆ ಬೆರಗಾಗಿಸುತ್ತೆ. ಇಲ್ಲಿ ನನಗೆ ಕಾಗದದ ಬಗ್ಗೆ ಕವಿತೆ ಬರೆಯಲಾಗಲೇ ಇಲ್ಲ.

ಕಡೆಗೆ ಉಳಿದದ್ದು ಮುಸ್ಸಂಜೆ ಕರಗಿ ರಾತ್ರಿಯಾಗುವ, ರಾತ್ರಿ ಹರಿದು ಹಗಲಾಗುವ ಅಥವಾ ಅವೆಲ್ಲ ಒಂದರಲ್ಲೇ ಐಕ್ಯವಾಗಿದ್ದು ಯಾವುದೋ ಅಮೂರ್ತದಲ್ಲಿ ಬೇರೆ ಬೇರೆ ಆಗಿ ಬರುವ ಬೆರಗು. ಕವಿತೆ ಬರೆಯಲಾಗದಿದ್ದರೂ ಪಕ್ಕದಲ್ಲಿ ಕೂತ ಅಪ್ಪರೊಂದಿಗೆ ನಾನು ಹೀಗ್ಹೀಗೆ ಬರ್ಕ್ಯೋಣ ಅಂದ್ಕೊಂಡಿದೀನಿ ಎಂದು ಹೇಳಿಕೊಳ್ಳುವ ಹಾಗೆ ಹೇಳುತ್ತಿರುವೆ.

ಹಳದಿ ಬಿಸಿಲು ; ಅಂಗೈನ ಮೃದು ಸ್ಪರ್ಶದ ಹಾಗೆ ಬೆಚ್ಚಗಿತ್ತು. ಆಕಾಶದಲ್ಲಿ ಹಕ್ಕಿಗಳು ಗಂಟು ಮೂಟೆ ಕಟ್ಟುವ ಸಿದ್ಧತೆಯಲ್ಲಿದ್ದಾಗ ಗಾಳಿಪಟದ ಸೂತ್ರದಂತೆ ಜನ್ಮ ಜನ್ಮಾಂತರದ ನೆನಪುಗಳ ಕೊಂಡಿ ಹಿಡಿದು ಯಾರೋ ಜಗ್ಗುತಿದ್ದಾರೆ. ನೆಲ

ಆಕಾಶ, ಬಿಸಿಲು ಯಾವುದೂ ಶಬ್ದಕ್ಕೆ ಸಿಗುತ್ತಿಲ್ಲ. ನೆನಪು ನುಗ್ಗುತ್ತಿದೆ ಬಿಸಿಲೂ ಹಾರಿ ಹೋಯ್ತು ಸಂಜೆ ಹೇಗೆ ಹಾರಿತು ಬಿಸಿಲು ಈಗ ಈ ರಾತ್ರಿ ಹೇಗೆ ಬಂತು. ನಾನು ಕೂತಲ್ಲೇ ಇದ್ದೆ.

ಎಲ್ಲ ಮಲಗಿರುವುದು ಖಾತ್ರಿ ಆದಮೇಲೆ ಪರಸ್ಪರ ಪತ್ರ ಹರಡಿಕೊಂಡು ಹರಟಿದ್ದೆಷ್ಟು ; ಎಲ್ಲೋ ಯಾವುದೋ ಸ್ನೇಹ ಬತ್ತಿದ್ದಕ್ಕೆ ಆಪ್ತತೆ ಕ್ಷೀಣಿಸಿದ್ದಕ್ಕೆ ಆವತ್ತಿನ ಆ ದಿನಗಳು ಈಗ ಇಲ್ಲದ್ದಕ್ಕೆ ಕಂಗಾಲಾಗಿ ಹೀಗೂ ಆಗತ್ತಲ್ಲಾ ಎಂಬ ದಿಗ್ಭ್ರಮೆಯಲ್ಲಿ ಹಳೆಯ ನೆನಪಿನ ಕೊಂಡಿಗಳಿಗೆ ತುಕ್ಕು ಹತ್ತದ ಹಾಗೆ ಪತ್ರಗಳ ಹರವಿಟ್ಟು ಮಾತಿಗಿಳಿದಿದ್ದು.

ಆ ನೀರವ ರಾತ್ರಿಯಲ್ಲಿ ಕಾಲ ಸರಿವ ಹೆಜ್ಜೆ ಶಬ್ದಕ್ಕೆ ಎಲ್ಲೋ ದಿಗಿಲಿರಬೇಕು. ನಡುರಾತ್ರಿಯ ಕಗ್ಗತ್ತಲಲ್ಲಿ ಯಾಕೋ ಸುಳ್ಳು ಹೇಳಲಾಗುವುದಿಲ್ಲ. ಸ್ವತಃ ನಮ್ಮನ್ನೇ ನಾವು ನಂಬಿಸಿಕೊಳ್ಳಲಾಗುವುದಿಲ್ಲ, ದ್ರೋಹ ಮಾಡಿಕೊಳ್ಳಲಾರೆವು. ಎದುರು ಕೂತ ಇನ್ನೊಂದು ಜೀವದೆದುರು ನಮ್ಮೊಳಗಿನ ಎಲ್ಲ ಸ್ವಗತವನ್ನೂ ಮಾತಾಗಿಸುವ ತವಕ ಸೋಲಿನ ಹತಾಶೆಯಿಂದ ಗೆದ್ದ ಖುಷಿಯವರೆಗೆ ಅವಮಾನದ ಪಾತಳಿಯಿಂದ ಹೊಗಳಿಕೆಯ ಉತ್ತುಂಗದವರೆಗೆ ಮಾತು ಮಾತು. ಮಲಗೋಣ್ವನೆ ಬೆಳಗಾಗಿಬಿಡುತ್ತೆ ಎಂದು ಹೇಳುತ್ತಲೇ ಕೂತ ಕೂತಲ್ಲೇ ಬೆಳಗನ್ನು ಎದುರಿಸುವುದು ಎಂತಹ ಹೊಸಾ ಬೆಳಗು. ಪ್ರತಿ ರಾತ್ರಿಯೂ ಅಂತರಂಗಲ್ಲೇ ಇರುವ ಗೆಳತಿಯೊಂದಿಗೆ ಮಾತಿಗಿಳಿದು ಸರಿ ತಪ್ಪು ತಿದ್ದಿಕೊಳ್ಳುವ ಹಾಗಿದ್ದರೆ ಪ್ರತಿ ಬೆಳಗೂ ಎಂಥ ಚೆಂದ.

ದುಃಖಕ್ಕೆ ಅಳುವುದು, ವ್ಯಥೆಯಲ್ಲಿ ಹೊರಳಾಡುವುದು, ದಿಂಬು ತೋಯುವುದೆಲ್ಲ ರಾತ್ರಿಯಲ್ಲಿ ಖುಷಿಯ ಉತ್ಕಟತೆಗೆ ನಿದ್ದೆ ಬಾರದೆ ಕನಸುಗಳ ಹೊದ್ದು ಮಲಗುವುದೂ ರಾತ್ರಿಯಲ್ಲೇ ರಾತ್ರಿಗೆ ಏಕಾಂತತೆ ಕೊಟ್ಟು ನಾವು ಅಂತರಂಗದಲ್ಲಿ ಒಂಟಿಯಾಗದೆ ಉಳಿಯುತ್ತೇವಲ್ಲವೆ ?

ಸೋತ ಹಗಲಿನ ಕೊನೆಯಾದ ರಾತ್ರಿ ಆಕಳಿಕೆ ತೆಗೆಯುತ್ತ ನಿದ್ದೆ ಬರುವವರೆಗೂ ಕೆಟ್ಟ ಸಿನೆಮಾದಲ್ಲಿ ಕಣ್ಣಿಟ್ಟು ಮಾತ್ಯಾಕೆ ಎಂದು ಓದುವ ನೆಪಹೂಡಿ ನಾಳಿನ ಕೆಲಸವೇ ರಾತ್ರಿಯ ಭಯವಾಗಿ ಭಗವಂತಾ ನಮ್ಮ ರಾತ್ರಿಗಳೇಕೆ ಹೀಗಾದವು.

ನಾಳೆಯ ನಿರೀಕ್ಷೆ ಇರುವವರೆಗೂ ರಾತ್ರಿ ಜೀವಂತ. ಇಂತಹ ರಾತ್ರಿಗಳಲ್ಲೇ ನಾಳೆಗಾಗಿ ಸಾವಿರ ಕನಸು ಹೆಣೆಯಲು ಸಾಧ್ಯ. ಖುಷಿಯ ಬೆಳಗಿಗಾಗಿ ಕಾಯಲು ರಾತ್ರಿ ಬೇಕು. ಬೆಳಗಿನ ಬೆಳಕು ಕಣ್ಣು ತೆರೆಸಲು ರಾತ್ರಿ ನಿದ್ದೆ ಪೂರ್ತಿ ಮುಗಿದಿರಬೇಕು.

ಮತ್ತೊಮ್ಮೆ ಹಾಡುವವು ಸೂರ್ಯಪುಷ್ಪದ ಹಾಡು
ಹೊಸ ದಿನದ ಹೊಂಬಿಸಿಲಿನಲಿ ಮಿಂದು

ಸು. ರಂ. ಎಕ್ಕುಂಡಿ

ಚಿತ್ರಕಲೆ ಮತ್ತು ಪ್ರಾಣಿ ಚಿತ್ರಣ

ಆರ್. ಶಾಂತರಾಜ್

ಈ ಸಂಪುಟದ ಆರು ಸಂಚಿಕೆಗಳ ಮುಖಪುಟದಲ್ಲಿ ವಿಭಿನ್ನ ಕಲಾವಿದರು–ಸಂಸ್ಕೃತಿಗಳ ಪ್ರಾಣಿ ಚಿತ್ರಗಳನ್ನು ಮುದ್ರಿಸುತ್ತಾ ಬಂದಿರುವುದು ನಿಮ್ಮ ಗಮನಕ್ಕೆ ಬಂದಿದೆ. ಮನುಷ್ಯನ ನಾಗರೀಕತೆಯು ಮೊದಲಿನಿಂದಲೂ ತನ್ನ ಸುತ್ತಲ ಪ್ರಾಣಿ ಪಕ್ಷಿ ಪರಿಸರಕ್ಕೆ ಅವನ ಸ್ಪಂದನ ಗುರುತಿಸಬಹುದಾಗಿದೆ. ಇದನ್ನು ಕುರಿತು ಈ ಲೇಖನ ಚರ್ಚಿಸಿದೆ.

ಪರಿಸರದೊಂದಿಗೆ ಬೆಳೆದ ಆದಿಮಾನವನು ಮೊದಲು ಕಲಿತದ್ದು ವ್ಯಕ್ತಗೊಳಿಸುವಿಕೆ. ಈ ಸಾಧನೆಯ ಗುಣವೇ ಆತನನ್ನು ಅನುಭವಿಯನ್ನಾಗಿ ಮಾಡಿದೆ. ಇದಕ್ಕಾಗಿ ಆತ ಕಂಡುಕೊಂಡ ಮೊದಲ ಮಾಧ್ಯಮ ಶಬ್ದ–ಧ್ವನಿಗಳಾದರೂ, ಸ್ಪಷ್ಟತೆಯನ್ನು ಪಡೆದು ಕೊಂಡದ್ದು ಚಿತ್ರಗಳ ಮೂಲಕ, ಚಿತ್ರಗಳನ್ನು ಗೀಚಿ ಕೊರೆದು, ಕೆತ್ತಿ, ಸಿಕ್ಕ ವಸ್ತುಗಳಿಂದ ಚಿತ್ರಿಸಿದ. ಅವುಗಳನ್ನು ಚಿರಕಾಲದ ದಾಖಲೆಗಳನ್ನಾಗಿ ಮಾಡಿದ. ತನ್ನ ಸುತ್ತಲ ಎಲ್ಲಾ ಪ್ರಾಣಿಗಳನ್ನು ಚಿತ್ರಿಸಿದ.

ಅತ್ಯಂತ ಪ್ರಾಚೀನ ಶಿಲಾಯುಗದಿಂದ ಪ್ರಾರಂಭವಾದ ಕಲಾಭಿವ್ಯಕ್ತಿಯ ಕೇಂದ್ರ ವಸ್ತು ಕೇವಲ ಪ್ರಾಣಿಗಳೆ ಆಗಿರುವುದು ಗಮನಾರ್ಹ ಅಂಶ. ವ್ಯವಸಾಯ ಕಂಡುಕೊಂಡ. ನಾಗರೀಕತೆಯ ಬೆಳವಣಿಗೆ ಪ್ರಾರಂಭದ ಈ ಸಂದರ್ಭದಲ್ಲಿಯೆ ಚಿತ್ರಗಳನ್ನು ಶಿಲ್ಪಗಳನ್ನು ಒಂದು ಮಾಧ್ಯಮವನ್ನಾಗಿ ಬಳಸಿಕೊಂಡಿರುವುದನ್ನು ಕಾಣಬಹುದಾಗಿದೆ. ಜನಾಂಗೀಯ ಸಮೂಹಗಳು, ಬುಡಕಟ್ಟುಗಳು ನಿಸರ್ಗವನ್ನು ಹೊಸರೀತಿಯಾಗಿ ಅರ್ಥೈಸುವ ಕಾಲದಲ್ಲಿ, ಪ್ರಾಣಿ–ಪಕ್ಷಿಗಳು ಅವುಗಳನ್ನು ಆಧರಿಸಿದ ಕಲ್ಪನೆಯ ದೇವರು. ಭೂತ, ಇತ್ಯಾದಿಗಳ ನಂಬಿಕೆ ಹಾಗೂ ಸಂಪ್ರದಾಯದ ಭೂಮಿಕೆಯನ್ನು ನಿರ್ಮಿಸಿದವು.

ಪುರಾತನ ನಾಗರೀಕತೆಗಳ ಆಧಾರದ ಮೇಲೆ ನೋಡುವುದಾದರೆ, ಈಜಿಪ್ಟ್‌ನಲ್ಲಿ ಚಿತ್ರ–ಶಿಲ್ಪಗಳೆರಡರಲ್ಲೂ ಪ್ರಾಣಿಗಳನ್ನು ಪಕ್ಷಿಗಳನ್ನು ಅರ್ಥಕ್ಕೆ ಸೂಚ್ಯವಾಗಿ ಬಳಸಿ ಕೊಂಡಿದ್ದಾರೆ. ಧಾರ್ಮಿಕ ಅರ್ಥ, ಸಮುದಾಯದ ನಂಬಿಕೆಗಳನ್ನು ಚಿತ್ರ–ಶಿಲ್ಪಗಳಿಂದ ಕ್ರಮೇಣ ಭಾಷೆಯೊಂದನ್ನು ಸೃಷ್ಟಿಸಿಕೊಂಡ ಈಜಿಪ್ಷಿಯನ್ನರು ಪ್ರಥಮವಾಗಿ ಚಿತ್ರ ಲಿಪಿಯನ್ನು ಕಂಡುಕೊಂಡರು. ಆಫ್ರಿಕಾದ ಕೆಲವು ಜನಾಂಗಗಳಲ್ಲಿ ಪ್ರಾಣಿ ಬೇಟೆಗೆ ಮೊದಲು ಅದರ ಚಿತ್ರ ಬರೆದು ಚಿತ್ರದಲ್ಲಿ ಬೇಟೆಯಾಡುವ ಆಚರಣೆ ಇದೆ.

ಈ ಹಿನ್ನೆಲೆಯಲ್ಲಿ ಭಾರತೀಯ ಚಿತ್ರಗಳನ್ನು ಶಿಲ್ಪಗಳನ್ನು ಗಮನಿಸಿದಾಗ, ಸಿಂಧೂ ಸಾಂಸ್ಕೃತಿಯಲ್ಲಿಯೇ ಹರಪ್ಪಾ ಮೊಹೆಂಜೋದಾರೋದ ಅವಶೇಷಗಳಲ್ಲಿ ಪ್ರಾಣಿ ಚಿತ್ರಣದ ದಾಖಲೆಗಳು ದೊರಕುತ್ತವೆ. ವೇದಕಾಲದಿಂದಲೂ ಪ್ರಾಣಿ-ಪಕ್ಷಿಗಳಿಗೆ, ಪ್ರಕೃತಿಯ ಆಗುಹೋಗುಗಳಿಗೆ ಹೊಸ ಅರ್ಥಗಳು, ನಂಬಿಕೆಗಳು ಹೊಂದಿಕೊಂಡಿರುವುದು ಕಂಡು ಬರುತ್ತದೆ. ಜನಪದರ ನಂಬಿಕೆಗಳಿಂದ ವಿವಿಧ ಕಲ್ಪನೆಗಳಿಗೆ ಹೊಂದಿಕೊಂಡಿರುವ ಪ್ರಾಣಿ-ಪಕ್ಷಿಗಳು ಹಲವಾರು. ಭಾರತೀಯರ ಚಿತ್ರಗಳಲ್ಲಿ, ಹಸ್ತಪ್ರತಿ ಹಾಗೂ ಭಿತ್ತಿಚಿತ್ರ. ಶಿಲ್ಪ (Relief Sculpture) ಗಳಲ್ಲಿ. ಅಂಜತಾ-ಎಲ್ಲೋರಾ ಬಾಗ್ ಸಿತ್ತಾನವಾಸಲ್ ಮುಂತಾದ ಕಡೆಗಳಲ್ಲಿಯ ಭಿತ್ತಿ ಚಿತ್ರಗಳಲ್ಲಿದೆ, ಗುಹಾಂತರ ಚಿತ್ರಗಳು (ಬಂಡೆಗಳು) ಕೊರೆದು, ಕೆತ್ತಿ, ಗೀಚಿದ ಚಿತ್ರಗಳಲ್ಲಿ ಹೆಚ್ಚಾಗಿ ಪ್ರಾಣಿಗಳ ಚಿತ್ರಗಳಿವೆ. ಇವುಗಳೆಲ್ಲ ಮುಕ್ತ ಕ್ರಿಯೆಯ ರಚನೆಗಳಾಗಿದ್ದರೆ, ನಂತರದ ಕೆಲವು ಶತಮಾನಗಳ ಚಿತ್ರ-ಶಿಲ್ಪಗಳಲ್ಲಿ ನೈಜವಾದ ಪ್ರಾಣಿಗಳು, ಅರೆದೇಹ ಹೊಂದಿದ ಕಾಲ್ಪನಿಕ ದೇವಸೃಷ್ಟಿಯಾಗಿರುವುದು ಒಂದು ಕಡೆ. ಈ ಮೂಲಕವೇ ಪ್ರಾಣಿಗಳೆಲ್ಲ ದೇವದಾನವರ ಮೂರ್ತಿಗಳಾಗಿ, ಅವುಗಳ ವಾಹನಗಳಾಗಿ ಚಿತ್ರಿತಗೊಂಡಿವೆ. ಕಿ. ಪೂ. ಕಾಲದಲ್ಲಿ ರಾಜಮನೆತನಗಳ ಆಳ್ವಿಕೆಯಲ್ಲಿ ಹೆಚ್ಚಾಗಿ ಬೆಳೆದ ಕಲಾಪರಂಪರೆ ಅಂದಂದಿನ ನಂಬಿಕೆಗಳಿಗೆ ಪೂರಕವಾದ ಧರ್ಮಗಳಾಧಾರದ ಚಿತ್ರಗಳಲ್ಲಿಯ ಮೂರ್ತಿ ಶಿಲ್ಪ-ಚಿತ್ರಗಳಲ್ಲಿ ಕಲ್ಪನೆಯ ಚಿತ್ರಗಳೂ ಪ್ರಾಣಿಗಳು ದೈತ್ಯಕಲ್ಪನೆಯ ಸುರಾನುಸುರರಾಗಿ ವಾಹನಗಳಾಗಿ, ಕಂಗೊಳಿಸಿವೆ. ವಾಸ್ತು ಶಿಲ್ಪದಲ್ಲೂ ತಳಪಾಯದ ಪಟ್ಟಿಕೆಗಳಲ್ಲಿ, ವಿಮಾನ, ದ್ವಾರ, ಕಂಬ-ಪಟ್ಟಿಕೆಗಳಲ್ಲಿ ಚಿತ್ರಿತವಾಗಿರುವ ಪ್ರಾಣಿ-ಪಕ್ಷಿಗಳು ಸೌಂದರ್ಯಕ್ಕೆ ಹೊರಮೆರುಗು ನೀಡಿರುವುದರ ಸಾಕ್ಷಿಯಾಗಿ ಮುಖ್ಯವಾಗಿ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗವಾಗಿ ಇಂದಿಗೂ ನೋಡಬಹುದು. ದೇಶದ ಉದ್ದಗಲಕ್ಕೂ ಕಟ್ಟಲ್ಪಟ್ಟ ದೇವಾಲಯಗಳಲ್ಲಿ ಹೇರಳವಾಗಿ ಕಾಣಸಿಗುವ ನಿಸರ್ಗ ಕಲಾವಿದರ ಪ್ರಾಣಿ-ಪರಿಸರದ ಚಿತ್ರಗಳು ಹಲವು ವಿಶೇಷಗಳನ್ನು, ಅರ್ಥಗಳನ್ನೂ ಪಡೆದುಕೊಂಡಿವೆ. ಪ್ರಕೃತಿ-ಪರಿಸರದ ಒಡನಾಡಿಯಾಗಿರುವ ಮನುಕುಲದ ಸಂಕೇತವಾಗಿ ಅಭಿವ್ಯಕ್ತಿಯ ಸೂಕ್ಷ್ಮ ಪ್ರಾಣಿ-ಪಶು-ಪಕ್ಷಿಗಳು ಹಲವಾರು ರೂಪ ಪಡೆದುಕೊಂಡು, ನಂಬಿಕೆ. ಅರ್ಥಗಳ ಶಾಶ್ವತ ನೆಲೆಯಲ್ಲಿ ಹಬ್ಬಿಕೊಂಡಿವೆ. ಅಚ್ಚಳಿಯದ ಚಿತ್ರ ಶಿಲ್ಪಗಳಲ್ಲಿ ದಾಖಲಾಗಿ ಮೂಡಿಬರುತ್ತಿದೆ.

ಅನೇಕ ಕವಲುಗಳಲ್ಲಿ ಬೆಳೆದು ಬಂದ ಭಾರತೀಯ ಚಿಕಣಿ ಚಿತ್ರಗಳಲ್ಲಿ ಆನೆ, ಒಂಟೆ, ಹಂಸ, ನವಿಲು, ಗಿಳಿ, ಪಾರಿವಾಳಗಳು, ಸರ್ಪಗಳು ಮನೋಜ್ಞವಾಗಿ ಚಿತ್ರಿತಗೊಂಡಿವೆ. ಹೊರಗಿನನುಭವ ಪಡೆದ ಕಣ್ಣುಗಳು ಚಿತ್ರ ಮಾಧ್ಯಮದ ಬಳಕೆಯಲ್ಲಿ ಹೊಸ ಅರ್ಥ, ಸಂದರ್ಭಗಳನ್ನು ಪಡೆದ ವಸ್ತುಗಳಾಗಿ ಪಾತ್ರವಹಿಸಿರುವ ಪ್ರಾಣಿಗಳು ಮನುಷ್ಯನ ಸಂವೇದನೆಯಲ್ಲಿ ನೆಲೆನಿಂತಿವೆ, ಕಾಲಾನಂತರದಲ್ಲಿ ಚಿತ್ರಿತವಾಗಿ ರೂಪುಗೊಂಡಿರುವ

ಕಲ್ಪಿಸಿಕೊಂಡಿರುವ ಪ್ರಾಣಿ ಚಿತ್ರಗಳು, ಇತ್ತೀಚಿನ ಕಲೆಯಲ್ಲಿ ರೂಪಾಂತರದ ವಿರೂಪಗಳಾಗಿ ಹೆಚ್ಚಾಗಿ (Metamorphic Distortion) ಮಾರ್ಪಡುತ್ತಿವೆ.

ಇವತ್ತಿನ ಕಲಾವಿದರಲ್ಲಿ ಪ್ರಾಣಿ–ಪಕ್ಷಿಗಳು ಆಧುನಿಕ ಕಲೆಯು ಹೊಸ ಅರ್ಥಗಳಿಗೆ, ಅಂತರಂಗದ ಭಾವಗಳಿಗೆ ತಿರುವನ್ನು ನೀಡುವ, ವಾಸ್ತವ–ಅವಾಸ್ತಗಳ ನೆಲೆಯನ್ನು ಅರಿವನ್ನು ಮೂಡಿಸುವ ಸಂಕೇತಗಳಾಗಿ ಚಿತ್ರಿತವಾಗುವುದನ್ನು ಕಾಣುತ್ತೇವೆ. ಅವುಗಳನ್ನು ಸಮರ್ಪಕವಾಗಿ ದುಡಿಸಿಕೊಂಡಿರುವ ಅಂಶಗಳೂ ಸ್ಪಷ್ಟವಾಗಿವೆ. ಹುಸೇನ್, ಹೆಬ್ಬಾರ್, ಸೂರಜ್ ಫಾಯ್, ಜೊಗೇನ್ ಚೌಧುರಿ, ಪರಿತೋಷ್‌ಸೇನ್, ಗುಲಾಮ್‌ಮೊಹಮ್ಮದ್ ಶೇಖ್, ಸುಬ್ರಮಣಿಯನ್, ಪಿ. ಟಿ. ರೆಡ್ಡಿ, ಮುರಳಿ ಲಾವೊಟಿ, ಮಂಜಿಲ್‌ಬಾವಾ, ಸೋಜಾ, ವಾಸುದೇವ್, ಚಂದ್ರನಾಥ್ ಆಚಾರ್ಯ, ಎಂ. ಬಿ. ಪಾಟಿಲ್ ಇನ್ನೂ ಮುಂತಾದವರ ಕೃತಿಗಳಲ್ಲಿ ಒಂದೊಂದು ನೆಲೆಯ, ವಿಭಿನ್ನ ಅರ್ಥಗಳನ್ನು ಸೃಷ್ಟಿಸುವ ಸಾಂದರ್ಭಿಕ ಹಿನ್ನೆಲೆಯ ವಸ್ತುಗಳಾಗಿ ಪ್ರಾಣಿಗಳ ಚಿತ್ರವಾಗಿರುವುದು ಕಂಡುಬರುತ್ತದೆ. ಆಧುನಿಕ ಕಲೆಯ ಅಭಿವ್ಯಕ್ತಿಗೆ ಹೆಚ್ಚಿನ ಶ್ರೀಮಂತಿಕೆಯನ್ನು ನೀಡುವಲ್ಲಿ ಪ್ರಾಣಿ–ಪಕ್ಷಿಗಳು ಇನ್ನೂ ಚಿತ್ರಿತವಾಗುತ್ತಿದೆ.

ಜಾನಪದ, ಸಂಪ್ರದಾಯ, ಪೌರಾಣಿಕ, ಕಥಾನಕ, ಧಾರ್ಮಿಕ ಹಾಗೂ ಭಿತ್ತಿ–ಚಿಕಣಿ ಚಿತ್ರಗಳಲ್ಲಿ ರೂಪಿತಗೊಂಡ ಹಲವಾರು ಪ್ರಾಣಿ–ಪಕ್ಷಿಗಳು ಕಲೆಯ ಆಯಾಮವನ್ನು ಹೆಚ್ಚಿಸಿವೆ. ವಾಸ್ತವದ ಚಿತ್ರಕಲೆಯಲ್ಲಿ ಭಾವನೆಗಳಿಗೆ ಹೊಸ ಅರ್ಥನೀಡುವ ಸೃಷ್ಟಿಯಾಗಿವೆ.

ಮನಸ್ಸಿನ ಆನಂದಕ್ಕೆ, ನೋಟದ ಸೌಂದರ್ಯಕ್ಕೆ ಕುಶಲಕಲೆಯು ಚಿತ್ತಾರಗಳಾಗಿವೆ. ಹತ್ತು–ಹಲವು ತೆರನಲ್ಲಿ ಹರವಿನಿಂತ ಪ್ರಾಣಿ–ಪಕ್ಷಿ–ಗಿಡ–ಮರ–ಬಳ್ಳಿ–ಹೂ–ಕಾಯಿ–ಹಣ್ಣುಗಳು ಚಿತ್ರಕಲೆಯ ನಿರಂತರ ವಸ್ತುಗಳಾಗಿವೆ ಜೀವನ ಸ್ಫೂರ್ತಿಯ ಅಂತರಂಗದೊಳಗಿರುವ ಗುಣಗಳೂ ಆಗಿವೆ. ಮನುಷ್ಯನ ನಾಗರೀಕತೆಯು ಬೆಳೆದ ಹಾಗೆಲ್ಲಾ ಅವನ ಬದುಕಿನ ಅವಿಭಾಜ್ಯ ಜೊತೆಯಾದ ಪ್ರಾಣಿಗಳ ಚಿತ್ರಣ ಕೂಡಾ ಕಲೆಯ ಮೂಲಕ ದಾಖಲಾಗುತ್ತಿವೆ.

ನಿಸರ್ಗ ಎನ್ನುವುದು ಬೆಳ್ಳಕ್ಕಿಯ ಹಾಗೆ, ಪ್ರತಿಯೊಂದು ಎದೆಯಲ್ಲಿ ಒದೊಂದು ಬೆಳ್ಳಕ್ಕಿ ಇರುತ್ತದೆ. ಬೆಳ್ಳಕ್ಕಿ ಶುದ್ಧತೆ ಸೌಂದರ್ಯದ ಪ್ರತೀಕ ಈ ಜೀವನದಲ್ಲಿ ಗಂಜಿ ಎಷ್ಟು ಮುಖ್ಯವೋ ಬೆಳ್ಳಕ್ಕಿಯೂ ಅಷ್ಟೇ ಮುಖ್ಯ ಎನ್ನುವ ಸಮಾಜ ಸೃಷ್ಟಿಯಾಗಬೇಕು.

ಸು. ರಂ. ಎಕ್ಕುಂಡಿ

ಪುಸ್ತಕ ಪರಿಚಯ

ಆರ್. ಚಲಪತಿ

ಇವತ್ತಿನ ಸಾಮಾಜಿಕ ವಾತಾವರಣ ಮತ್ತು ಸಾಹಿತ್ಯಕ ವಾತಾವರಣಗಳೆರಡನ್ನೂ ಗಂಭೀರವಾಗಿ ಪರಿಭಾವಿಸಿಕೊಂಡ ಕವಿಯ ತುಮುಲಗಳು ಒಂದೆರಡಲ್ಲ. ಯಾಕೆಂದರೆ ಸಮಾಜ ಮತ್ತು ಸಾಹಿತ್ಯ ಇವೆರಡರ ಸಂಬಂಧಗಳಲ್ಲೂ ಸೋಗಲಾಡಿತನಗಳು ಮೆರೆಯಬಲ್ಲವು ಎಂಬುದನ್ನು ಇವತ್ತಿನ ಸಾಂಸ್ಕೃತಿಕ ಅವಸ್ಥೆಯನ್ನು ಪರಿಭಾವಿಸಿ ಕೊಂಡು ಬೆಳೆಯುವ ಕವಿ ಗಮನಿಸದಿರಲಾರ. ಕಾವ್ಯ ಸೃಷ್ಟಿಗೆ ಮುಖಾಮುಖಿ ಯಾಗುವ ಕವಿ ಈ ಗೊಂದಲಗಳನ್ನು ಕಾವ್ಯವಾಗಿಸುತ್ತಲೇ ಸಾಹಿತ್ಯ ಲೋಕದಲ್ಲಿ ತನ್ನ ಅಸ್ತಿತ್ವವನ್ನು ಕಾಣಲು ಪ್ರಯತ್ನಿಸಬೇಕು. ಇವತ್ತಿನ ದಿನಗಳಲ್ಲಿ ಬರೆಯುತ್ತಿರುವ ಬಹಳಷ್ಟು ಕವಿಗಳಲ್ಲಿ ನಾವು ಈ ಗುಣವನ್ನು ಕಾಣುತ್ತೇವೆ.

ವೃಷಭಾಚಲದ ಕನಸು : ವಾಸುದೇವನಾಡಿಗ್

ವೃಷಭಾಚಲದ ಕನಸು ವಾಸುದೇವ ನಾಡಿಗರ ಮೊದಲ ಕವನ ಸಂಕಲನ ತಮ್ಮ ಈ ಮೊದಲ ಕವನ ಸಂಕಲನ ಹಸ್ತ ಪ್ರತಿಯ ರೂಪದಲ್ಲಿದ್ದಾಗಲೇ 1992-93ರ ಸಾಲಿನ ಬೇಂದ್ರೆ-ಅಡಿಗ ಕಾವ್ಯ ಪ್ರಶಸ್ತಿಯನ್ನು ಪಡೆದಿದ್ದು ನಾಡಿಗ್‌ರ ಕಾವ್ಯ ಸೃಷ್ಟಿಗೆ ಮೂಡಿದ ಗರಿ, 'ಕರಗುವ ಎದೆಗೆ ಕಲ್ಲುಕಟ್ಟುವ' ಕೆಲಸವನ್ನು ಕಾವ್ಯದ ಮುಖೇನ ಕೇಡುಕೊಳ್ಳುತ್ತಿರುವ ಈ ಕವಿ ತಮ್ಮ ಈ ಸಂಕಲನದಲ್ಲಿ ಕಾವ್ಯ ಸೃಷ್ಟಿಯ ಹಸಿವನ್ನು ಜಯಿಸುವ ದಾರಿಗಳನ್ನು ಹುಡುಕತೊಡಗಿದ್ದಾರೆ. ಆದ್ದರಿಂದಾಗಿಯೇ ಇಲ್ಲಿನ ಕವಿ ಭಾವನೆಗಳ ಮೂಟೆ ಹೊತ್ತ ಕೂಲಿಯಾಗಿದ್ದಾನೆ. ಕಾವ್ಯ ಸರಕು ಪೇರಿಸುವ, ಚೀಲಗಳು ಕುಟುಕಿದ ಕಲೆಗಳನ್ನು ಹೊತ್ತ ಕವಿಯಾಗಿದ್ದಾನೆ.

> ಶಾಂತಿ ಸೌಂದರ್ಯ ಸತ್ಯಗಳ
> ಪ್ರೇಮದೊಡಲ ಕವಿತೆಗಳ ಹೆಕ್ಕುತ್ತಿದ್ದೇನೆ
> ಭ್ರಮೆಯೊಳಗೆ ಕರಗುತ್ತಿದ್ದೇನೆ (ವಾಸ್ತವಕ್ಕೆ ಇಳಿದಾಗ)

ಎಂದು ಹೇಳುತ್ತಲೇ ಬದುಕು ಮತ್ತು ಕಾವ್ಯ ಇವೆರಡರ ನಡುವಿನ ದ್ವಂದ್ವಗಳನ್ನು ಗುರುತಿಸಲು ಪ್ರಯತ್ನಿಸುತ್ತಾನೆ. ಈ ಸಂಕಲನದ ಎಲ್ಲ ಕವಿತಗಳ ಕ್ರಿಯೆ ಇಂಥ

ಹುಡುಕಾಟವೇ ಆಗಿದೆ. ಈ ದೃಷ್ಟಿಯಿಂದ ನಾಡಿಗರ ಕಾವ್ಯದ ಮೀಮಾಂಸೆಯನ್ನು ಅವರ ಕವಿತೆಗಳೇ ಹೇಳುತ್ತವೆ. ಅಂದರೆ ಬದುಕಿನ ಅನುಭವ ಮತ್ತು ಕಾವ್ಯಸೃಷ್ಟಿ ಇವುಗಳ ನಡುವೆ 'ಕವಿ' ಮತ್ತು 'ಮನುಷ್ಯ' ಇವರ ಅಸ್ತಿತ್ವವನ್ನು ಹುಡುಕ ತೊಡಗುತ್ತಾರೆ.

ಒಮ್ಮೊಮ್ಮೆ ಚೆಂಬೆಳಕೇ
ಧಗಧಗಿಸುತ್ತದೆ
ಹೊಂಬೆಳಕೂ ಆಗುತ್ತದೆ
ಹಸಿರು ಬಿಸಿ ಆಗುತ್ತದೆ
ಉಸಿರೂ ಆಗುತ್ತದೆ (ಕೊಳಲು ಮತ್ತು ಪ್ರೇಮ)

ಅದೆಷ್ಟೋ ಸದ್ದುಗಳ ಪುಟ್ಟ ಒಡಲಿನ ರೇಡಿಯೋ ಮನುಷ್ಯ ಬದುಕಿನ ಸಾಧ್ಯತೆಗಳ ಸಂಕೇತವಾಗಿ ಅಚ್ಚರಿ ಹುಟ್ಟಿಸುತ್ತದೆ. ಅದೆಷ್ಟೋ ತಂತಿಗಳ ದೊಡ್ಡ ವೀಣೆಯ ಬದುಕಾಗಿಯೂ ಬಟಾಬಯಲಾಗಿ ಕಾಣುತ್ತದೆ. ಈ 'ಬಯಲು' ವಚನಕಾರರ 'ಬಯಲು' ಅಲ್ಲ. ಮನುಷ್ಯ ಅಸ್ತಿತ್ವವನ್ನೇ ಒಂದು 'ಸಾಮಾಜಿಕ ಭ್ರಮೆ'ಯಾಗಿಸಿ ಬಿಡುವ ಭಯೋತ್ಪಾದನೆ ಮತ್ತು ಹಣವಂತ ಲೋಕ ಸೃಷ್ಟಿಸಿರುವ ತಲ್ಲಣಗಳ ಬಯಲು ಇದು. ವಚನಕಾರರಲ್ಲಿ ಮುಕ್ತಿ, ಜ್ಞಾನ, ಮೋಕ್ಷಗಳ ಸಂಕೇತವಾಗುವ 'ಬಯಲು' ಇಲ್ಲಿ ಆಧುನಿಕ ಮಾನವನ ಜ್ಞಾನ ರೂಪಿಸಿದ ದುರಂತವನ್ನು ಸೂಚಿಸುತ್ತದೆ.

ಬೆಳಕಿನ ಬೆನ್ನೇರಿ
ಊಹೆಗೂ ನಿಲುಕದಾದ
ಗುಹೆ ಇಂದ ಹೊರ ಬಂದವ ಈ ಮನುಷ್ಯ (ಈ ಮನುಷ್ಯ)

ಎಂದು ಮಾನವನ ಚರಿತ್ರೆಯ ಅಚ್ಚರಿಯನ್ನು ಸೃಷ್ಟಿಸುತ್ತಲೇ ಇಂದು 'ಮನುಷ್ಯ'ನ ಅಸ್ತಿತ್ವ ಸಹ ವಿಸ್ಮಯಗೊಂಡಿರುವುದನ್ನು ಹೇಳುತ್ತಾರೆ. ಈ ವಿಸ್ಮಯ ಯಾಕೆಂದರೆ ತನ್ನ ಬದುಕಿನ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕುತ್ತಲೇ ಪ್ರಶ್ನೆ ಆದ ಈ ಮನುಷ್ಯ ನಾವೀನ್ಯತೆಗಳ ಮಧ್ಯೆ ಸಿಲುಕಿ ತೊಡಕಾದ್ದರಿಂದ.

ಗರಿಕೆದರಿ ನಭಕ್ಕೆ ತರುವ ಛಲ
ಮೊಹೋರಿ ಅರಳಿ ಹೂವಾಗಿ ಎಡೆಯೊಡ್ಡುವ ಬಯಕೆ.
(ನೂರಾರು ತಿರುವುಗಳು)

ಹೀಗೆ ಆಧುನಿಕ ಸಮಾಜ ವ್ಯವಸ್ಥೆಯ ಸಂಕ್ರಮಣಗಳನ್ನು ಎದುರಿಸುವ ಕಡೆಗೆ ಆಲೋಚಿಸುವ ಕವಿ ಕಪ್ಪಿಟ್ಟ ಕಣ್ಣು, ಸಿಕ್ಕು ತಲೆ, ಸೀಳು ಅಂಗಾಲು, ನೊಂದ ಮನಸ್ಸುಗಳ ತಾಳವನ್ನು ಆಲಿಸುತ್ತಲೇ ಬದುಕುವ ಅಗಣಿತ ಕನವರಿಕೆಗಳನ್ನು ಕಾಣಿಸುತ್ತಾರೆ.

ಪುಟ್ಟಂಕಗಳ ಮುಂದೆಲ್ಲಾ ದೈತ್ಯಾಕಾರದ ವರ್ತಮಾನಗಳು
ಒಂಟಿಯಾಗಿ ಚಕ್ರವ್ಯೂಹ ಹೊಕ್ಕಿದ್ದ ಅಭಿಮನ್ಯುವಿನ
ಹೆಜ್ಜೆಗಳು (ಈ ಮಣ್ಣಿನೊಳಗಿನ ಕಣ್ಣು)

ಈ ಬಯಕೆಗಳಿಗೆ, ಕನಸುಗಳಿಗೆ ಒಲುಮೆಯ ಪಕ್ಷಿ ಬೇಕಾಗಿದೆ.

"ಭಾವನೆ ಕಲ್ಪನೆ ಹೊಟ್ಟೆ ತುಂಬಿಸುವುದಿಲ್ಲ !"
"ಬದುಕು ಕಾವ್ಯಕ್ಕೆ ಎಟಕುವುದೂ ಇಲ್ಲ ?"
(ಇಂಜಿನಿಯರ್ ಗೆಳೆಯನೂ, ನಾನು...)

ಎಂದು 'ಹಸಿವು' ಮತ್ತು ಸಾಹಿತ್ಯದ ಹಸಿವುಗಳೆರಡನ್ನೂ ಸಾಮಾಜಿಕ ವಾತಾವರಣದ ಭಾಗವಾಗಿ ಹೇಳುವ ನಾಡಿಗರು

ದಾರಿ ನೂರಾರುಂಟು ಬೆಳಕಿನ ಅರಮನೆಗೆ ನಿಜ
ಮೊಳಕೆ ಒಡೆದ ಬೆಳಕು ಹಿಡಿವ ಹಲವು ರೆಂಬೆ
ಸ್ವಪ್ನ ಸಾಧನಗಳಿಗೂ ಬೇಕು ಭದ್ರ ಬುನಾದಿ ನೆಲ
(ವೃಷಭಾಚಲದ ಕನಸು)

ಎಂಬ ವಾಸ್ತವದ ಅರಿವನ್ನು ಮೀರುವ ಕ್ರಿಯೆಯ ಸೋಗಲಾಡಿತನದ ಪ್ರಜ್ಞೆಯನ್ನು ಇವರು ಗುರ್ತಿಸಬಲ್ಲರು. ಸಮಾಜ ಬದುಕು ಸಾಹಿತ್ಯ ಮನುಷ್ಯ ಇವುಗಳನ್ನು ತಮ್ಮ ಚಿಂತನೆಗೆ ಗಂಭೀರವಾಗಿ ಸ್ವೀಕರಿಸುವ ನಾಡಿಗರು ಕೇವಲ ತೆವಲಿಗಾಗಿ ಕವಿತೆ ಸೃಷ್ಟಿಸಿಲ್ಲ ಎಂಬುದನ್ನು ತಮ್ಮ ಮೊದಲ ಸಂಕಲನದಲ್ಲೇ ಸಾಬಿತುಪಡಿಸಿ ಭರವಸೆ ಹುಟ್ಟಿದ್ದಾರೆ.

'ಕಡಗೋಲು' : ಆರ್. ಜಿ. ಹಳ್ಳಿ ನಾಗರಾಜ್

"ಕಡಗೋಲು" ಆರ್. ಜಿ. ಹಳ್ಳಿ ನಾಗರಾಜರ ಮೊದಲ ಕವನ ಸಂಕಲನ. ಬಹಳಷ್ಟು ಕಾಲದಿಂದ (ಅವರೇ ಹೇಳುವ ಹಾಗೆ 15 ವರ್ಷಗಳಿಂದ) ಸಾಹಿತ್ಯ ವಲಯದೊಡನೆ ಸಂಪರ್ಕ ಬೆಳೆಸಿಕೊಂಡಿದ್ದು ಬಹಳಷ್ಟು ಚರ್ಚೆ ಸಂವಾದಗಳಲ್ಲಿ ಭಾಗವಹಿಸಿ, ಬಂಡಾಯ ಸಾಹಿತ್ಯ ಚಳುವಳಿಯ ಭಾಗವಾಗಿ ಗುರುತಿಸಿಕೊಂಡಿದ್ದ ಈ ಕವಿ ಇದೇ ಮೊದಲು ಕವನ ಸಂಕಲನವನ್ನು ಹೊರತರುತ್ತಿರುವುದು ಆಶ್ಚರ್ಯ

ಎನಿಸಿದರೂ ಅವರು "ಕಾವ್ಯದ ಹುಚ್ಚು" ಹೆಚ್ಚದಿದ್ದರೆ ಈ 15 ವರ್ಷಗಳವರೆಗೆ ಕಡಗೋಲುವಿನಲ್ಲಿ ಮಂಥನ ಮಾಡುವ ಅಗತ್ಯವಿರಲಿಲ್ಲ" ಎಂದು ತಮ್ಮ ಕಾವ್ಯ ಕೃಷಿಯ ಆಸಕ್ತಿಯನ್ನು ಹೇಳಿಕೊಳ್ಳುತ್ತಾರೆ. ಅವರೇ ಹಾಕಿಕೊಳ್ಳುವ "ಎಲ್ಲಿತ್ತು ಕಾವ್ಯ ? ಹೇಗಿತ್ತು ಕಾವ್ಯ ? ಓದಿನಲ್ಲಿ, ಅನುಭವದಲ್ಲಿ (ಬದುಕಿನಲ್ಲಿ) ಅಂದಾಗ–ಯಾವ ಓದು ?" ಎಷ್ಟು ಅನುಭವ ಎಂಬ ಪ್ರಶ್ನೆಗಳಿಗೆ ಉತ್ತರಗಳನ್ನು ಇಲ್ಲಿನ ಕವಿತೆಗಳೆ ಹೇಳುತ್ತವೆ ಕೂಡ. ಬೆಳಕು ಕತ್ತಿಯ ನುಂಗಿ ಒಳಗೆ ಕಾಡು ಕಣಗಲೆ ಆದಾಗ

ನೆಲದ ಕಾವು ಬೆಚ್ಚಗೆ ಕಂಬಳಿ ಹೊದಿಸಿದಂತೆ
ಒಳಗೊಳಗೇ ಜೀವೋತ್ಪತ್ತಿಗೆ ಉಸಿರು ತುಂಬಿದಂತೆ
ಕಸುವು ಗೊಬ್ಬರದ ಗೆಳೆತನದಲ್ಲಿ ಪುಟಿಪುಟಿದು ಎದ್ದಂತೆ
ಮನುಕುಲದ ಬದುಕಿಗೆ ನಾನು ಸಕ್ಕಿ ಪಕಳೆ ಪಕಳೆಗಳಲ್ಲಿ
(ಕಾಡ ಕಣಗಿಲೆ ಹಾಡು)

ಎಂದು ಇವರ ಕಾವ್ಯ ತನ್ನ ಹುಟ್ಟಿನ ಕಥೆಯನ್ನು ಹೇಳತೊಡಗುತ್ತದೆ. ಈ ಕವಿ ತನ್ನ ಕಾವ್ಯದ ಶಕ್ತಿಯನ್ನು ಅರಸುವುದು ಬದುಕಿನ ಸ್ಪಂದನದ ಸಂದರ್ಭಗಳನ್ನು ಸಂಕೇತಿಸುವ "ಜೀವದ ಹನಿ"ಗಳ ಮೂಲಕ. ಈ 'ಹನಿ'ಗಳು ಅವರ ಎಲ್ಲ ಕವಿತೆಗಳನ್ನು ಒಟ್ಟು ಗೂಡಿಸುವ ಕೆಲಸ ಮಾಡುತ್ತವೆ. "ಕಾಡು ಕಣಗಿಲೆ ಹಾಡುವಿನಲ್ಲಿ" ಕಣ್ಣಾಲಿಯಲ್ಲಿ ಪ್ರೀತಿ ಹನಿಸಿ ಸೆಳೆದು ಬಿಗಿದಪ್ಪುವುದು ಬದುಕಾದರೆ, "ಬೇಸಿಗೆ ಮತ್ತು ಬಾನಾಡಿ" ಕವಿತೆ ವಾಸ್ತವ ಮತ್ತು ಬಯಕೆಗಳ ದ್ವಂದ್ವದ ಪ್ರತೀಕವಾಗುತ್ತದೆ ಇಲ್ಲಿ.

ಹನಿ ಮೋಡ ಮುಗಿಲಲ್ಲಿ
ಬಿಸಿ ಉಸಿರು ಮೈಯಲ್ಲಿ
ದಾಹ ತೀರಲು ಹನಿ ಹನಿಯದೇಕೆ ?

ಎಂಬ ಪ್ರಶ್ನೆಯೂ ಇದೆ ಹನಿ ಹೊತ್ತ ಹುಡುಗಿ ಹನಿಯುವಳೆ ಇಲ್ಲಿ ? ಎಂಬ ಹಾತೊರೆಯುವಿಕೆಯೂ ಇದೆ. 'ಜೀವ ಸ್ಪಂದನ'ದಲ್ಲಿ ನೆಲ ಮೃತ್ಯುರೂಪವಾಗಿ ಜೀವ ಒಂಟಿಯಾದ ಕ್ರಿಯೆಯನ್ನು ಹೇಳುತ್ತಾ ಈ 'ಹನಿ' 'ಒಲವ ಜೀವ ಸಂಗಾತಿ' ಯಾಗಿ ಪರಿವರ್ತಿತವಾಗುತ್ತದೆ.

ಒಂಟಿ ಒಂಟಿ
ಅಲೆಯುತ್ತ ಹುಡುಕೊಂಡೀತೆ
ಒಲವ ಜೀವ ಸಂಗಾತಿ ?

ಈ ಒಲವ ಜೀವ ಸಂಗಾತಿಯನ್ನು ಕಂದಮ್ಮಗಳಿಗೆ ಮುತ್ತು ಮಳೆ ಗರೆವ ಅಮ್ಮಂದಿರಾಗಿ, ನೂರೆಂಟು ಹಾದಿಯಲ್ಲಿ ಪುಟಿದು ಬರುವ ಕನಸುಗಳಾಗಿ ಕಾಣುವ ಬಯಕೆಯಾಗುತ್ತದೆ. ಹೀಗೆ ಜೀವದ ಪ್ರಶ್ನೆಯೇ ಮುಖ್ಯವಾಗಿ ಕಾಡುವ ಈ ಕವಿತೆಗಳಲ್ಲಿ ಜೀವ ಶಕ್ತಿಯಾದ 'ಹನಿ ಮಳೆಗೆ ಗರಿಕೆ ಚಿಗುರು'ವ (ಗೊರಬು) ಭರವಸೆಯಿರುವಂತೆ "ಮಳೆರಾಯನ ಬಾತಿ, ಒಡೆದ ಮಡಕೆ ನೀರು ಕಣ್ಣಲ್ಲಿ" ತುಂಬಿಕೊಳ್ಳುವ, ಒಡೆದ ಕನಸುಗಳ ಮೌನಿಯಾಗುವ ದುರಂತವೂ ಇದೆ. ಹೀಗೆ ವ್ಯವಸ್ಥೆಯಲ್ಲಿನ ದುರಂತ ಮತ್ತು ಅದನ್ನು ಎದುರಿನಿಲ್ಲುವ ಜೀವಕಲೆ ಇವೆರಡರ ಸಂಘರ್ಷವನ್ನು ಪ್ರತಿಮೆಗಳ ಮೂಲಕ ಕವಿತೆಯಿಂದ ಕವಿತೆಗೆ ಬೆಸೆಯುತ್ತಾ ಹೋಗುವ ನಾಗರಾಜ್ 'ಕಡಗೋಲು' ಪ್ರತಿಮೆಯ ಮುಖಾಂತರ ಇಂಥ ಸಂಘರ್ಷದ ಮಂಥನದಲ್ಲಿ ತೊಡಗುತ್ತಾರೆ.

> ಮೋಡಗಟ್ಟಿ ಮಳೆ ಸುರಿಯಬೇಕು
> ದಾಹ ಇಂಗಿ ಮತ್ತೆ ನಗುವರಳಬೇಕು (ಕಡಗೋಲು)

ಎಂದು ಬದುಕಿನ ಭರವಸೆಯನ್ನು ಎದುರು ನೋಡುತ್ತಾ 'ಜೀವಸೆಲೆಗಿಲ್ಲಿ ನೆಲ ಬಂಜರಲ್ಲ' ಎಂಬ ಸರಿಯಾದ ಗ್ರಹಿಕೆಯಲ್ಲಿ ಇರುವ ಈ ಕವಿ ಬದುಕಿನ ನಿರಾಶೆಯನ್ನು ಮೆಟ್ಟುವ ನಿಲುವನ್ನು ತೋರುತ್ತಾರೆ. ಆದ್ದರಿಂದಲೆ 'ಪ್ರೀತಿ ಹನಿಸಿದ್ದಕ್ಕೆ', 'ಪ್ರಣಯ ಕುದುರಿದ್ದಕ್ಕೆ' 'ಒಂಟಿ ಸುಖಿಸಿ ಖಿನ್ನನಾಗಿದ್ದಕ್ಕೆ' 'ಕಾವ್ಯ'-ಕನಸು-ನನಸು (ಕಾವ್ಯ ಸೃಷ್ಟಿ) ಆಗಿದೆ ಇಲ್ಲಿ. ಇಷ್ಟು ಮಾತುಗಳ ಮೂಲಕ ಇವು ಓದಬಹುದಾದ ಕವಿತೆಗಳು ಎಂಬುದನ್ನು ಮನವರಿಕೆ ಮಾಡುತ್ತಲೇ ಇವುಗಳ ಮಿತಿಯನ್ನು ಹೇಳಿದ್ದೇನೆ ಎಂಬುದು ನನ್ನ ಭಾವನೆ. ಮತ್ತೊಂದು ಮಾತು ಹೇಳುವುದಾದರೆ 'ಪ್ರತಿಮೆಗಳ ಭಾರ' ಕಾವ್ಯ ಸಂವೇದನೆಯನ್ನು ಕಡಿಮೆ ಮಾಡಬಲ್ಲುದೆಂಬ ಎಚ್ಚರಿಕೆ ಹೊಸ ಮಾತೇನಲ್ಲ ಎಂಬುದರ ಅರಿವು ಕವಿಗಿರುವುದು ಒಳ್ಳೆಯದು.

ಗೋವಿನಹೆಜ್ಜೆ : ಚಿಂತಾಮಣಿ ಕೊಡ್ಲೆಕೆರೆ

'ಈ ಜಗತ್ತು' ಭೂಮಧ್ಯ ರೇಖೆಗಳ ಮೂಲಕ ತನ್ನೊಳಗಿನ ಕವಿಯ ಅಸ್ತಿತ್ವವನ್ನು ಗುರ್ತಿಸಿಕೊಳ್ಳಲು ಪ್ರಯತ್ನಿಸಿದ್ದ ಚಿಂತಾಮಣಿ ಕೊಡ್ಲೆಕೆರೆಯವರ ಮೂರನೆ ಕವನಸಂಕಲನ 'ಗೋವಿನ ಹೆಜ್ಜೆ'.

"ಈಗ ನನ್ನ ಜನಾಂಗದ ಜನರು ಹೇಗೆ ಬರೆಯಬೇಕು ? ಹಾಗೆ ನಾಲ್ಕು ಜನ ಕುಳಿತು ನಿರ್ಧಾರ ಮಾಡಿ ಅದರಂತೆ ಬರೆಯುತ್ತ ಹೋಗುವುದು ಸಾಧ್ಯವೆ ? ಅಂಥದರ ಕುರಿತು ಅನುಮಾನವಿರುವ ನಾನು ನನ್ನ ದಾರಿಯನ್ನು ಹುಡುಕಿಕೊಳ್ಳಬೇಕು" ಎಂದು

ತಮ್ಮ ಕಾವ್ಯ ಸೃಷ್ಟಿಯ ಲಯಬದ್ಧ ಕುಣಿತವನ್ನು ಹೇಳುವ ಚಿಂತಾಮಣಿಯವರು ಕಾವ್ಯ ಸೃಷ್ಟಿಯಲ್ಲಿ ಒಂದು ಬಗೆಯ ವಿಶೇಷವಾದ ಸ್ವಾತಂತ್ರ್ಯವನ್ನು ವಹಿಸುತ್ತಿದ್ದೇನೆ ಎಂಬ ಧೋರಣೆಯನ್ನು ಕಾವ್ಯ ರಚನೆಯ ಮುಖಾಂತರವೇ ಸ್ಪಷ್ಟಪಡಿಸಿದ್ದಾರೆ. 'ಆಕಾಶ ಮತ್ತು ಹಕ್ಕಿಯ ಆಟ'ದಂತೆ ಕವಿತೆಯನ್ನು ಓದುವ ಕ್ಷಣಗಳವ್ರೋ ಮುದಗೊಳಿಸ ಬಲ್ಲಂಥಾ ಕವಿತೆಗಳು ಇವು. ಇಲ್ಲಿನ ಬಹಳಷ್ಟು ಕವಿತೆಗಳು

"ಇದು ಆಗಸ, ಆಗಸಲೋಕ, ಇಲ್ಲಿ ಮೋಡಗಳಾಟ ಓಟ
ಮೋಡಗಳು ಇದರ ಮೂಡುಗಳು, ಭಾವನೆಯ ಏರಿಳಿತಗಳು, ಕುಣಿತ
(ಮೊಡಗಳಾಟ)

ಎಂಬಂಥ ಭಾವದಲ್ಲೇ ನಮ್ಮನ್ನು ಮುಟ್ಟಬಲ್ಲವು. ಆದ್ದರಿಂದ ಇಲ್ಲಿನ ಕಾವ್ಯ ಪಂಜರ ದೊಳಗಿನ ಹುಲಿಯ ಹೆಸರಾದರೆ, ಕವಿ ಆ ಹುಲಿಗೆ ಸಮರ್ಥವಾದ ಹೆಸರಿಡಲಾಗದ ಸರ್ಕಸ್ಸು ಮಂಡಳಿಯಾಗಿದ್ದಾನೆ. ಕವಿಗೆ ತನ್ನ ಕಾವ್ಯವನ್ನು ಯಾವುದೊ ಹೆಸರಿನಿಂದ ಕರೆದರೂ ಆ ಹೆಸರಿಗೆ ಒಂದು ಮಿತಿ ಇರುವುದರಿಂದ

'ಅದಕ್ಕೆ ಹೆಸರುಗಳನ್ನು ಹೇಳಿ ಸುಸ್ತಾಗಿದೆ
ಅದನ್ನೀಗ ಹೊರಕ್ಕ ಬಿಟ್ಟರೆ
ನಮ್ಮ ಶಬ್ಧಗಳನ್ನು
ಭಾಷೆಗಳನ್ನು
ಶಬ್ದಕೋಶಗಳನ್ನು

ಒಂದೇ ಉಸಿರಿನಲ್ಲಿ ತಿಂದು ಬಿಡುವುದು (ಹುಲಿಗೊಂದು ಹೆಸರು)

ಇಲ್ಲಿ ಕಾವ್ಯ ಸೃಷ್ಟಿಯ ಕ್ರಿಯೆ ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವ ಕ್ರಿಯೆಯಯೇ ಉಳಿದುಬಿಡುವಂತಾಗುವುದನ್ನು ಕಾಣಿಸುತ್ತಾರೆ. ಅದೂ "ಕನಸಲ್ಲಾದರೂ ಗಂಟೆ ಕಟ್ಟಿದ ಇಲಿಗೆ ಗೆಲುವೋ ಸೋಲೋ ?" (ಬೆಕ್ಕಿನ ಕೊರಳಿಗೆ ಗಂಟೆ) ಎನ್ನುವಾಗ ಕಾವ್ಯ ಕೃಷಿಯ ಗೊಂದಲಗಳನ್ನೇ ಕವಿ ಮತ್ತೆ ಮತ್ತೆ ಸ್ಪಷ್ಟಪಡಿಸುತ್ತಿದ್ದಾನೆ ಎನಿಸುತ್ತದೆ. ಆದಕ್ಕಾಗಿಯೇ ಗಾಳಿ, ನೀರು, ಬೆಳಕು, ಕತ್ತಲೆ, ಗ್ರಹ, ನಕ್ಷತ್ರ, ನೀಹಾರಿಕೆಗಳನ್ನು ತಿಂದೂ 'ಸಾಲದು' ಎನ್ನುವ ಕವಿತೆಗಳಿಗೆ 'ಎಲಾ ಕವಿತೆಗಳೇ ಇನ್ನೇನು ತಿನ್ನುವಿರಿ !' 'ಸಾಲದು ಕವಿ 'ಬೆಕ್ಕಸ ಬೆರಗಾಗಿ' (ಕವಿತೆಗಳ ಹಸಿವು) ಕೇಳುತ್ತಾನೆ. ಕವಿತೆಗಳು ನಿನ್ನನ್ನು' 'ನಂತರ ಉಳಿದ ಕವಿಗಳನ್ನು ತಿಂದುಬಿಡುವೆವು' ಎಂದಾಗ ಕವಿಗಳೆಲ್ಲರೂ ಕೋಣೆಯೊಳಗೆ ಸೇರುತ್ತಾರೆ.

'ಹೊರಗಡೆ ಕವಿತೆಗಳು
ಹಸಿವು ಹಸಿವು' ಎಂದು
ಬಾಗಿಲು ಬಡಿಯುತ್ತಿವೆ (ಕವಿತೆಗಳ ಹಸಿವು)

ಹೀಗೆ ಸಮಕಾಲೀನ ಸಾಹಿತ್ಯ ಸಂದರ್ಭದ ಒತ್ತಡಗಳ ದ್ವಂದ್ವವನ್ನು ಹೇಳುವ ಈ ಕವಿ 'ಕದ ತೆರೆದಾಗ' ಈ ಕವಿತೆಗಳು ಸಹೃದಯನಲ್ಲಿ ಆಟವಾಡುವ, ಜಗಿದಾಡುವ, ಸವಾರಿ ಮಾಡುವ ಪ್ರಕ್ರಿಯೆಯನ್ನು ಹೇಳುತ್ತಾರೆ. ಇಲ್ಲಿ ಕವಿತೆಗಳನ್ನು ಓದುವಾಗ ಕಥನ ಕವನಗಳಂತೆನಿಸಿದರೂ ಕಥನ ಕವನಗಳಲ್ಲ. ಮತ್ತು ಇಲ್ಲಿನ ಯಾವುದೇ ಒಂದು ಕವಿತೆ ಯಾವುದೇ ಒಂದು ಚಿಂತನಾ ಕ್ರಮವಾಗಿ ರೂಪುಗೊಂಡಿದ್ದಲ್ಲ. ಪ್ರತಿಯೊಂದು ಕವಿತೆಯೂ ಸರಳವಾಗಿ ಓದಿಸಿಕೊಳ್ಳುತ್ತಾ ಪ್ರತಿಮೆಗಳ ಬೆನ್ನು ಹತ್ತುವುದನ್ನೇ ತನ್ನ ಮುಖ್ಯ ಉದ್ದೇಶ ಮಾಡಿಕೊಂಡಂತೆ ಕಾಣುತ್ತದೆ. ಆದ್ದರಿಂದ ಇಲ್ಲಿನ ಕವಿತೆಗಳು ಮುನ್ನುಡಿಯಲ್ಲಿ ಕೆ. ಸತ್ಯನಾರಾಯಣ ಹೇಳುವಂತೆ "ಅರ್ಥದ ದೃಷ್ಟಿಯಿಂದ ಸಂದಿಗ್ಧ ವಾದವು". ಈ ಕಾರಣದಿಂದಾಗಿ ಈ ಸಂಗ್ರಹದ ಕವಿತೆಗಳು 'ಅತಿನವ್ಯ' ಗುಣಗಳನ್ನು ಮಾತ್ರ ಪ್ರಕಟಿಸಬಲ್ಲವು. ಪುಟಿವ ಕಾರಂಜಿಯಂತೆ ಕವಿತೆಗಳನ್ನು ಸೃಷ್ಟಿಸುವ ಗುಣವುಳ್ಳ ಚಿಂತಾಮಣಿ ಕೊಡ್ಲೆಕೆರೆಯವರು ಈ ಕುರಿತು ಯೋಚಿಸಬೇಕು ಎನಿಸುತ್ತದೆ.

ಸಂಚಯದ ಸುದ್ದಿ

- **'ಡ್ರೀಮರ್' ಬಿಡುಗಡೆ :** ಸಂಚಯದ ಸಂಪಾದಕರಾದ ಡಿ. ವಿ. ಪ್ರಹ್ಲಾದ್ ಅವರ ಕವನ ಸಂಕಲನದ ಬಿಡುಗಡೆ ಸಮಾರಂಭವು ಆಗಸ್ಟ್ 12ರ ಶನಿವಾರ ಬೆಂಗಳೂರಿನ ಗಾಂಧಿ ಸಾಹಿತ್ಯ ಸಂಘದಲ್ಲಿ ನಡೆಯಿತು. ಹೆಚ್. ಎಸ್. ಶಿವಪ್ರಕಾಶ್ ಪುಸ್ತಕ ಬಿಡುಗಡೆ ಮಾಡಿದರೆ, ಎ. ಆರ್. ನಾಗಭೂಷಣ ಪುಸ್ತಕ ಕುರಿತು ಮಾತನಾಡಿದರು.

- **'ಕುವೆಂಪು ನೆಮನ' :** ಕ್ರೈಸ್ಟ್ ಕಾಲೇಜ್ ಕನ್ನಡ ಸಂಘವು ಇತರ ಸಾಹಿತ್ಯ ಪತ್ರಿಕೆಗಳ ಜೊತೆಗೂಡಿ ಪ್ರತಿ ತಿಂಗಳು ಕುವೆಂಪು ಕುರಿತ ಉಪನ್ಯಾಸ ಕಾರ್ಯಕ್ರಮ ನಡೆಸುತ್ತಿದೆ. ಸಂಚಯವು ಸೆಪ್ಟೆಂಬರ್ 10 ರಂದು 'ಹೊಸ ಕಣ್ಣುಗಳಲ್ಲಿ ಕುವೆಂಪು' ಕಾರ್ಯಕ್ರಮವನ್ನು ಬೆಂಗಳೂರಿನ ಕೆನ್ ಕಲಾ ಶಾಲೆಯಲ್ಲಿ ನಡೆಸಿತು. ಡಾ॥ ರಾಮಚಂದ್ರದೇವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕೆ. ಸಿ. ಶಿವಾರೆಡ್ಡಿ, ಎಸ್. ಸುಗತ, ಆರ್. ಚಲಪತಿ, ಜೆ. ಎಸ್. ಉಷಾ ಕುವೆಂಪು ಸಾಹಿತ್ಯ ಕುರಿತ ತಮ್ಮ ವಿಚಾರಗಳನ್ನ ಮಂಡಿಸಿದರು.

ಈ ಸಂಚಯದ ಲೇಖಕರು

* ಡಾ॥ ಬಿ. ಸಿ. ರಾಮಚಂದ್ರಶರ್ಮ, 222, 'ಪರಾಶರ' 39ನೇ ಕ್ರಾಸ್, 5ನೇ ಬ್ಲಾಕ್ ಜಯನಗರ, ಬೆಂಗಳೂರು–560 041
* ಹೆಚ್. ಎಸ್. ಶಿವಪ್ರಕಾಶ್, 729, 9ನೇ 'ಎ' ಮುಖ್ಯರಸ್ತೆ, 4ನೇ ಕ್ರಾಸ್, ಆರ್.ಪಿ.ಸಿ. ಬಡಾವಣೆ ವಿಜಯನಗರ II ಹಂತ, ಬೆಂಗಳೂರು–560 040
* ಚಿಂತಾಮಣಿ ಕೊಡ್ಲೆಕೆರೆ, C–2/2 WMS ಕಾಂಪೌಂಡ್, ಜಯನಗರ 5ನೇ ಬ್ಲಾಕ್, ಬೆಂಗಳೂರು–560 041
* ಸಂದೀಪ್ ನಾಯಕ್, ಗೋಖಲೆ ಸೆಂಟಿನರಿ ಕಾಲೇಜು ಬಳಿ ಅಂಚೆ; ವಂದಿಗೆ ಅಂಕೋಲ–581057 ಉತ್ತರಕನ್ನಡ
* ಸುಧಾಶರ್ಮ ಚವತ್ತಿ, 'ಸಂಯುಕ್ತ ಕರ್ನಾಟಕ' ಪತ್ರಿಕೆ, ರೆಸಿಡೆನ್ಸಿ ರಸ್ತೆ, ಬೆಂಗಳೂರು–660 C01
* ಆರ್. ಎ. ಶಾಂತರಾಜ್, 24/24 ಕೃಷ್ಣಪ್ಪ ಸ್ಟೋರ್ಸ್, ಮುನಿಯಲ್ಲಪ್ಪ ಬಿಲ್ಡಿಂಗ್, ಬಿಳೇಕಹಳ್ಳಿ ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 076
* ಎಸ್. ಸಂಧ್ಯಾ, C/o ಹೆಚ್. ಎಸ್. ಶಿವಪ್ರಕಾಶ್
* ಚಲಪತಿ ಆರ್., ಅಧ್ಯಾಪಕ, ಶೇಷಾದ್ರಿಪುರಂ ಕಾಲೇಜು, ಯಲಹಂಕ
* ಮಹಾಬಲಮೂರ್ತಿ ಕೊಡ್ಲೆಕೆರೆ 206 ರಮ್ಯಾ ದಾಸಪ್ಪ ಛತ್ರದ ಎದುರು ಗವೀಪುರಂ ಪಶ್ಚಿಮ ಬೆಂಗಳೂರು-19.
* ಹೆಚ್. ಎಸ್. ರಾಘವೇಂದ್ರರಾವ್, ನ್ಯಾಷನಲ್ ಕಾಲೇಜ್ ಜಯನಗರ, ಬೆಂಗಳೂರು.

ಈ ಸಂಚಯದಲ್ಲಿ....

SANCHAYA 24/D 17th Main Muneshwara Block G.E.F. Post
Bangalore-560 026 Karnstaka.